# ಮುನ್ನುಡಿ

ಹಿಂದೂ ಧರ್ಮವು ಕರ್ಮಫಲ ಹಾಗೂ ಪುನರ್ಜನ್ಮ ತಳಹದಿಯ ನಂಬಿಕೆಯ ಮೇಲೆ ನಿಂತಿದೆ. ಪಕ್ವವಾದ ಹಣ್ಣು ಕಳಚಿ ಬೀಳುವಂತೆ  ಮುಪ್ಪಿನಿಂದಲೋ ಅಥವಾ ರೋಗದಿಂದಲೋ ಕೃಶವಾಗಿ ತನ್ನ ಶರೀರವನ್ನು ಬಿಟ್ಟು, ಸೂಕ್ಷ್ಮ ಶರೀರವನ್ನು ಹೊಂದಿ, ತನ್ನ ಮುಂದಿನ ಪ್ರಯಾಣವನ್ನು ಪ್ರಾರಂಭಿಸುವನು. ಗರುಡಪುರಾಣ ಮತ್ತು ಆತ್ಮಪುರಾಣಗಳಲ್ಲಿ ಮರಣದ ಸಮಯದಲ್ಲಿ ೭೨,೦೦೦ ಚೇಳುಗಳು ಕಚ್ಚಿದಷ್ಟು ನೋವುಂಟಾಗುವುದೆಂದು  ಬಣ್ಣಿಸಿದರೂ ಅದು ಜೀವಿಯನ್ನು ಜೀವಿತ ಕಾಲದಲ್ಲಿ ಸನ್ಮಾರ್ಗದಲ್ಲಿ ನಡೆಸಲು ಹಾಗೂ ಶಾಸ್ತ್ರದಲ್ಲಿ ನಂಬುಗೆಯನ್ನುಂಟುಮಾಡಲು ಪ್ರೇರೇಪಿಸುವ ವಿಧಾನವೆಂದು ತಿಳಿಯಬೇಕು. ಜ್ಞಾನಿಗಳಾದವರು ಮರಣವನ್ನು ಈ ದೇಹದಿಂದ ಜೀವಿಯ ಬಿಡುಗಡೆಯೆಂದು ಭಾವಿಸಿ ಮರಣಾನಂದವನ್ನು ಹೊಂದುವರೆಂದು ಹೇಳಲಾಗಿದೆ.

ಬೃಹದಾರಣ್ಯಕ ಉಪನಿಷತ್ತಿನ ಖಿಲಕಾಂಡದ ಆರನೇ ಅಧ್ಯಾಯದ ಎರಡನೇ ಬ್ರಾಹ್ಮಣದಲ್ಲಿ ಪ್ರಾಣವು ಶರೀರವನ್ನು ಬಿಟ್ಟಮೇಲೆ ಮೃತರು ಬೇರೆ ಬೇರೆ ಮಾರ್ಗಗಳಲ್ಲಿ ಹೇಗೆ ಹೋಗುತ್ತಾರೆಂಬ ಬಗ್ಗೆ ಪ್ರಸ್ತಾಪವಿದೆ. ಇದು ಪ್ರವಾಹಣರಾಜನು ಗೌತಮರಿಗೆ ಕೊಟ್ಟ ಉಪದೇಶ ರೂಪದಲ್ಲಿದೆ. ಈ ಕೆಳಗೆ ಕಾಣಿಸಿರುವ ಭಾಗಗಳನ್ನು ನೋಡಿ.

***......ತಾನ್ ವೈದ್ಯುತಾನ್ ಪುರುಷೋಮಾನಸ ಏತ್ಯ ಬ್ರಹ್ಮಲೋಕಾನ್ ಗಮಯತಿ;***
*ತೇ ತೇಷು ಬ್ರಹ್ಮಲೋಕೇಷು ಪರಾಃ ಪರಾವತೋ ವಸಂತಿ; ತೇಷಾಂ ನ ಪುನರಾವೃತ್ತಿ ॥೧೫॥*
*ಅಥಯೇ ಯಜ್ಞೇನ ದಾನೇನ ತಪಸಾ ಲೋಕಾನ್ ಜಯಂತಿ ತೇ*
*ಧೂಮಮಭಿಸಂಭವಂತಿ, ಧೂಮಾದ್ರಾತ್ರಿಮ್, ರಾತ್ರೇರಪಕ್ಷೀಯ ಮಾಣಪಕ್ಷಮ್,*
*ಅಪಕ್ಷೀಯ ಮಾಣಪಕ್ಷಾಧ್ಯಾನ್ ಷಣ್ಮಾಸಾನ್ ದಕ್ಷಿಣಾದಿತ್ಯ ವತಿ, ಮಾಸೇಭ್ಯಃ*
*ಪಿತೃಲೋಕಮ್; ಪಿತೃಲೋಕಾಚ್ಚಂದ್ರಮ್; ತೇ ಚಂದ್ರಂ ಪ್ರಾಪ್ಯಾನ್ನಂ ಭವಂತಿ,.....*
***.......ಅಥ ಯ ಏತಾ ಪಂಥಾನೌ ನ ವಿದುಸ್ತೇ ಕೀಟಾಃ ಪತಂಗಾ ಯದಿದಂ ದಂದಶೂಕಮ್ ॥೧೬॥***

ಪಂಚಾಗ್ನಿ ವಿದ್ಯೆಯನ್ನು ಅರಿತುಕೊಂಡ ಗೃಹಸ್ಥರೂ, ಶ್ರದ್ಧೆಯಿಂದ ಹಿರಣ್ಯಗರ್ಭನನ್ನು ಉಪಾಸಿಸುವ ವಾನಪ್ರಸ್ಥರೂ ಮತ್ತು ಪರಿವ್ರಾಜಕರೂ ಬ್ರಹ್ಮಲೋಕಕ್ಕೆ ಹೋಗುತ್ತಾರೆಂದೂ, ಅವರಿಗೆ ಪುನರಾವೃತ್ತಿ ಇಲ್ಲವೆಂದೂ ತಿಳಿಯುತ್ತದೆ. ಇದನ್ನು ದೇವಯಾನ ಅಥವಾ ಉತ್ತರಮಾರ್ಗವೆನ್ನಲಾಗಿದೆ.

ಯಜ್ಞ, ದಾನ, ತಪಸ್ಸುಗಳನ್ನು ಮಾಡುವವರು ಪಿತೃಯಾನದ ಮೂಲಕ ಚಂದ್ರನನ್ನು ಸೇರುತ್ತಾರೆ. ಇವರು ಉತ್ತರಮಾರ್ಗಕ್ಕೆ ಹೋಗುವವರೆಗೆ ಅಥವಾ ಸದ್ಯೋ ಮುಕ್ತಿಯನ್ನು ಹೊಂದುವವರೆಗೆ ಸಂಸಾರದಲ್ಲಿ ಚಕ್ರದಂತೆ ಸುತ್ತುತ್ತಿರುತ್ತಾರೆ ಎನ್ನಲಾಗಿದೆ.

ಈ ಎರಡೂ ಮಾರ್ಗಗಳನ್ನು ಅರಿಯದವರು ಕೀಟ ಪತಂಗಗಳಾಗಿ ಹುಟ್ಟುತ್ತಾರೆನ್ನಲಾಗಿದೆ.

ಚಂದ್ರಲೋಕವನ್ನು ಸೇರಿದ ಜೀವನು, ಕರ್ಮಫಲವು ಮುಗಿದ ನಂತರ ಅಲ್ಲಿಂದ ಈ ಲೋಕಕ್ಕೆ ಹೊಸಕರ್ಮಗಳನ್ನು ಮಾಡಲು ಹಿಂತಿರುಗುತ್ತಾನೆ. ಅಕ್ಕಸಾಲಿಗನು ಚಿನ್ನದಿಂದ ಹೊಸ ವಸ್ತುಗಳನ್ನು ರೂಪಿಸುವಂತೆ ಜೀವನು ತನ್ನ ಕರ್ಮಕ್ಕೆ ಅನುಗುಣವಾಗಿ ಮತ್ತೊಂದು ಶರೀರವನ್ನು ಧರಿಸುತ್ತಾನೆ. ಆಗ ಇವನನ್ನು ಹಿಂದಿನ ಕರ್ಮಾನುಭವದ ವಾಸನೆ ಅನುಸರಿಸುತ್ತದೆ.

ಮಹಾಭಾರತದ ಒಂದು ಕಥೆಯಂತೆ ದಾನಶೂರನಾದ ಕರ್ಣನಿಗೆ ವೀರಸ್ವರ್ಗವು ಪ್ರಾಪ್ತವಾಗಿ ಅವನು ಸ್ವರ್ಗಕ್ಕೆ ಹೋದಾಗ ಅವನಿಗೆ ಅಲ್ಲಿ ಅಭೂತಪೂರ್ವ ಸ್ವಾಗತ ಸಿದ್ಧವಿತ್ತು. ಸುಖವನ್ನು ಅನುಭವಿಸಲು ಬೇಕಾದ ಎಲ್ಲಾ ಸಾಧನಗಳಿತ್ತು. ಆದರೆ ಆತನಿಗೆ ಅಲ್ಲಿ ತನ್ನ ಹಸಿವೆಯನ್ನು ನಿವಾರಿಸಿಕೊಳ್ಳಲು ಆಹಾರವಿರಲಿಲ್ಲ. ಅದನ್ನು ಕೇಳಿದಾಗ ಆತನ ಮುಂದೆ ಚಿನ್ನ, ವಜ್ರ, ವೈಢೂರ್ಯಗಳಿರುವ ಒಂದು ತಟ್ಟೆಯನ್ನು ತಂದಿಡಲಾಯಿತು. ಏಕೆಂದರೆ ಕರ್ಣನು ಅವನ ಜೀವಿತ ಕಾಲದಲ್ಲಿ ಶ್ರಾದ್ಧವನ್ನಾಗಲಿ ಅಥವಾ ಅನ್ನದಾನವನ್ನಾಗಲಿ ಮಾಡಿರಲಿಲ್ಲ. ಯಾವಾಗಲೂ ಧನಕನಕ ವಸ್ತುಗಳನ್ನೇ ದಾನವಾಗಿ ಕೊಟ್ಟಿದ್ದ. ಇದರಿಂದ ಈಗ ಅವನಿಗೆ ಆಹಾರವು ದೊರೆಯದಾಗಿತ್ತು. ಈ ಕೊರತೆಯನ್ನು ನಿವಾರಿಸಿಕೊಳ್ಳಲು ಕರ್ಣನು ಇಂದ್ರನ ಅಪ್ಪಣೆಯನ್ನು ಪಡೆದು ಮತ್ತೆ ಭೂಲೋಕಕ್ಕೆ

ಭಾದ್ರಪದ ಶುಕ್ಲ ಹುಣ್ಣಿಮೆಯಂದು ಬಂದು ಅಮಾವಾಸ್ಯೆಯವರೆಗೆ ಅವಶ್ಯಕತೆ ಇದ್ದ ಎಲ್ಲ ಮಾನವರಿಗೂ, ಪ್ರಾಣಿಗಳಿಗೂ, ಜಂತುಗಳಿಗೂ ಅನ್ನ ಆಹಾರವನ್ನೂ, ನೀರನ್ನೂ ದಾನಮಾಡಿ ಹಿಂತಿರುಗಲು ಅವನಿಗೆ ಸ್ವರ್ಗದಲ್ಲಿ ಯತೇಚ್ಛವಾಗಿ ಆಹಾರವು ದೊರೆಯಿತು. ಈ ಕಾಲವನ್ನು ಪಿತೃಪಕ್ಷವೆಂದು ಕರೆಯಲಾಗಿದೆ. ಈ ಕಾಲದಲ್ಲಿ ಪ್ರತಿದಿನ ಗತಿಸಿದ ಪಿತೃಗಳಿಗೆ, ಬಾಂಧವರಿಗೆ ಪಿತೃಕಾರ್ಯವನ್ನು ಮಾಡುವ ಪದ್ಧತಿಯಿದ್ದರೂ ಮಹಾಲಯ ಅಮಾವಾಸ್ಯೆಯಂದು ತಪ್ಪದೆ ತನ್ನ ಪಿತೃಗಳು ಹಾಗೂ ಪೂರ್ವಜರಲ್ಲದೆ ತನಗೆ ಜೀವನದಲ್ಲಿ ನೆರವಾದವರನ್ನೂ, ತರ್ಪಣ ಶ್ರಾದ್ಧಾದಿಗಳಿಂದ ವಂಚಿತರಾಗಿರಬಹುದಾದವರು ಮುಂತಾದವರನ್ನೂ ನೆನೆಪಿಸಿಕೊಂಡು ಅವರಿಗೆ ಕೃತಜ್ಞತಾಪೂರ್ವಕವಾಗಿ ತರ್ಪಣಾದಿಗಳನ್ನು ಮಾಡುವ ಅನುಕರಣೀಯ ಪದ್ಧತಿ ಬಂದಿದೆ. ಹೀಗೆ ಮಾಡುವುದರಿಂದ ಅವರ ಅನುಗ್ರಹ, ಆಶೀರ್ವಾದಗಳು ಲಭಿಸಿ ಶ್ರೇಯಸ್ಸುಂಟಾಗುವುದು. ಇದು ಮಹಾಲಯದ ಹಿರಿಮೆ.

ಹೀಗೆ ಪುನರ್ಜನ್ಮವನ್ನು ಪಡೆಯುವ ಉತ್ತಮ ಜೀವಿಯೇ ತಮ್ಮ ವಂಶದಲ್ಲಿ ಜನಿಸಿ ಉತ್ತಮ ಜೀವನವನ್ನು ನಡೆಸಬೇಕೆಂದು ಅಪೇಕ್ಷಿಸುವವರು ಕೆಲವು ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಇವುಗಳನ್ನು ಅನೇಕ ಸ್ಮೃತಿ ಹಾಗೂ ಗೃಹ್ಯಸೂತ್ರಗಳಲ್ಲಿ ಸೂಚಿಸಲಾಗಿದೆ. ಮನುಸ್ಮೃತಿಯಲ್ಲಿ ೧೨ ಸಂಸ್ಕಾರಗಳನ್ನು ಹೇಳಿದ್ದರೂ ಗೌತಮಸ್ಮೃತಿಯಲ್ಲಿ ೪೦ ಸಂಸ್ಕಾರಗಳನ್ನು ಸೂಚಿಸಲಾಗಿದೆ. ಆದರೆ ಈಗ ಇವುಗಳಲ್ಲಿ ಹದಿನಾರು ಸಂಸ್ಕಾರಗಳು ಮುಖ್ಯವಾದವುಗಳೆಂದು ಒಮ್ಮತ ಮೂಡಿದೆ. ಅವೆಂದರೆ :-

**ಅ) ಜನ್ಮಪೂರ್ವ ಸಂಸ್ಕಾರಗಳು** – (೧) ಗರ್ಭಾದಾನ (೨) ಪುಂಸವನ (೩) ಸೀಮಂತ

**ಆ) ಬಾಲ್ಯಾವಸ್ಥೆಯ ಸಂಸ್ಕಾರಗಳು** – (೪) ಜಾತಕರ್ಮ (೫) ನಾಮಕರಣ (೬) ನಿಷ್ಕ್ರಾಮ (೭) ಅನ್ನಪ್ರಾಶನ (೮) ಚೌಲ (೯) ಕರ್ಣವೇಧ

**ಇ) ವಿದ್ಯಾಭ್ಯಾಸದ ಸಂಸ್ಕಾರಗಳು** – (೧೦) ವಿದ್ಯಾರಂಭ (೧೧) ಉಪನಯನ (೧೨) ವೇದಾರಂಭ (೧೩) ಕೇಶಾಂತ (೧೪) ಸಮಾವರ್ತನ

**ಈ) ಮದುವೆಯ ಸಂಸ್ಕಾರಗಳು –** (೧೫) ವಿವಾಹ

**ಉ) ಮರಣ ನಂತರದ ಸಂಸ್ಕಾರಗಳು –** (೧೬) ಅಂತ್ಯೇಷ್ಟಿ

ಈ ಮೇಲ್ಕಂಡ ಸಂಸ್ಕಾರಗಳು ಹುಟ್ಟಿನ ಪೂರ್ವದ ಸಂಕಲ್ಪದಿಂದ ಪ್ರಾರಂಭವಾಗಿ ಸಾವಿನ ನಂತರದವರೆಗೂ ಸಾಗುತ್ತದೆ. ಒಬ್ಬ ರೈತ ಒಳ್ಳೆಯ ಬೆಳೆಯನ್ನು ಬೆಳೆಯಲು ಭೂಮಿಯನ್ನು ಸಂಸ್ಕರಿಸುವಂತೆ ಒಳ್ಳೆಯ ಸಂತತಿಯನ್ನು ಪಡೆಯಲು "ಗರ್ಭಾದಾನ" ಮೊದಲನೆಯ ಸಂಸ್ಕಾರ. ಇದು ಅಗ್ನಿಯೇ ಮೊದಲಾದ ದೇವತೆಗಳಲ್ಲಿ ಮೊರೆಹೋಗಿ ಉತ್ತಮ ಸಂತತಿಯನ್ನು ಬೇಡುವುದಾಗಿದೆ. ಬೃಹದಾರಣ್ಯಕ ಉಪನಿಷತ್ತಿನಲ್ಲಿ "ಪುತ್ರಮಂಥನ"ವೆಂಬ ಸಂಸ್ಕಾರವನ್ನು ಯೋಗ್ಯ ಸಂತತಿಯನ್ನು ಪಡೆಯಲು ಉಲ್ಲೇಖಿಸಿರುವುದು ಗಮನಾರ್ಹ (೬–೪–೧೪). ಜನಿಸಿದ ಜೀವಿಗೆ ನಿಯಮಿತ ವೇಳೆಯಲ್ಲಿ ಸಂಸ್ಕಾರಗಳನ್ನು ನಡೆಸುತ್ತಾ ಹೋದಲ್ಲಿ ಆ ಜೀವಿಯು ಸತ್ಕರ್ಮದಲ್ಲಿ ತೊಡಗಿ ಉತ್ತಮ ಜೀವನವನ್ನು ನಡೆಸಿ ಮೋಕ್ಷಾರ್ತಿಯಾಗುವುದರಲ್ಲಿ ಸಂಶಯವಿಲ್ಲ. ಅದಕ್ಕೆ ಸಜ್ಜಾಗಲು ಜೀವನದ ಪ್ರತಿ ಹಂತದಲ್ಲಿಯೂ ಸಂಸ್ಕಾರ ಹಾಗೂ ಪ್ರಯತ್ನ ಮುಖ್ಯವೆನಿಸುತ್ತದೆ.

ಬೆಂಗಳೂರು

ತಾ॥ ೧೮–೦೯–೨೦೧೪

ಇತಿ ಸಜ್ಜನ ವಿಧೇಯ

**ಡಿ. ವಿ. ಅನಂತನಾರಾಯಣ**

ನಿವೃತ್ತ ವಿಭಾಗೀಯ ವ್ಯವಸ್ಥಾಪಕರು

ಎಲ್.ಐ.ಸಿ.

# ನಿವೇದನೆ

***ಜಿ. ವಿ. ಪ್ರಭಾಕರ ರಾವ್***

ಜಯನಾಮ ಸಂವತ್ಸರದ ಅನಂತ ಚತುರ್ದಶಿ ಹಬ್ಬವನ್ನು ಆಚರಿಸಲು ನನ್ನ ಹಿರಿಯ ಮಗ ಚಿ|| ವಿಠ್ಠಲ ಕೃಷ್ಣನ ಮನೆಗೆ ಹೋಗಿದ್ದೆವು. ನನ್ನ ಸಂಗಡ ನನ್ನ ಧರ್ಮಪತ್ನಿ ಸೌ|| ಶಾಂತಾಮಣಿ ಬಂದಿದ್ದಳು.

ನಮ್ಮ ಮನೆಯ ಎಲ್ಲಾ ಹಬ್ಬ ಹರಿದಿನಗಳೂ ಯಲಹಂಕ ಉಪನಗರದ ೧೧೬೬, ಈಶಾವಾಸ್ಯದಲ್ಲಿಯೇ ನೆರವೇರಿಸಲ್ಪಡುತ್ತದೆ. ಆದರೆ ಒಂದೆರೆಡು ಹಬ್ಬಗಳನ್ನು ಚಿರಂಜೀವಿಯ ನೂತನ ಗೃಹಗಳಲ್ಲಿ ಆಚರಿಸುತ್ತೇವೆ. ಪ್ರತಿ ಬಾರಿ ಹಿರಿಯ ಮಗನ ಮನೆಗೆ ಹೋದಾಗಲೂ ಏನಾದರೂ ಒಂದು ಹೊಸ ವಸ್ತುವನ್ನೋ ಇಲ್ಲವೇ ಪುಸ್ತಕವನ್ನೋ ಕೊಂಡಿರುತ್ತಾನೆ. ಈ ವರ್ಷದ ಖರೀದಿಯಲ್ಲಿ ಪ್ರೊ|| ಎಂ. ಎ. ಹೆಗಡೆಯವರ “ಹಿಂದೂ ಸಂಸ್ಕಾರಗಳು” ಎಂಬ ಅಪರೂಪದ ಪುಸ್ತಕವನ್ನು ಖರೀದಿಸಿದ್ದ. ಆ ಪುಸ್ತಕ ದರ್ಶನ ಮಾತ್ರದಿಂದಲೇ ಅದನ್ನು ಓದಬೇಕೆಂಬ ಮನಸ್ಸಾಯಿತು. ಅದೇ ದಿನ ಪೂಜಾನಂತರ ಆ ಪುಸ್ತಕವನ್ನು ಓದಲು ಪ್ರಾರಂಭ ಮಾಡಿದೆ ಮತ್ತು ಓದಿ ಮುಗಿಸಿದೆ. ಅದರಲ್ಲಿ ಎಲ್ಲಾ ಹದಿನಾರು ಸಂಸ್ಕಾರಗಳನ್ನೂ ವಿವರವಾಗಿ ನೀಡಲಾಗಿದೆ.

ಹದಿನಾರನೇ ಸಂಸ್ಕಾರವಾದ “ಅಂತ್ಯೇಷ್ಟಿ” ಸಂಸ್ಕಾರದ ವಿವರಗಳ ಬಗ್ಗೆ ಪೂಜ್ಯ ಭಾವನೆ ಮೂಡಿತು. ಅಷ್ಟನ್ನೇ ಒಂದು ಪುಸ್ತಕ ರೂಪದಲ್ಲಿ ತರುವ ಮನಸ್ಸಾಯಿತು. ಪುಸ್ತಕದ ಮೇಲಿದ್ದ ದೂರವಾಣಿ ಸಂಖ್ಯೆಗೆ ಕರೆ ಮಾಡಿದೆ. ಸುಲಭವಾಗಿ ದೂರಸಂಪರ್ಕ ಲಭಿಸಿತು. ಪಂಡಿತರು ಒಳ್ಳೆಯ ಮಾತುಗಳನ್ನಾಡಿದರು. ಅಂತ್ಯೇಷ್ಟಿ ವಿಷಯಗಳನ್ನು ಉಪಯೋಗಿಸಿಕೊಳ್ಳಲು ಅನುಮತಿ ನೀಡಿದರು ಮತ್ತು ಆಶೀರ್ವಚನವನ್ನು ಬೇಡಲು ಅದನ್ನು ಬರೆದು ಕಳುಹಿಸಿದರು.

ನನ್ನ ಕೆಲವು ಮಿತ್ರರನ್ನು ಸಂಪರ್ಕಿಸಿದೆ. ಪ್ರಕಾಶಕರನ್ನು ಭೇಟಿ ಮಾಡಿ ಮಹಾಲಯ ಅಮಾವಾಸ್ಯೆಯ ದಿನ “ಮಹಾಲಯದ ಮಹಿಮೆ” ಎಂಬ ಪುಸ್ತಕವನ್ನು ಪ್ರಕಟಿಸಲು ಸಾಧ್ಯವೇ ಎಂದು ಪ್ರಸ್ತಾಪಿಸಿದೆ. ಆದರೆ ವಿಷಯ ಸಂಗ್ರಹಣೆಗೆ ಸಮಯ ಸಾಲದಾಯಿತು. ಪೂರ್ವ ಸಂಸ್ಕಾರಗಳನ್ನು ಪರಿಚಯಿಸದೆ ಅಂತ್ಯೇಷ್ಟಿಗೆ ಪುರಸ್ಕಾರವಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಯಿತು.

ನನ್ನ ತೀರ್ಥರೂಪ ತಂದೆಯವರಾದ ದಿ|| ಜಿ. ವಿಠ್ಠಲಕೃಷ್ಣ ರಾಯರು ನನ್ನ ಮೊದಲ ಹುಟ್ಟುಹಬ್ಬದ ಸಂದರ್ಭದಲ್ಲಿ ನಮ್ಮ ತಾಯಿ

ದಿ|| ಸರೋಜಮ್ಮನವರ ಅಣ್ಣ ನೆಗವಾರದ ಶ್ರೀನಿವಾಸ ರಾಯರಿಗೆ ಬರೆದಿದ್ದ ಪತ್ರ ನನಗೆ ಸಿಕ್ಕಿತು. ಇಂತಹ ಅಪರೂಪದ ಕಾಗದವನ್ನು ರಕ್ಷಿಸುವ ಮತ್ತು ಪ್ರಕಟಿಸುವ ಮನಸ್ಸಾಯಿತಲ್ಲದೆ ಈ ಪ್ರಕಟಣೆಗೆ ಕಾರಣವಾಯಿತು. ನನ್ನ ತೀರ್ಥರೂಪ ತಂದೆಯವರು ತಮ್ಮ ಪತ್ರದಲ್ಲಿ ಶ್ರೇಯಸ್ಸು–ಪ್ರೇಯಸ್ಸು ಎಂಬ ಪದಗಳನ್ನು ಬಳಸಿದ್ದಾರೆ. ಈ ಪದಗಳ ಅರ್ಥವನ್ನು ಈ ಪ್ರಕಟಣೆಯ ಸಂದರ್ಭದಲ್ಲಿ ಅರಿತುಕೊಳ್ಳಲು ಪ್ರಯತ್ನಿಸಿದ್ದೇನೆ.

ಮನುಷ್ಯನು ಸಂಸ್ಕಾರಗಳಲ್ಲಿ ತೊಡಗಿಕೊಂಡು ದೇವ ಸಾನ್ನಿಧ್ಯವನ್ನು ಪಡೆಯುವ ಮಾರ್ಗವೇ ಸಂಸ್ಕಾರಗಳು. ಈ ಪುಸ್ತಕ ಪ್ರಕಟಣೆಗೆ ಅನೇಕ ರೀತಿಯಲ್ಲಿ ಸಹಕಾರವಿತ್ತು. ಅಕ್ಷರ ಜೋಡಣೆ ಮಾಡಿ ಪುಟಗಳನ್ನು ವ್ಯವಸ್ಥಿತವಾಗಿ ಕೂಡಿಸಿ ಪುಸ್ತಕಕ್ಕೆ ಒಂದು ರೂಪವನ್ನು ಕೊಟ್ಟು ಸಹಕರಿಸಿದ ಚಿ|| ಪಿ. ಎಸ್. ರಾಘವೇಂದ್ರನಿಗೆ ಆಶೀರ್ವಾದಗಳು ಮತ್ತು ಸೂಕ್ತ ಸಲಹೆಗಳನ್ನಿತ್ತು ಈ ಸಂಪುಟದ ಗೌರವವನ್ನು ಹೆಚ್ಚಿಸಿರುವ ಶ್ರೀ ಡಿ. ವಿ. ಪ್ರಭಾಕರರವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಈ ಪುಸ್ತಕವು ನನ್ನ ಚಿರಂಜೀವಿ ಜಿ.ಪಿ. ವಿನಯ್‌ಬಾಬುವಿನ ಸಹಕಾರವಿಲ್ಲದೆ ಸಾಕಾರಗೊಳ್ಳುತ್ತಿರಲಿಲ್ಲ. ಅವನಿಗೆ ಅನೇಕ ಆಶೀರ್ವಾದಗಳು.

ನಮ್ಮ ಪ್ರಾರ್ಥನೆಗೆ ಓಗೊಟ್ಟು, ನಮಗೆ ಲೇಖನಗಳನ್ನು ಕಳುಹಿಸಿರುವ ಡಾ|| ಪಿ. ಸತ್ಯನಾರಾಯಣ ಭಟ್ಟ, ಶ್ರೀ ಶ್ರುತಿಪ್ರಿಯ – ಸಂಪಾದಕರು 'ವೇದತರಂಗ', ಶ್ರೀಮತಿ ಮಂಜುಳಾ ಗೋಪಿನಾಥ್, ಶ್ರೀ ಕೆ. ಎಸ್. ವಿಜಯ್‌ಕುಮಾರ್, ಶ್ರೀ ಇ. ಡಿ. ನರಹರಿ, ಟಿ.ಎಸ್. ನಾಗರಾಜ ರಾವ್, ಶ್ರೀ ಎಂ.ಎರ್. ನಾಗರಾಜು, ಶ್ರೀ ಜಿ. ಶ್ರೀಧರ್ ಇವರಿಗೆ ನಮ್ಮ ಹೃದಯಪೂರ್ವಕ ಧನ್ಯವಾದಗಳು.

ನನಗೆ ಪುಸ್ತಕ ಮಾಡಲು ಪ್ರೋತ್ಸಾಹ ನೀಡಿದ ವಿದ್ವಾನ್ ಡಾ|| ಕೆ. ಜಿ. ಸುಬ್ರಾಯಶರ್ಮರಿಗೆ ಅನಂತ ವಂದನೆಗಳು. ಹಿಂದೂ ಸಂಸ್ಕಾರಗಳ ಮಹತ್ವವನ್ನು ಪುಸ್ತಕ ರೂಪದಲ್ಲಿ ಸಂಗ್ರಹಿಸಿ ಪ್ರಕಟಿಸಿರುವ ಪ್ರೊ|| ಎಂ. ವಿ. ಹೆಗಡೆ (ಶಿರಸಿಯ ಮಹಾತ್ಮಾ ಗಾಂಧಿ ಮಹಾವಿದ್ಯಾಲಯದ (ಸಂಸ್ಕೃತ) ನಿವೃತ್ತ ಪ್ರಾಂಶುಪಾಲರು) ಇವರಿಗೆ ಅನಂತಾನಂತ ವಂದನೆಗಳು. ಮುನ್ನುಡಿ ಬರೆದು ಸಹಕರಿಸಿದ ಶ್ರೀ ಡಿ. ವಿ. ಅನಂತನಾರಾಯಣ ಅವರಿಗೆ ನನ್ನ ಅನೇಕ ವಂದನೆಗಳು.

***ಲೇಖಕರು: "ಜೀವನಯಜ್ಞ" ಸಂಪಾದಕರು***

# ವಿಷಯಸೂಚಿ


| | | |
|---|---|---|
| ಮುನ್ನುಡಿ | .... | 1 |
| ನಿವೇದನೆ | .... | 5 |
| ದಿ|| ಶ್ರೀ ಜಿ ವಿಠಲಕೃಷ್ಣರಾಯರ ಜೀವನತತ್ವ | .... | 8 |
| ಸಂಸ್ಕಾರ ಸಂಸ್ಕೃತಿ | .... | 12 |
| ಭಾರತೀಯ ಸಂಸ್ಕಾರಗಳು | .... | 15 |
| ಕರ್ಣವೇಧ | .... | 32 |
| ಸಂಸ್ಕಾರಗಳು ಒಂದು ದರ್ಶನ | .... | 34 |
| ವ್ಯಕ್ತಿತ್ವ ವಿಕಾಸವೇ ಸಂಸ್ಕಾರ | .... | 35 |
| ಪಿತೃಯಜ್ಞದ ಮಹತ್ವ | .... | 36 |
| ಪಿತೃಗೌರವ | .... | 41 |
| ಮಹಾಲಯ ಅಮಾವಾಸ್ಯೆ | .... | 48 |
| ಮಾತಾಪಿತೃಸೇವೆ | .... | 52 |
| ಅಂತ್ಯೇಷ್ಟಿ | .... | 56 |
| ಅಂತ್ಯೇಷ್ಟಿ ಸಂಸ್ಕಾರ ಒಂದು ವಿಶ್ಲೇಷಣೆ | .... | 69 |
| ಶ್ರಾದ್ಧ – ಮಾನವನ ಕೃತಜ್ಞತೆ | .... | 72 |
| ವೃಕ್ಷಫಲ | .... | 75 |
| ಅಶ್ವತ್ಥ ವೃಕ್ಷ ಮತ್ತು ಬೇವು | .... | 76 |
| ಸಸ್ಯಬಳಕೆಯ ಪ್ರಾಚೀನ ಉಲ್ಲೇಖಗಳು | .... | 80 |
| ಶ್ರೀ ತುಳಸಿ ಧಾತ್ರಿ ವಿವಾಹ | .... | 83 |
| ಭಾರತೀಯರ ಜೀವನ ಪದ್ಧತಿ | .... | 87 |
| ಜೀವನ ಮೌಲ್ಯಗಳು | .... | 88 |
| ಸಂಸ್ಕೃತಿಯ ಬೇರುಗಳಲ್ಲಿ ಪರಿಸರ ಜೀವವೈವಿಧ್ಯ | .... | 92 |
| ಸಂಸ್ಕಾರಗಳ ಆಚರಣೆಯಲ್ಲಿ ಕಾಲಗಣನೆಯ ಮಹತ್ವ | .... | 95 |

# ದಿ|| ಶ್ರೀ ವಿಠ್ಠಲಕೃಷ್ಣರಾಯರ ಜೀವನತತ್ತ್ವ

(ಈ ಪುಸ್ತಕವನ್ನು ಪ್ರಕಟಣೆ ಮಾಡುತ್ತಿರುವ ಶ್ರೀ ಜಿ.ವಿ. ಪ್ರಭಾಕರ ರಾವ್‌ರವರ ತಂದೆ ವಿಠ್ಠಲಕೃಷ್ಣರಾವ್‌ರವರು ತಮ್ಮ ಭಾವ ಶ್ರೀನಿವಾಸ ರಾವ್‌ರವರಿಗೆ ಬರೆದ ಪತ್ರದ ಪೂರ್ಣ ಪ್ರತಿ ಕೆಳಗಿನದು)

---

Safe

Date 23-5-42

Kudlagunki

[illegible]

[illegible]

[illegible]



Safe ಶ್ರೀರಾಮ್ Date : 23-05-1942 Kullaguriki

ತೀರ್ಥರೂಪ ಸಮಾನರಾದ ಭಾವಾಜಿಯವರ ದಿವ್ಯ ಸನ್ನಿಧಿಯಲ್ಲಿ ಬಾಲಕನ ಸಾಷ್ಟಾಂಗ ನಮಸ್ಕಾರಗಳು.

ನಾವು ೪–೫–೧೯೪೨ನೇ ಸೋಮವಾರ ಸುಖವಾಗಿ ಕುಳ್ಳಗುರ್ಕಿ ಬಂದು ಸೇರಿದೆವು. ಈ ಗ್ರಾಮದ ಸ್ಥಿತಿಗತಿಗಳು ಮಾರ್ಪಡದೇ ಏಕರೀತಿಯಾಗಿದ್ದು ಹರಿಗೋಲು ಮುಗ್ಗರಿಸಿಕೊಂಡು ಪ್ರಯಾಣ ಮಾಡುತ್ತಿದೆ. ಕೆಲಸ ಕಾರ್ಯಗಳೂ ತಕ್ಕಮಟ್ಟಿಗೆ ಮಾಡಿಕೊಂಡು ಕಾಲಯಾಪನೆ ಮಾಡುತ್ತಿದ್ದೇನೆ. ಚಿರಂಜೀವಿ ಪ್ರಭುಕುಮಾರನು ಭಗವದಿಚ್ಛೆಯಿಂದ ಇದುವರಿಗೂ ಆರೋಗ್ಯ ಸ್ಥಿತಿಯಲ್ಲಿರುತ್ತಾನೆ. ಚಿ॥ ನಾರಾಯಣರಾಯನು ಈಗ್ಗೆ ೮ ದಿನಗಳ ಹಿಂದೆ ಇಲ್ಲಿಗೆ ಬಂದಿದ್ದು ಊರಿನ ಕಡೆ ಸರ್ವರೂ ಕುಶಲವಾಗಿರುವರೆಂದು ತಿಳಿಸಿದನು. ಮಳೆ ಆಗಾಗ ಬೀಳುತ್ತಿದ್ದೂ ಹೊಲಗಳು ವುಳುತ್ತಿದ್ದಾರೆ. ತೀ॥ ನಮ್ಮ ಅಣ್ಣನವರ ಕ್ಷೇಮಾತಿಶಯಂಗಳಿಗೆ ಒಡನೆಯೇ ಕಾಗದ  ಬರೆಯಬೇಕು.

ಭಾವಾಜಿ :– ಮಾನವನಿಗೆ ಹೇಗೂ ಕಾಣದ ಬುದ್ಧಿ ಎಂಬ ಶಕ್ತಿಯು ಹೇಳುವುದನ್ನು ಮಾಡುವ ಆಳು. ಒಳ್ಳೆಯದು ಕೆಟ್ಟುದು ಎಂಬುದನ್ನು ಅರಿತು ಹೇಳುವ ಮಂತ್ರಿ; ಏಕೆ ? ಏನು ? ಎಂದು ವಿಚಾರಿಸುವ ಆಪ್ತ, ಮಾಡು, ಬಿಡು ಎಂದು ಹೇಳುವ ಹಿರಿಯ –  ಈ ಎಲ್ಲರೂ ಒಟ್ಟು ಸೇರಿದ ಹಾಗಿರುವದು ಬುದ್ಧಿ. ಹಿಂದೆ ನಡೆದಿರುವುದನ್ನು ಕಂಡುಕೊಳ್ಳುವುದೂ ಮುಂದೆ ಆಗುವುದನ್ನು ಊಹಿಸುವುದೂ ಈಗ ಮಾಡಬೇಕಾಗಿರುವುದನ್ನು ಗೊತ್ತುಮಾಡುವುದೂ ಈ ಬುದ್ಧಿ. ಮನುಷ್ಯನಿಗೆ ಇನ್ನೊಂದು ಅಸಾಧಾರಣವಾದ ಶಕ್ತಿ ಇದೆ. ಮೃಗಸ್ವಭಾವವನ್ನು ತಿಳಿದು ಧರ್ಮ ಬುದ್ಧಿಯನ್ನು ಬೆಳಸಿದರೆ ಆಗ ಆ ಶಕ್ತಿ ಪ್ರಕಟವಾಗುತ್ತದೆ. ಹಾಲನ್ನು ಕಾಯಿಸುತ್ತಾ ಬಂದರೆ ಅದು ಮುದ್ದೆಯಾಗುವಂತೆ, ಗಿಡ ಬೆಳೆದು ಹೂಬಿಡುವಂತೆ ಬೆಳೆದು ಬಂದ ಬುದ್ಧಿಶಕ್ತಿಯಲ್ಲಿ ಇನ್ನೊಂದು ಹೊಸ ಶಕ್ತಿ ಕಾಣಿಸಿಕೊಳ್ಳುತ್ತದೆ. ಆಗ ಅವನಲ್ಲಿ ಹೊಸ ಹೊಸ ಗುಣಗಳೂ ಕಾಣಬರುತ್ತವೆ. ಆಗ ಅವನು ಶಾಂತಿ ಸಂತೋಷಗಳ ತವರ್ಮನೆಯಾಗುತ್ತಾನೆ.

ಪರೋಪಕಾರ ಮಾಡಬೇಕೆಂದು ಹೆಣಗುತ್ತಾನೆ. ನ್ಯಾಯವಾಗಿ ಧರ್ಮವಾಗಿ ಬಾಳಲೇಬೇಕೆಂದು ಪ್ರಯತ್ನ, ಉತ್ತಮವಾಗಿರಬೇಕೆಂಬ ಉದ್ದೇಶ, ಇವು ಅವನ

ಹುಟ್ಟು ಗುಣಗಳಾಗುತ್ತವೆ. ಮೃಗದಲ್ಲೂ ಒಮ್ಮೊಮ್ಮೆ ಮನುಷ್ಯನ ಬುದ್ಧಿಶಕ್ತಿಯನ್ನು ಕಾಣುವೆವು. ಹಾಗೆಯೇ ಮನುಷ್ಯನಲ್ಲೂ ಒಂದೊಂದು ಸಲ ದೇವತೆ ಶಕ್ತಿಯನ್ನು ಕಾಣುವೆವು. ಒಂದೊಂದು ಸಲ ಕಾಣುವ ಈ ದೇವತೆಯ ಶಕ್ತಿ ಯಾವಾಗಲೂ ಇರುವಂತೆ ಮಾಡಿಕೊಳ್ಳಬೇಕು. ಅದು ಮನುಷ್ಯನ ಗುರಿ.

ಮನುಷ್ಯನು ಬೇಕೆನ್ನುವುದನ್ನೆಲ್ಲ ಶ್ರೇಯಸ್ಸು, ಪ್ರೇಯಸ್ಸು ಎಂದು ಎರಡು ಭಾಗ ಮಾಡಿದ್ದಾರೆ. ಪ್ರೇಯಸ್ಸೆಂದರೆ ಅನುಭವಿಸುವಾಗ ಪ್ರಿಯವಾಗಿರುವುದು. ಶ್ರೇಯಸ್ಸು ಔಷಧದ ಹಾಗೆ ಅನುಭವಿಸುವಾಗ ಕಷ್ಟ, ಕೊನೆಗೆ ಹಿತ. ಬೇರೆ ರೂಪದಲ್ಲಿ ಹೇಳಬೇಕೆಂದರೆ – ಮುಂದಿನ ಜನ್ಮವಿಲ್ಲ. ಲೋಕವಿಲ್ಲ, ಇರುವುದೊಂದೇ ಲೋಕ, ಜನ್ಮ. ಆದಷ್ಟು ನಲಿಯುವದು ಶ್ರೇಯಸ್ಸು. ನಾವು ಹಾದಿಹೋಕರ ಹಾಗೆ. ಹಿಂದೆಷ್ಟೋ ದೂರದಿಂದ ಬಂದಿದ್ದೇವೆ. ಮುಂದೆಷ್ಟೋ ದೂರ ಹೋಗಬೇಕಾಗಿದೆ. ಅದರಿಂದ ನಮ್ಮ ಕೆಲಸಗಳು ಮಾಡುತ್ತಾ ಮುಗಿಸುವುದು ಶ್ರೇಯಸ್ಸು.

ಪ್ರಪಂಚದ ಕ್ಷೇಮಕ್ಕೆ ಶ್ರೇಯಸ್ಸೂ ಪ್ರೇಯಸ್ಸೂ ಎರಡೂ ಬೇಕು. ಮನುಷ್ಯ ಜನ್ಮಸಾರ್ಥಕವಾಗಿ ಲೋಕಕ್ಕೆ ಕಲ್ಯಾಣವಾಗಬೇಕಾದರೆ ಸಾಹಸವೂ ತಪಸ್ಸೂ ಒಂದೇ ಕಡೆ ಬೆರೆಯಬೇಕು.

ನಮ್ಮ ಪ್ರಿಯ ಬಂಧುಗಳಾದ ಮಾ॥ರಾ॥ ಚೆಂಗಪ್ಪ ವೆಂಕಟಪ್ಪನವರಿಗೆ ನನ್ನ ವಿಜ್ಞಾಪನೆಗಳು ಹೇಳಬೇಕು. ಇದೇ ನಿಜಜ್ಯೇಷ್ಠ ಮಾಸದ ಒಂದನೇ ವಾರದಲ್ಲಿ ಪ್ರಭುಕುಮಾರನ ಹುಟ್ಟಿದ ಹಬ್ಬ ನಡೆಸಲು ಇಚ್ಛೆಯಿದೆ. ಆಗ ತಾವು ಒಂದು ಪ್ರಯಾಣ ಸೌ॥ ಕುಂ॥ ವೆಂಕಟಲಕ್ಷ್ಮಮ್ಮನನ್ನು ಕರೆದುಕೊಂಡು ಬಂದರೆ ತಮಗೆ ಬೇಕಾದ ಪೂಜಾ ಸಾಮಗ್ರಿಗಳು ಒದಗಿಸಿ ಕೊಡುತ್ತೇನೆ. ಮುಂದಿನ ವಿಚಾರಗಳು ಪತ್ರ ಮುಖಾಂತರ ತಿಳಿಸುತ್ತೇನೆ. ತಮ್ಮ ಪ್ರೀತಿಪೂರ್ವಕವಾದ ವಾರ್ತೆಗೆ ಎದುರು ನೋಡುತ್ತಿದ್ದೇನೆ.

ಇಂತಿ ನಮಸ್ಕಾರಗಳು



(ಜಿ. ವಿಠಲಕೃಷ್ಣ ರಾವ್)



# ಸಂಸ್ಕಾರ – ಸಂಸ್ಕೃತಿ

***ಜಿ. ಪಿ. ವಿನಯಬಾಬು***

ಸಂಸ್ಕಾರ ಎಂಬುದು ಬಹು ಪ್ರಚಲಿತದಲ್ಲಿರುವ ಪದ. ಇದನ್ನು ನಾವು ಯಾವುದಾದರೂ ಒಬ್ಬ ವ್ಯಕ್ತಿಯ ಒಳ್ಳೆಯ ವಿಚಾರಗಳ ಬಗ್ಗೆ ಪ್ರಶಂಸೆ ನೀಡುವಾಗ ಸರ್ವೇಸಾಮಾನ್ಯವಾಗಿ ಬಳಸುವ ಪದ. 'ಸಂಸ್ಕಾರ' ಎಂಬ ಪದದ ಅರ್ಥವನ್ನು ಯೋಚಿಸದೆಯೇ ನಾವು ಅನೇಕ ಬಾರಿ ಅದನ್ನು ಉಪಯೋಗಿಸುತ್ತೇವೆ. ಈ ಸಂಸ್ಕಾರ ಎಂಬುದರ ನಿಜವಾದ ಅರ್ಥ ಏನು? ಸಂಸ್ಕಾರಕ್ಕೂ ಸಂಸ್ಕೃತಿಗೂ ಸಂಬಂಧವುಂಟೆ? ಸುಸಂಸ್ಕೃತ ವ್ಯಕ್ತಿ ಎಂದರೆ ಯಾರು? ಈ ಎಲ್ಲ ಪ್ರಶ್ನೆಗಳಿಗೆ ಬಹು ಸೊಗಸಾದ ಉತ್ತರಗಳನ್ನು ಆಧುನಿಕ ಕಾವ್ಯ ಋಷಿ ಡಿವಿಜಿಯವರು ನೀಡುತ್ತಾರೆ. ಅವರು ಹೇಳುವಂತೆ ಒಳ್ಳೆಯ ಸಂಸ್ಕಾರ ಪಡೆದ ಮನುಷ್ಯ ಸುಸಂಸ್ಕೃತನು. ಸುಸಂಸ್ಕೃತನ ಗುಣಸಂಪತ್ತು ಸಂಸ್ಕೃತಿ.

ಒಬ್ಬ ಪಂಡಿತನನ್ನೋ, ವಿದ್ಯಾವಂತನನ್ನೋ ಅಥವಾ ಕಲೋಪಾಸಕನನ್ನೋ ನಾವು ಸಂಸ್ಕೃತಿವಂತರು ಎಂದು ಕರೆಯುವ ವಾಡಿಕೆಯಿದೆ. ಆದರೆ ಒಳ್ಳೆಯ ಪಾಂಡಿತ್ಯವಾಗಲಿ, ಬರಿ ವಿದ್ಯೆಯಾಗಲಿ, ತಿಳುವಳಿಕೆಯಾಗಲಿ, ಜಾಣತನ–ಯುಕ್ತಿಗಳಾಗಲಿ, ಲಲಿತ ಕಲಾಭಿರುಚಿಗಳಾಗಲಿ ಮತ್ತು ಒಳ್ಳೆಯ ವಾಗ್ಧೋರಣೆಯಾಗಲಿ ಸಂಸ್ಕೃತಿಯಲ್ಲ.

ಹಾಗಾದರೆ ಸಂಸ್ಕೃತಿ ಎಂದರೇನು?

ಸಂಸ್ಕಾರದಿಂದ ಸಂಸ್ಕೃತಿ. ಸಂಸ್ಕಾರ ಎಂದರೆ ಸಂಸ್ಕರಣ ಮಾಡುವುದು ಅಥವ ಸಮ್ಯಕ್ ಕರಣ ಮಾಡುವುದು ಎಂದರ್ಥ. ಅದೇ ರೀತಿ ಸಂಸ್ಕೃತಿ ಎಂದರೆ ಸಮ್ಯಕ್ ಕೃತಿ ಅಥವಾ ಒಳ್ಳೆಯ ಕೃತಿಯನ್ನು ಮಾಡುವುದು. ಸಮ್ಯಕ್ ಎಂದರೆ ಒಳ್ಳೆಯದಾದದ್ದು, ಸರಿಯಾದದ್ದು ಅಥವಾ ಉತ್ತಮವಾದದ್ದು ಎಂದರ್ಥ. ಯಾವುದು ಒಳ್ಳೆಯದೋ ಅದೇ ಸಂಸ್ಕಾರ.

ನಮಗಿರುವ ಮುಂದಿನ ಪ್ರಶ್ನೆ ಒಳ್ಳೆಯದು ಎಂದರೆ ಯಾವುದು ಎಂದು. ಸಾಮಾನ್ಯ ಪದ ಬಳಕೆಯಲ್ಲಿ ನಮಗೆ ಯಾವುದು ಸರಿಯೋ, ಯಾವುದು ಇಷ್ಟವೋ ಅಥವಾ ಯಾವುದು ಹಿತವೋ ಅದೇ ಒಳ್ಳೆಯದು ಎಂಬರ್ಥವಿದೆ. ಆದರೆ ನಮಗೆ ಇಷ್ಟವಾದುದೆಲ್ಲವೂ ಒಳ್ಳೆಯದಾಗಲು ಸಾಧ್ಯವೇ? ನಮಗೆ ಇಷ್ಟ ಅಥವಾ ಸರಿ ಎನಿಸುವ ಎಷ್ಟೋ ವಿಚಾರಗಳು ಬೇರೊಬ್ಬರಿಗೆ ಇಷ್ಟವಾಗದಿರಬಹುದು

ಅಥವಾ ಹಿತವೆನಿಸದಿರಬಹುದು. ಈ ಹಿನ್ನೆಲೆಯಲ್ಲಿ 'ಒಳ್ಳೆಯದು' ಎಂಬುದರ ನಿಜವಾದ ಅರ್ಥವನ್ನು ನಾವು ವಿಶ್ಲೇಷಿಸಬೇಕಿದೆ.

ಒಳ್ಳೆಯದು ಎನ್ನುವುದು ವ್ಯಕ್ತಿಯಿಂದ ವ್ಯಕ್ತಿಗೆ, ಕಾಲದಿಂದ ಕಾಲಕ್ಕೆ, ದೇಶದಿಂದ ದೇಶಕ್ಕೆ ಬದಲಾಗುವ ವಿಷಯವಲ್ಲ. ಒಳ್ಳೆಯದು ಎಂಬುದು ಎಲ್ಲರಿಗೂ, ಎಲ್ಲ ಕಾಲಕ್ಕೂ, ಎಲ್ಲ ಸಂದರ್ಭದಲ್ಲೂ ಒಂದೇ ತೆರನಾಗಿರಬೇಕು. ಅರ್ಥಾತ್ ಅದು ನಿತ್ಯವೂ ಶಾಶ್ವತವೂ ಆಗಿರಬೇಕು.

ನಿತ್ಯವೂ ಶಾಶ್ವತವೂ ಆದದ್ದು ಯಾವುದು? ಅದೇ ಸತ್ಯ. ಯಾವುದು ಸತ್ಯವೋ ಅದೇ ಒಳ್ಳೆಯದು. ಯಾವುದು ಶಾಶ್ವತವೋ ಅದೇ ಹಿತವು. ಸತ್ಯವೇ ಎಲ್ಲರಿಗೂ ಒಳ್ಳೆಯದಾದದ್ದು.

ಸತ್ಯವೆಂದರೆ ಯಾವುದು? ಇದನ್ನು ತಿಳಿದುಕೊಳ್ಳಲು ನಾವು ಸ್ವಲ್ಪ ಆಧ್ಯಾತ್ಮದೆಡೆಗೆ ಹೋಗಬೇಕು. ಯಾವುದರಿಂದ ನಮಗೆ ಅಂತರ್ದರ್ಶನ ದೊರೆಯುವುದೋ ಅದೇ ಸತ್ಯ. ಯಾವುದರಿಂದ ನಾವು ದೇವರನ್ನು ತಿಳಿದುಕೊಳ್ಳಲು ಸಹಕಾರಿಯಾಗುತ್ತದೆಯೋ ಅದೇ ಸತ್ಯ. ಇಂತಹ ಸತ್ಯ ನಿತ್ಯವೂ–ಶಾಶ್ವತವೂ ಆಗಿರುತ್ತದೆ. ನಮ್ಮ ಮೂಲ ಪ್ರಶ್ನೆ 'ಒಳ್ಳೆಯದು' ಎಂದರೆ ಏನು ಎಂಬುದಕ್ಕೆ ನಮಗೆ ಸಿಕ್ಕ ಉತ್ತರ ದೇವರೆಡೆಗೆ ಹೋಗುವ ದಾರಿ ಎಂದಾಯಿತು. ಯಾವುದನ್ನು ಮಾಡುವುದರಿಂದ ನಮಗೆ ಅಂತರ್ದರ್ಶನವಾಗುವುದೋ, ಯಾವುದರಿಂದ ನಾವು ದೇವರೆಡೆಗೆ ಹೋಗಲು ಸಾಧ್ಯವೋ ಅದೇ ಸತ್ಯ.

ದೇವರೆಡೆಗೆ ಹೋಗುವುದು ಹೇಗೆ? ಹಿಂದೂ ಧರ್ಮಶಾಸ್ತ್ರದಲ್ಲಿ ಇದಕ್ಕೆ ಉತ್ತರವಿದೆ. ದೇವರೆಡೆಗೆ ಹೋಗುವ ಮಾರ್ಗದ ಸೂತ್ರವೇ ಚತುರ್ವಿಧ ಪುರುಷಾರ್ಥಗಳು (values) – ಇವೇ ಧರ್ಮ, ಅರ್ಥ, ಕಾಮ, ಮೋಕ್ಷ.

- ❖ ನಾವು ಸಮಾಜದಲ್ಲಿ ಮತ್ತು ನಿತ್ಯ ಜೀವನದಲ್ಲಿ ಮಾಡುವ ಎಲ್ಲ ಕರ್ತವ್ಯಗಳೂ ಧರ್ಮ.
- ❖ ಈ ಧರ್ಮವನ್ನು ಆಚರಿಸಲು ನಮಗಿರುವ ಸಾಧನವೇ ಅರ್ಥ. ಇದು ಧನ, ಧಾನ್ಯ ಅಥವಾ ಇನ್ಯಾವುದೇ ರೀತಿಯ ಸಲಕರಣೆಯ ರೂಪದಲ್ಲಿರಬಹುದು.
- ❖ ಮನುಷ್ಯನಿಗಿರುವ ಸಹಜ ಆಸೆ ಆಕಾಂಕ್ಷೆಗಳೇ ಕಾಮ.
- ❖ ಕಾಮನೆಗಳೆಲ್ಲ ಕಳೆದು ಭಗವಂತನ ಸಂದರ್ಶನಕ್ಕೆ ಸನ್ನದ್ಧವಾಗುವುದೇ ಮೋಕ್ಷ, ಜೀವನದಲ್ಲಿ ಧರ್ಮ, ಅರ್ಥ, ಕಾಮಗಳ ತ್ರಿವಿಧ ಪುರುಷಾರ್ಥಗಳನ್ನು

ಅನುಸರಿಸುವುದು ಮಾತ್ರ ನಮ್ಮ ಕೈಯಲ್ಲಿದೆ. ಮೋಕ್ಷಸಾಧನೆಯು ಜನಸಾಮಾನ್ಯರ ಪರಿಧಿಗೆ ಮೀರಿದ ತತ್ವ. ಅರ್ಥ ಮತ್ತು ಕಾಮನೆಗಳು ಧರ್ಮದ ಚೌಕಟ್ಟಿನಲ್ಲಿದ್ದಾಗ ಅದು ಭಗವಂತನೆಡೆಗೆ ನಮ್ಮನ್ನು ಕೊಂಡೊಯ್ಯುವ ಸಾಧನವಾಗುತ್ತದೆ. ಇದೇ ನಮಗೆ ಒಳ್ಳೆತನವನ್ನು ತಂದುಕೊಡುವ ಮಾರ್ಗ. ಇದನ್ನು ಸಾಧಿಸುವಲ್ಲಿ ಮನುಷ್ಯನು ಪ್ರಕೃತಿಯಿಂದ ಮೇಲ್ಮಟ್ಟಕ್ಕೆ ಏರಬೇಕಾಗುತ್ತದೆ. ಅದೇ ಸಂಸ್ಕೃತಿ. ಭತ್ತದ ಕಾಳು ಪ್ರಕೃತಿ – ಅದರಿಂದಾಗುವ ಅನ್ನ ಸಂಸ್ಕೃತಿ; ಹತ್ತಿ ಪ್ರಕೃತಿ – ಅದರಿಂದ ನೇಯ್ದ ಸೀರೆ ಧೋತ್ರ ಸಂಸ್ಕೃತಿ; ಹುಟ್ಟಿದ ವ್ಯಕ್ತಿ ಏನೂ ಬದಲಾವಣೆ ಇಲ್ಲದೆ ಇರುವುದು ಪ್ರಕೃತಿ – ವಿದ್ಯೆ ನಾಗರೀಕತೆಗಳು ಸಂಸ್ಕೃತಿ.

ನಮ್ಮ ಸಹಜ ಪ್ರಕೃತಿಯನ್ನು ಸಂಸ್ಕರಿಸಿ ಉತ್ತಮ ಸಂಸ್ಕಾರದೆಡೆಗೆ ಹೋಗುವುದೇ ಸಂಸ್ಕೃತಿ. ಇದೇ ಒಳ್ಳೆಯ ಜೀವನದೆಡೆಗೆ ನಾವು ಇರಿಸಬೇಕಾಗಿರುವ ಸರಿಯಾದ ಹೆಜ್ಜೆ.

**ಸುಸಂಸ್ಕೃತನು ಯಾರು?**

ಸುಸಂಸ್ಕೃತನಾದವನು ಈ ಗುಣಗಳನ್ನು ಹೊಂದಿರಬೇಕು ಎಂದು ಡಿವಿಜಿಯವರು ಹೇಳುತ್ತಾರೆ.

೧. ಸ್ವಸ್ಥಾನ ಪರಿಜ್ಞಾನ – ಈ ಸಮಾಜದಲ್ಲಿ ಮತ್ತು ನಾವು ಮಾಡುವ ಕಾರ್ಯದಲ್ಲಿ ನಮ್ಮ ಸ್ಥಾನವೇನು ಎಂದು ತಿಳಿದು ಅದರಂತೆ ನಾವು ನಡೆಯಬೇಕು.

೨. ಪರರ ಇಂಗಿತ ಪರಿಗ್ರಹಣ – ನಾವು ಮಾಡಿದ ಕೆಲಸ ಇತರರ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ಚಿಂತಿಸುವುದು.

೩. ಸ್ವಾರ್ಥ ನಿಯಮನ – ಸ್ವಾರ್ಥದ ಸಂಪೂರ್ಣ ನಾಶ ಅಥವಾ ನಿಗ್ರಹ ಅಪೇಕ್ಷಣೀಯವಲ್ಲ. ನಮಗೆ ಬೇಕಿರುವುದು ಸ್ವಾರ್ಥ ನಿಯಮನ.

೪. ಸಮನ್ವಯ ದೃಷ್ಟಿ – ನಾನಾ ಅಭಿಪ್ರಾಯಗಳನ್ನು ಪರೀಕ್ಷಿಸಿ ನೋಡಿ, ಅವುಗಳ ಸತ್ಯಾಂಶಗಳನ್ನು ಶೇಖರ ಮಾಡಿ, ಒಂದು ಹದದಲ್ಲಿ ಅವುಗಳನ್ನು ಹೊಂದಿಸಿದಾಗ ಅದು ಸಮನ್ವಯ ದೃಷ್ಟಿಯಾಗುತ್ತದೆ.

೫. ಸರಸತೆ – ಎಲ್ಲ ಸಂದರ್ಭಗಳಲ್ಲೂ ಸ್ವಾರಸ್ಯ ಕಣವನ್ನು ಹುಡುಕುವುದು.

*ಲೇಖಕರು: ವ್ಯವಸ್ಥಾಪಕರು*
*ಪ್ರೈಸ್ ವಾಟರ್‌ಹೌಸ್ ಕೂಪರ್ಸ್ ಸಂಸ್ಥೆ (ಇಂ), ಬೆಂಗಳೂರು*

# ಭಾರತೀಯ ಸಂಸ್ಕಾರಗಳು

***ಜಿ. ವಿ. ಪ್ರಭಾಕರ ರಾವ್***

ಆತ್ಮನೋ ಮೋಕ್ಷಾರ್ಥಂ ಜಗದ್ ಹಿತಾಯಚ ಎಂಬುದೇ ಭಾರತೀಯ ಸಂಸ್ಕೃತಿಯ ಗುರಿ. ಸಂಸ್ಕಾರಗಳಿಲ್ಲದ ಧರ್ಮವಿಲ್ಲ. ನಮ್ಮ ಧಾರ್ಮಿಕ ನಂಬಿಕೆಗಳ ವಿಶ್ವಾಸಗಳ ವ್ಯಕ್ತರೂಪವೇ ಸಂಸ್ಕಾರ. ಮನುಷ್ಯನ ಧಾರ್ಮಿಕ ವ್ಯಕ್ತಿತ್ವವು ರೂಪಗೊಳ್ಳುವುದು ಸಂಸ್ಕಾರದಿಂದ. ಹಾಗಾಗಿ ಸಂಸ್ಕಾರಗಳನ್ನು ಅಲ್ಲಗಳೆಯಲಾಗುವುದಿಲ್ಲ. ಭಗವದನುಗ್ರಹಕ್ಕೆ ಪಾತ್ರನಾಗುವುದಕ್ಕಾಗಿ ಪರಮಾತ್ಮನನ್ನು ಪ್ರಸನ್ನೀಕರಿಸುವುದಕ್ಕಾಗಿ ಒಂದಿಲ್ಲೊಂದು ವಿಧಾನದಿಂದ ಅರ್ಚಿಸುವುದು ಆರಾಧಿಸುವುದು ಅನಿವಾರ್ಯ. ಧರ್ಮ ಮತ್ತು ಸಂಸ್ಕಾರಗಳ ನಡುವೆ ಅತ್ಯಂತ ಗಾಢವಾದ ಸಂಬಂಧವಿದೆ. ಧರ್ಮವು ದೇವಾಲಯವಾದರೆ ಅದನ್ನು ಏರುವ ಮೆಟ್ಟಿಲು ಸಂಸ್ಕಾರ. ಈ ಮೆಟ್ಟಿಲನ್ನು ಏರದ ಹೊರತು ದೇವಾಲಯಕ್ಕೆ ಪ್ರವೇಶವೇ ಇಲ್ಲ.

ವ್ಯಕ್ತಿಯೋರ್ವನ ದೈಹಿಕ, ಮಾನಸಿಕ ಮತ್ತು ಬೌದ್ಧಿಕ ಪರಿಷ್ಕರಣೆಯ ಸಲುವಾಗಿ ನಡೆಸುವ ಧಾರ್ಮಿಕ ಕ್ರಿಯೆಗಳನ್ನು ನಾವು ಸಂಸ್ಕಾರಗಳೆಂದು ಕರೆಯುತ್ತೇವೆ.

ಇಂದಿನ ಈ ಕಾಲದಲ್ಲಿ ಹದಿನಾರು ಪೂರ್ವ ಸಂಸ್ಕಾರಗಳಲ್ಲಿ ಮುಖ್ಯವಾಗಿ ಕೇವಲ ಉಪನಯನ ಮತ್ತು ವಿವಾಹಗಳು ಮಾತ್ರ ಜರುಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಪ್ರಾಯಃ ಇತರ ಎಲ್ಲ ಸಂಸ್ಕಾರಗಳನ್ನೂ ಕೈಬಿಡಲಾಗಿದೆ. ಇವುಗಳಲ್ಲೂ ಚಪ್ಪರ, ವಾದ್ಯ, ಮೆರವಣಿಗೆ, ಆಭರಣ, ವಸ್ತ್ರಾಲಂಕಾರ, ಊಟ, ಉಪಚಾರ, ಇತ್ಯಾದಿ ಆಡಂಬರಗಳ ಕಡೆಗೇ ಜನರ ದೃಷ್ಟಿ ಇದೆಯೇ ಹೊರತು ಈ ಸಂಸ್ಕಾರಗಳ ಮೂಲ ಉದ್ದೇಶವೇನು, ವಿವಿಧ ಕರ್ಮಭಾಗಗಳ ಅರ್ಥವೇನು, ಅವುಗಳನ್ನು ಮಾಡುವ ಸರಿಯಾದ ಕ್ರಮವೇನು, ಅವುಗಳ ದೃಷ್ಟ ಹಾಗೂ ಅದೃಷ್ಟ ಫಲಗಳೇನು ಇತ್ಯಾದಿ ಮುಖ್ಯ ವಿಚಾರಗಳ ಕುರಿತು ಯಾರೊಬ್ಬರೂ ಆಲೋಚಿಸುವುದಿಲ್ಲ. ಆದರೆ ಕೆಲವೇ ಜನರಿಗಾದರೂ ಇವುಗಳ ಕುರಿತು ಆಸಕ್ತಿ ಇರಬಹುದು, ದೇಶ, ಕಾಲ, ಪರಿಸ್ಥಿತಿ, ವಾತಾವರಣ ಮುಂತಾದವುಗಳನ್ನು

ಹೊಂದಿಕೊಂಡು, ಇಂದಿನ ಈ ಪರಿಸರದಲ್ಲಿ ಹಿಂದಿನ ಆ ಕಾಲದ ಅದೇ ಕ್ರಮಗಳನ್ನು ಸ್ವಲ್ಪವೂ ನ್ಯೂನತೆ ಇಲ್ಲದೆ, ಅದೇ ರೀತಿಯಲ್ಲಿ ಹಾಗೇ ಅನುಸರಿಸುವುದು ದುಃಸಾಧ್ಯವೆನಿಸಿದರೂ, ಈ ಸಂಸ್ಕಾರಗಳ ಮೂಲ ಉದ್ದೇಶ, ವಿಧಿ ವಿಧಾನ, ಪರಿಣಾಮ, ಫಲ ಮುಂತಾದವುಗಳ ಸ್ಥೂಲ ಪರಿಚಯವಿದ್ದು, ಅವುಗಳನ್ನು ಆಚರಿಸಿದರೆ ಮಾತ್ರ ಮಾಡಿದ ಕರ್ಮವು ಸಾರ್ಥಕವಾದೀತು.

ಜಾತಕರ್ಮ, ನಾಮಕರಣ, ಉಪನಯನ, ವಿವಾಹ ಮುಂತಾದ ಸಂಸ್ಕಾರಗಳನ್ನು ಕೇವಲ ರೂಢಿ ಎಂದು ಮಾಡುವುದಕ್ಕಿಂತ, ಅವುಗಳ ಉದ್ದೇಶ, ಪರಿಣಾಮ, ಫಲ, ಮುಂತಾದವುಗಳನ್ನು ಸರಿಯಾಗಿ ತಿಳಿದು ಮಾಡುವುದು ಉಚಿತವಾಗಿದೆ. ಆದ್ದರಿಂದ ಪ್ರತಿಯೊಂದು ಸಂಸ್ಕಾರದಲ್ಲೂ ಏನು ವೈಶಿಷ್ಟ್ಯವಿದೆ ಎಂಬುದರ ಪೂರ್ವ ಕಲ್ಪನೆ ಇರುವುದು ಒಳ್ಳೆಯದು. ಅದೇನೆಂಬುದನ್ನು ಸಂಕ್ಷೇಪವಾಗಿ ಪರಿಶೀಲಿಸೋಣ.

**''ಸಂಸ್ಕಾರ''** ಎಂದರೆ ಶಾಸ್ತ್ರೋಕ್ತವಿಧಿಯಿಂದ ಸಂಸ್ಕರಿಸುವುದು, ಪರಿಷ್ಕರಿಸುವುದು, ಶುದ್ಧೀಕರಿಸುವುದು, ಅರ್ಹತೆಯನ್ನು ತರುವುದು ಇತ್ಯಾದಿ ಅರ್ಥವಾಗುತ್ತದೆ. ಉಪನಯನ, ವಿವಾಹ ಮೊದಲಾದ ಯಾವುದೇ ಸಂಸ್ಕಾರವಾದರೂ ಆರಂಭದಲ್ಲಿ ದೇವತಾ ಪ್ರತಿಷ್ಠೆಮಾಡಲಾಗುತ್ತದೆ. ಇದರಲ್ಲಿ ಗಣಪತಿ ಪೂಜನ, ಪುಣ್ಯಾಹವಾಚನ, ಮಾತೃಕಾಪೂಜನ, ನಾಂದೀಶ್ರಾದ್ಧ, ಮಂಟಪ ದೇವತಾಪ್ರತಿಷ್ಠಾ ಮುಂತಾದ ಕರ್ಮಭಾಗಗಳು ಅಂತರ್ಗತವಾಗಿವೆ.

೧. **ಗಣಪತಿ ಪೂಜೆ :** ದೇವಗಣದಲ್ಲಿ ಪ್ರಮುಖನಾದವನು ಗಣಪತಿ. ಇವನು ಸರ್ವವಿಘ್ನನಾಶಕ. ಆರಂಭಿಸಿದ ಸಂಸ್ಕಾರಕರ್ಮದಲ್ಲಿ ಯಾವುದೇ ವಿಘ್ನವೂ ಉಂಟಾಗದಂತೆ ಅದು ಸಾಂಗವಾಗಿ ನೆರವೇರುವುದಕ್ಕೋಸ್ಕರ ಪ್ರಾರಂಭದಲ್ಲಿ ಗಣಪತಿಯ ಪೂಜೆ ಮಾಡಲಾಗುತ್ತದೆ.

೨. **ಪುಣ್ಯಾಹವಾಚನ :** ಪುಣ್ಯಂ ಅಹಃ = ದಿವಸವು ಪುಣ್ಯಪ್ರದವಾಗಲಿ ಎಂದು ಬ್ರಾಹ್ಮಣರು ಮಾಡುವ ವಾಚನ. ಸಂಸ್ಕಾರಕರ್ತೃವಿಗೂ, ಸಂಸ್ಕಾರ್ಯನಿಗೂ ಈ ದಿನವು ಹಬ್ಬದಂತೆ ಸುಖಸಂತೋಷಗಳನ್ನು ಉಂಟುಮಾಡಲಿ ಎಂದು ಆಶೀರ್ವಾದಗಳನ್ನು ಪಡೆಯುವುದೇ ಈ ಪುಣ್ಯಾಹವಾಚನ ಕರ್ಮದ ಪ್ರಧಾನ ಉದ್ದೇಶ. ಇದರಲ್ಲಿ ಸ್ವಸ್ತಿವಾಚನ ಮುಂತಾದವುಗಳೂ ಸೇರಿಕೊಂಡಿವೆ.

೩. **ಮಾತೃಕಾಪೂಜನ :** ಪ್ರತಿಯೊಬ್ಬನಿಗೂ ತನ್ನ ಕುಲದೇವತೆ ಪ್ರತ್ಯೇಕವಾಗಿರುತ್ತದೆ. ಮಾತೃಕಾ ಪೂಜನದಲ್ಲಿ ಕುಲದೇವತಾಪೂಜೆಯು ಅಡಕವಾಗಿದೆ. ಯಾವುದೇ ಶುಭಕರ್ಮವನ್ನು ಪ್ರಾರಂಭಿಸುವಾಗ ಪುಣ್ಯಾಹವಾಚನವಾದ ಮೇಲೆ ಪರಿವಾರ ಸಮೇತ ಕುಲದೇವತೆಗಳ ಪೂಜೆ ಮಾಡಲಾಗುತ್ತದೆ. ಈ ಪೂಜೆಯಿಂದ, ತನ್ನ ಮತ್ತು ತನ್ನ ಕುಲದ ಕಲ್ಯಾಣವಾಗಬೇಕೆಂಬುದೇ ಇದರ ಪ್ರಧಾನ ಉದ್ದೇಶ.

೪. **ನಾಂದಿ ಶ್ರಾದ್ಧ :** ಮನೆಯಲ್ಲಿ ಮಂಗಲಕಾರ್ಯವೊಂದು ನೆರವೇರುವಾಗ, ಪಿತೃಗಳೆಲ್ಲರೂ ಸೂಕ್ಷ್ಮರೂಪದಿಂದ ಬಂದು ಉಪಸ್ಥಿತರಾಗಿದ್ದು ಈ ಕಾರ್ಯವನ್ನು ಸಂತೋಷದಿಂದ ಅವಲೋಕಿಸುತ್ತಾರೆ. ಹಾಗೂ ಕುಲಕ್ಕೆ ಶುಭವನ್ನು ಕೋರುತ್ತಾರೆ ಎಂಬುದು ನಮ್ಮ ವಿಶ್ವಾಸ. ಅಂತಹ ಪಿತೃಗಳನ್ನು ಪೂಜಿಸಿ ಸತ್ಕರಿಸುವುದೇ ಈ ವಿಧಿಯ ಪ್ರಧಾನ ಉದ್ದೇಶ. ನಾಂದಿ ಎಂದರೆ ಶುಭಕರ್ಮದ ಆರಂಭ. ಆ ಕಾಲಕ್ಕೆ ಪಿತೃಗಳನ್ನು ಉದ್ದೇಶಿಸಿ ಮಾಡುವ ಶ್ರಾಧ್ಧ – ನಾಂದಿ ಶ್ರಾದ್ಧ. ಇದನ್ನು ದೇವನಾಂದಿ ಎನ್ನುತ್ತಾರೆ.

೫. **ಮಂಟಪದೇವತಾಪ್ರತಿಷ್ಠೆ :** ಯಾವ ಮಂಟಪದಲ್ಲಿ ಶುಭಕಾರ್ಯವನ್ನು ಮಾಡಲಾಗುತ್ತದೋ, ಆ ಮಂಟಪದ ಪೂಜೆ ಮಾಡುವುದೇ ಮಂಟಪದೇವತಾಪ್ರತಿಷ್ಠೆ. ದಾರವನ್ನು ಸುತ್ತಿದ ಮಾವಿನ ಎಲೆಯ ಮೇಲೆ ಮಂಟಪದೇವತೆಯನ್ನು ಆವಾಹಿಸಿ ಪ್ರತಿಷ್ಠಿಸಲಾಗುತ್ತದೆ. ಅಂತೆಯೇ ಕರ್ಮಸಮಾಪ್ತಿಯಾದಾಗ ದೇವತಾಸ್ಥಾಪನೆ, ಮಂಡಪೋದ್ವಾಸನ ಮುಂತಾದವುಗಳನ್ನು ನೆರವೇರಿಸಬೇಕು. ಪ್ರತಿಷ್ಠಾಪಿಸಿದ ದೇವತೆಗಳನ್ನು ವಿಸರ್ಜಿಸುವುದೂ ಅತ್ಯಂತ ಆವಶ್ಯ. ಆವಾಹನದಷ್ಟೇ ವಿಸರ್ಜನೆಯೂ ಮಹತ್ವಪೂರ್ಣಕಾರ್ಯವಾಗಿದೆ.

## ಸಂಸ್ಕಾರಗಳು

ಷೋಡಷ ಸಂಸ್ಕಾರಗಳು ಯಾವುವು? ಅವುಗಳ ಉದ್ದೇಶವೇನು? ಅವುಗಳಲ್ಲಿ ಬರುವ ಪ್ರಧಾನ ವಿಧಿಗಳು ಯಾವುವು ಮುಂತಾದ ವಿಚಾರಗಳನ್ನು ಕ್ರಮವಾಗಿ ನೋಡೋಣ.

೧) **ಗರ್ಭಾದಾನ :** ಬೀಜಸಂಬಂಧಿ ಅಥವಾ ಗರ್ಭಸಂಬಂಧಿಯಾದ, ಅದೃಷ್ಟವಾದ ವಿಘ್ನಕಾರಕ ಪಾಪವನ್ನು ದೂರೀಕರಿಸಲು ಈ ಸಂಸ್ಕಾರವನ್ನು ಮಾಡಲಾಗುತ್ತದೆ.

೨) **ಪುಂಸವನ:** (ಪುಂಸಃ ಸವನಂ) ಪುತ್ರಜನ್ಮವಾಗಬೇಕೆಂದು ಆಚರಿಸುವುದೇ ಈ ಸಂಸ್ಕಾರದ ಉದ್ದೇಶವಾಗಿದೆ. ಉದ್ದು, ಮೊಸರು, ಅಕ್ಕಿ ಮುಂತಾದವುಗಳ ಪ್ರಾಶನವನ್ನು ಇದರಲ್ಲಿ ಹೇಳಲಾಗಿದೆ.

೩) **ಸೀಮಂತೋನ್ನಯನ ಮತ್ತು ವಿಷ್ಣುಬಲಿ:** ಸೀಮಂತ ಎಂದರೆ ಕೂದಲು, ಉನ್ನಯನಂ ಎಂದರೆ ಬಾಚುವುದು. ಗರ್ಭದ ಶಕ್ತಿಯು ಹೆಚ್ಚಾಗಿ ಅದು ಸ್ಥಿರವಾಗಿರಬೇಕೆಂದು ಪತಿಯು ಎರಡು ಕಾಯಿಗಳಿರುವ ಔದುಂಬರದ ಟೊಂಗೆ, ಮೂರು ಬಿಳಿ ಚುಕ್ಕೆಗಳಿರುವ ಮುಳ್ಳು ಮತ್ತು ಮೂರು ದರ್ಭೆಗಳಿಂದ ಪತ್ನಿಯ ತಲೆಯನ್ನು ಬಾಚಬೇಕು. ಆದ್ದರಿಂದಲೇ ಇದಕ್ಕೆ ಸೀಮಂತೋನ್ನಯನ ಎಂಬ ಹೆಸರು. ವಿಷ್ಣುಪೂಜೆ ಹವನಾದಿಗಳನ್ನು ಆಚರಿಸುವ ವಾಡಿಕೆಯೂ ಉಂಟು.

೪) **ಜಾತಕರ್ಮ:** (ಜಾತಸ್ಯ ಕರ್ಮ) ಮಗು ಹುಟ್ಟಿದ ಒಡನೆಯೇ ಮಾಡಬೇಕಾದ ವಿಧಿ ಇದಾಗಿದೆ. ಈ ವಿಧಿಯಲ್ಲಿ ಬಂಗಾರದ ಕಡ್ಡಿಯಿಂದ ತುಪ್ಪ ಮತ್ತು ಜೇನನ್ನು ಮಗುವಿಗೆ ಕುಡಿಸಲಾಗುತ್ತದೆ. ಅನಂತರ ಅದೇ ಬಂಗಾರದ ಕಡ್ಡಿಯಿಂದ ಮಗುವಿನ ಕಿವಿ ಚುಚ್ಚಿ ಅದರ ಸ್ಮರಣಶಕ್ತಿಯನ್ನು ವರ್ಧಿಸಲಾಗುತ್ತದೆ.

೫) **ನಾಮಕರಣ:** ಮಗುವಿಗೆ ಹೆಸರನ್ನಿಡುವುದು. ನಾಲ್ಕು ವಿಧದ ಹೆಸರುಗಳನ್ನಿಡುವ ಪರಿಪಾಠವಿದೆ.

ಅ) **ಕುಲದೇವತಾ ಭಕ್ತನಾಮ**–ಕುಲದೇವತೆಯ ಭಕ್ತನೆಂದು ಮೊದಲನೆಯ ಹೆಸರು.

ಆ) **ಮಾಸನಾಮ**–ಹುಟ್ಟಿದ ತಿಂಗಳ ಸಂಕೇತವಾದ ಎರಡನೆಯ ಹೆಸರು.

ಇ) **ನಕ್ಷತ್ರನಾಮ**– ಜನ್ಮನಕ್ಷತ್ರದ ಆದ್ಯಕ್ಷರವಿರುವ ಮೂರನೆಯ ಹೆಸರು.

ಈ) **ಲೌಕಿಕನಾಮ**– ವ್ಯವಹಾರಕ್ಕಾಗಿ ಇಟ್ಟ ನಾಲ್ಕನೆಯ ಹೆಸರು. ವ್ಯವಹಾರದಲ್ಲಿ ಈ ಹೆಸರೇ ಪ್ರಸಿದ್ಧ. ಉಳಿದವುಗಳೆಲ್ಲ ಗುಪ್ತವಾಗಿರುತ್ತವೆ. ನಾಮಕರಣ ಸಂಸ್ಕಾರದಿಂದ ಆಯುಷ್ಯಾಭಿವೃದ್ಧಿ, ಲೌಕಿಕ ಪ್ರತಿಷ್ಠೆ ಮುಂತಾದವುಗಳು ಸಿದ್ಧಿಸುತ್ತವೆ.

**೬. ಉಪನಿಷ್ಕ್ರಮಣ:** ಮೊಟ್ಟಮೊದಲ ಬಾರಿ ಮಗುವನ್ನು ಮನೆಯಿಂದ ಹೊರಗೆ ಕೊಂಡೊಯ್ಯುವ ಸಂಸ್ಕಾರ ಇದು. ಮಗುವಿನ ಆಯಸ್ಸು ಮತ್ತು ಮಾನಸಿಕ–ಶಾರೀರಿಕ ಶಕ್ತಿಗಳು ಹೆಚ್ಚಾಗಬೇಕೆಂಬ ಉದ್ದೇಶದಿಂದ ಮಗುವನ್ನು ಮನೆಯಿಂದ ಹೊರತಂದು ಸೂರ್ಯ, ಚಂದ್ರ, ಆಕಾಶ, ಅಗ್ನಿ, ವನ, ದಿಕ್ಪಾಲ, ಹೊಳೆ ದಾಟುವುದು ಸಮೀಪದ ಬಂಧುಗಳು ಮುಂತಾದವರ ದರ್ಶನ ಮಾಡಿಸುವುದು ಈ ಸಂಸ್ಕಾರದ ಮುಖ್ಯ ಉದ್ದೇಶ.

**೭. ಅನ್ನಪ್ರಾಶನ:** ಮಗುವಿಗೆ ಆಯಸ್ಸು, ವರ್ಚಸ್ಸು, ಶಾರೀರಿಕ ಶಕ್ತಿ, ದಾರ್ಢ್ಯ, ಇತ್ಯಾದಿಗಳ ವೃದ್ಧಿಯಾಗಬೇಕೆಂಬ ಉದ್ದೇಶದಿಂದ ಕೈಯಲ್ಲಿ ಸುವರ್ಣ(ಉಂಗುರ)ವನ್ನು ಹಿಡಿದು ಅದರಿಂದ ಅನ್ನವನ್ನು ಉಣಿಸುವುದು.

**೮. ಕರ್ಣವೇಧ:** ಕರ್ಣವೇಧ ಕಾರ್ಯಕ್ರಮವು ಪ್ರತಿಯೊಬ್ಬ ಭಾರತೀಯನಿಗೂ ನಿಯೋಜಿಸಲ್ಪಟ್ಟಿದೆ. ಗಂಡಾಗಲಿ, ಹೆಣ್ಣಾಗಲಿ ಎಲ್ಲ ಮಕ್ಕಳಿಗೂ ಈ ಸಂಸ್ಕಾರದ ಅಗತ್ಯವಿದೆ.

**೯. ಚೂಡಾಕರ್ಮ:** ಈ ಸಂಸ್ಕಾರವನ್ನು ಸಾಮಾನ್ಯವಾಗಿ ಉಪನಯನದೊಂದಿಗೇ ಮಾಡುತ್ತಾರೆ. ಚೂಡಾ ಎಂದರೆ ಶಿಖೆಯನ್ನು ಕಲ್ಪಿಸುವ ಸಂಸ್ಕಾರ ಎಂದರ್ಥ. ಚೌಲ ಎಂದರೆ ವಪನ ಮಾಡುವುದು. ಆಯುಸ್ಸು, ಬ್ರಹ್ಮತೇಜಸ್ಸು ಮುಂತಾದವುಗಳು ವೃದ್ಧಿಸಬೇಕೆಂಬ ಉದ್ದೇಶದಿಂದ ಇದನ್ನು ಮಾಡಲಾಗುತ್ತದೆ.

**೧೦. ಅಕ್ಷರಾಭ್ಯಾಸ** ಪ್ರಾರಂಭ.

**೧೧. ವಿದ್ಯಾರಂಭ** ಕಾರ್ಯಕ್ರಮ.

**೧೨. ಉಪನಯನ :** ಈ ಸಂಸ್ಕಾರವು ಅತ್ಯಂತ ಮಹತ್ವಪೂರ್ಣವಾದುದು. ಇದರಲ್ಲಿ ಚೌಲಹೋಮ, ಮಾತೃಭೋಜನ, ಸ್ನಾನ ದೇವತಾದರ್ಶನ ಮುಂತಾದವುಗಳಾದ ಮೇಲೆ ಗಾಯತ್ರಿಯ ಉಪದೇಶವನ್ನು ಪಡೆಯುವುದಕ್ಕಾಗಿ ಗುರುವಿನ ಬಳಿ ಸೇರಿಸುವುದು, ಕಟಿಸೂತ್ರ, ಕೌಪೀನ, ವಸ್ತ್ರ, ಅಜಿನ, ಯಜ್ಞೋಪವೀತ, ದಂಡ ಇತ್ಯಾದಿಗಳ ಧಾರಣ ಮುಂತಾದ ಪ್ರಧಾನ ವಿಧಿಗಳು ಒಳಗೊಂಡಿವೆ. ತಾಯಿಯ ಮಡಿಲಲ್ಲಿ ಕುಳಿತು ಊಟಮಾಡುವುದೇ ಮಾತೃಭೋಜನ. ಐದನೆಯ ವರ್ಷದಲ್ಲಿ ಚೌಲಸಂಸ್ಕಾರ ಆಗಬೇಕೆಂದೂ ಆಗ ಕ್ಷೌರವಾದ ಮೇಲೆ ಸ್ನಾನ ಮಾಡಿ ತಾಯಿಯ

ಮಡಿಲಲ್ಲಿ ಕುಳಿತು ಊಟ ಮಾಡಬೇಕೆಂಬುದು ವಿಧಿ. ಉಪನಯನ ಪ್ರಧಾನ ಹೋಮವಾದ ಮೇಲೆ ಶಿಷ್ಯತ್ವಸಿದ್ಧಿಗಾಗಿ ಅಂಜಲಿ ಬದ್ಧವಾಗಿ ಹಸ್ತಗ್ರಹಣ, ಸೂರ್ಯಾವೀಕ್ಷಣ, ಹೃದಯಾಲಂಭನ, ಅಗ್ನ್ಯುಪಸ್ಥಾನ ಮುಂತಾದ ಕರ್ಮಗಳನ್ನೂ ಮಾಡಲಾಗುತ್ತದೆ. ಬಳಿಕ ಗಾಯತ್ರಿ ಉಪದೇಶ ಕೊಡಲಾಗುತ್ತದೆ. ಮುಂಜಾ ಎಂಬ ಹುಲ್ಲಿನಿಂದ ತಯಾರಿಸಿದ ಮೌಂಜಿಯನ್ನು ಕಟ್ಟುತ್ತಾರೆ. "ಮೇಧಾ" "ದೀರ್ಘಾರಣಾವತಿ ಮೇಧಾ" ತಿಳಿದ ವಿಷಯಗಳನ್ನು ಧಾರಣೆಮಾಡಿ ಸ್ಮರಣೆಯಲ್ಲಿ ಇಟ್ಟುಕೊಳ್ಳುವ ಶಕ್ತಿಯೇ ಮೇಧಾ ಎನಿಸುತ್ತದೆ. ಅದನ್ನು ಉಂಟುಮಾಡಲು ಮೇಧಾಜನನ. ಉಪನಯನವಾದ ಮೇಲೆ ವೇದಾಧ್ಯಯನಾಧಿಕಾರ ಬರುವುದರಿಂದ ವೇದವ್ರತಗ್ರಹಣ – ಸೂಚಕವ್ರತಬಂಧ ಎಂದು ಕರೆಯುತ್ತಾರೆ. ಉಪನಯನ ಸಂಸ್ಕಾರದಿಂದ ಮನುಷ್ಯನಿಗೆ ಪುನರ್ಜನ್ಮವೇ ದೊರೆತಂತಾಗಿ ಅವನಿಗೆ ದ್ವಿಜತ್ವ ಪ್ರಾಪ್ತವಾಗುತ್ತದೆ.

ವಯಸ್ಸಿನಲ್ಲಿ ಆಯ್ಕೆಗೆ ಅವಕಾಶವಿದೆ. ಈ ಅವಕಾಶವು ಕೇವಲ ಅನುಕೂಲತೆಯ ದೃಷ್ಟಿಯಿಂದಲ್ಲ. ಫಲ ಕಾಮನೆಯ ದೃಷ್ಟಿಯಿಂದ. ಗೃಹ್ಯ ಸೂತ್ರಗಳ ಪ್ರಕಾರ ಬೇರೆ ಬೇರೆ ವಯಸ್ಸಿನಲ್ಲಿ ಸಂಸ್ಕಾರ ಮಾಡುವುದು ಬೇರೆ ಬೇರೆ ಫಲಪ್ರಾಪ್ತಿಯ ದೃಷ್ಟಿಯಿಂದ. ಬ್ರಹ್ಮವರ್ಚಸ್ಸಿಗೆ – ಏಳು, ದೀರ್ಘಾಯುಸ್ಸಿಗೆ – ಎಂಟು, ಐಶ್ವರ್ಯಕ್ಕೆ – ಒಂಭತ್ತು, ಭೋಜನ ಕಾಮನೆಗೆ – ಹತ್ತು, ಇಂದ್ರಿಯ ಪಾಟವಕ್ಕೆ – ಹನ್ನೊಂದು, ಪಶುಸಂಪತ್ತಿಗೆ – ಹನ್ನೆರಡು, ಮೇಧಾಶಕ್ತಿಗೆ – ಹದಿಮೂರು, ತೇಜಸ್ಸಿಗೆ – ಹದಿನಾಲ್ಕು, ಬಂಧುಬಾಂಧವ ಸಮೃದ್ಧಿಗೆ – ಹದಿನೈದು ಹಾಗೂ ಎಲ್ಲ ಗುಣಗಳ ಪ್ರಾಪ್ತಿಗೆ ಹದಿನಾರನೇ ವಯಸ್ಸಿನಲ್ಲಿ ಉಪನಯನವೆಂದು ಹೇಳಲಾಗಿದೆ. ಹದಿನಾರು ಕಳೆದರೂ ಉಪನಯನವಿಲ್ಲದಿದ್ದರೆ ಅವನು ವ್ರಾತ್ಯವೆನಿಸುತ್ತಾನೆ. ಅಂದರೆ ಪತಿತನೆಂದು ಲೆಕ್ಕ. ಅಂಥವನಿಗೆ ಉಪನಯನವನ್ನು ಮಾಡಬೇಕಾದರೆ ವ್ರಾತ್ಯಪ್ರಾಯಶ್ಚಿತ್ಯವನ್ನು ಮಾಡಿಕೊಂಡು ಬಳಿಕ ಉಪನಯನವನ್ನು ಮಾಡಬೇಕಾಗುತ್ತದೆ.

೧೧. **ಮಹಾನಾಮ್ನಿ :** ಮಹಾವ್ರತ, ಉಪನಿಷದ್ ವ್ರತ, ಕೇಶಾಂತ, ಗೋದಾನ ಇವುಗಳನ್ನು ಒಟ್ಟಾಗಿ ವೇದವ್ರತಗಳೆಂದು ಕರೆಯುತ್ತಾರೆ. ಗುರುಕುಲದಲ್ಲಿ ಗುರುವಿನ ಬಳಿಯಲ್ಲಿ ಷಡಂಗಸಹಿತವಾಗಿ ಸಕಲ ವೇದಗಳನ್ನು ಈ ಕಾಲದಲ್ಲಿ

ಅಧ್ಯಯನ ಮಾಡುವುದು. ವೇದಾಧ್ಯಯನವಾದ ಮೇಲೆ ಕ್ಷೌರ ಮಾಡಿಸಿ ಸ್ನಾನ ಮಾಡುವುದಕ್ಕೆ ಕೇಶಾಂತ, ದಕ್ಷಿಣಾ ರೂಪದಲ್ಲಿ ಗುರುವಿಗೆ ಗೋವನ್ನು ಅರ್ಪಿಸುವುದು ಗೋದಾನ.

೧೨. **ಸಮಾವರ್ತನ :** ಗೃಹಸ್ಥಾಶ್ರಮ ಸ್ವೀಕಾರಕ್ಕೆ ಗುರುವಿನಿಂದ ಅನುಜ್ಞೆ ಪಡೆಯುವುದು ಮತ್ತು ಇತರ ವಿಧಿಗಳು ಉಪನಯನದಂತೆಯೇ ಇದರಲ್ಲಿಯೂ ಇವೆ. ಗೃಹಸ್ಥನಿಗೆ ಉಪಯುಕ್ತವಾದ ವಿಶಿಷ್ಟ ಉಪದೇಶಗಳನ್ನು ಇಲ್ಲಿ ಕೊಡಲಾಗುತ್ತದೆ.

೧೩. **ವಿವಾಹ :** 'ಧರ್ಮಪ್ರಜಾಸಂಪತಿಃಪ್ರಯೋಜನಂ ವಿವಾಹಸ್ಯ' ಧರ್ಮ ಶ್ರದ್ಧೆಯುಳ್ಳ ಉತ್ತಮ ಸಂತಾನಪ್ರಾಪ್ತಿಯೇ ಬ್ರಾಹ್ಮವಿವಾಹದ ಮುಖ್ಯ ಉದ್ದೇಶ. ವಿವಾಹ ಸಂಸ್ಕಾರವು ಸ್ತ್ರೀಪುರುಷರ ಪರಸ್ಪರ ಸಂಬಂಧ ನಿರ್ಣಾಯಕವಾದುದರಿಂದ ಇದಕ್ಕೆ ಧಾರ್ಮಿಕ ಮಹತ್ವವಿದ್ದಷ್ಟೇ ಸಾಮಾಜಿಕ ಮಹತ್ವವೂ ಇದೆ. ಈ ಸಂಸ್ಕಾರದಲ್ಲಿ ಈ ಕೆಳಗಿನ ಪ್ರಧಾನವಿಧಿಗಳು ಅಂತರ್ಗತವಾಗಿವೆ.

ಅ) **ವಾಗ್ದಾನ :** ಸರ್ವಸಮ್ಮತಿಯಿಂದ, ಹುಡುಗನ ತಂದೆಯು, ಹುಡುಗಿಯ ತಂದೆಯೊಡನೆ ತನ್ನ ಮಗನಿಗಾಗಿ ವಧುವನ್ನು ಕೊಡಬೇಕು ಎಂದು ಕೇಳಿಕೊಳ್ಳುವುದು ಹಾಗೂ ವರನ ಪಿತನು ''ಮಾತಿನಿಂದ ಕೊಟ್ಟಿದ್ದೇನೆ'' ಎಂದು ಪ್ರತಿವಚನವನ್ನು ಹೇಳುವುದು ''ವಾಗ್ದಾನ''ವೆನಿಸುತ್ತದೆ. ಇದರ ಪ್ರತೀಕವಾಗಿ ವರನ ಪಕ್ಷದವರು ವಧುವನ್ನು ವಸ್ತ್ರಾಲಂಕಾರಾದಿಗಳಿಂದ ಸಂತುಷ್ಟಿಪಡಿಸುತ್ತಾರೆ. ಈಗ ಇದನ್ನು ನಿಶ್ಚಿತಾರ್ಥವೆನ್ನಲಾಗುತ್ತಿದೆ.

ಆ) **ಸೀಮಾಂತಪೂಜನ :** ವಧೂಪಕ್ಷದವರು ದಿಬ್ಬಣಸಮೇತ ಬಂದ ವರನನ್ನು ಮತ್ತು ಅವನ ಪಕ್ಷದವರನ್ನು ಸ್ವಾಗತ, ವಸ್ತ್ರಾಲಂಕಾರಾದಿಗಳಿಂದ ಅರ್ಚಿಸುವುದು. ಮೊದಲಿಗೆ ಈ ಪೂಜೆಯು ಗ್ರಾಮದ ಗಡಿಯಲ್ಲಿ ನೆರವೇರುತ್ತಿತ್ತು.

ಇ) **ಮಧುಪರ್ಕ:** ವಿವಾಹಕ್ಕಾಗಿ ಬಂದ ವರನ ಪೂಜೆ, ಕಾಲು ತೊಳೆಯುವುದು. ಜೇನು ಬೆರೆಸಿದ ಮೊಸರನ್ನು ದೇವತೆಗಳಿಗೆ ಅರ್ಪಿಸುವುದು.

ಈ) **ಗೌರೀ ಹರಪೂಜೆ :** ಸೌಭಾಗ್ಯಸಿದ್ಧಿಗಾಗಿ ವಧುವು ಗೌರೀಹರರನ್ನು ಪೂಜಿಸುವುದು.

ಉ) **ಮಂಗಲಾಷ್ಟಕ :** ನಿಶ್ಚಿತವಾದ ಮಂಗಲಮುಹೂರ್ತದಲ್ಲಿ ಮಂಗಲಾಷ್ಟಕ ಪಠನದೊಂದಿಗೆ ವಧೂವರರು ಪರಸ್ಪರ ಮುಖದರ್ಶನ ಮಾಡಿ ಪುಷ್ಪಮಾಲೆಗಳನ್ನು ಹಾಕಿಕೊಳ್ಳುವುದು.

ಊ) **ಕನ್ಯಾದಾನ:** ವಧುವಿನ ಮಾತಾಪಿತರು ಪ್ರತಿಜ್ಞಾಪೂರ್ವಕ ವರನ ಕೈ ಮೇಲೆ ನೀರಿನ ಧಾರೆ ಎರೆದು ಕನ್ಯೆಯನ್ನು ದಾನಮಾಡುವುದು. ಕನ್ಯಾದಾನದಿಂದ ಪೃಥ್ವಿಯನ್ನೇ ದಾನಮಾಡಿದ ಪುಣ್ಯ ಲಭಿಸುತ್ತದೆ. ಕುಲದ ಉದ್ಧಾರವಾಗುತ್ತದೆ. ಮೋಕ್ಷ ಪ್ರಾಪ್ತಿಯಾಗುತ್ತದೆ.

ಋ) **ಅಕ್ಷತಾರೋಪಣ–ಸೂತ್ರವೇಷ್ಟನ:** ವಧೂವರರು ಪರಸ್ಪರ ತಲೆಯ ಮೇಲೆ ಅಕ್ಷತೆಯನ್ನು ಹಾಕುತ್ತ ತಮ್ಮ ತಮ್ಮ ಮನೋಭೀಷ್ಟಗಳನ್ನು ವ್ಯಕ್ತಪಡಿಸುವುದು. ಮುತ್ತೈದೆತನದ ಚಿಹ್ನವೆಂದು ಮಂಗಲಸೂತ್ರವನ್ನು ಕಟ್ಟುವುದು. ಬ್ರಾಹ್ಮಣರು ಮಂತ್ರ ಘೋಷದೊಡನೆ ವಧೂವರರಿಗೆ ಸೂತ್ರವೇಷ್ಟನ ಮಾಡಿಸಿ ಆ ದಾರವನ್ನು ಪರಸ್ಪರರು ಕಂಕಣ ಬಂಧವಾಗಿ ಧರಿಸುವಂತೆ ಕಟ್ಟಿಸುವುದು.

ಎ) **ವಿವಾಹಹೋಮ:** ವಧುವಿಗೆ ಭಾರ್ಯತ್ವಸಿದ್ಧಿಗಾಗಿ ಈ ಹೋಮವನ್ನು ಮಾಡಲಾಗುತ್ತದೆ. ಇದರಲ್ಲಿ ಲಾಜಹೋಮ, ಪಾಣಿಗ್ರಹಣ, ಪರಿಣಯನ (ಅಗ್ನಿಗೆ ಪ್ರದಕ್ಷಿಣೆ ಬರುವುದು) ಆಶ್ಮಾರೋಹಣ (ಸ್ಥಿರತೆಗಾಗಿ) ಸಪ್ತಪದಿ (ಸಖ್ಯಪ್ರಾಪ್ತಿಗಾಗಿ) ಮುಂತಾದ ಕರ್ಮ ಭಾಗಗಳಿವೆ.

ಏ) **ಗೃಹಪ್ರವೇಶನೀಯಹೋಮ:** ಗೃಹಸ್ಥಾಶ್ರಮಸಿದ್ಧಿಗಾಗಿ ಗೃಹ್ಯಾಗ್ನಿಯ ಸ್ಥಾಪನೆ. ಈ ಅಗ್ನಿಯನ್ನು ಅಂತ್ಯೇಷ್ಟಿಯ ವರೆಗೆ ಊರ್ಜಿತವಾಗಿ ಇಡಬೇಕು. ಈಗೀಗ ಅದು ಅಸಾಧ್ಯವೆಂದು ಅನುಸಂಧಾನವಿಧಿ ಮಾಡುತ್ತಾರೆ.

ಐ) **ಚತುರ್ಥೀ ದಿನಕೃತ್ಯ:** ಐರಿಣೀಪೂಜೆ, ವಿವಾಹಕಾರ್ಯಗಳ ಸಮಾರೋಪ ಮತ್ತು ವಧುವನ್ನು ವರನ ಮಾತಾಪಿತೃಗಳ ವಶಕ್ಕೆ ಒಪ್ಪಿಸಿ ಕಳುಹಿಸಿಕೊಡುವುದು.

ಒ) **ಗೃಹಪ್ರವೇಶ–ಲಕ್ಷ್ಮೀಪೂಜನ:** ನೂತನವಧುವಿನೊಂದಿಗೆ ವರನು ಗೃಹಪ್ರವೇಶ ಮಾಡುವುದು. ಪತ್ನೀ ಸ್ವರೂಪಳಾದ ಲಕ್ಷ್ಮಿಯನ್ನು ಪೂಜಿಸುವುದು.

ಓ) **ಸಪ್ತಪದಿ:** ವೈದಿಕ ಸಂಸ್ಕಾರವಾದ ವಿವಾಹದಲ್ಲಿ 'ಸಪ್ತಪದಿ'ಯು ಪ್ರಮುಖ ಘಟ್ಟ. ಸಪ್ತಪದಿ ತುಳಿದಾಗ ಮಾತ್ರವೇ ವಿವಾಹ ಪರಿಪೂರ್ಣ, ಅಧಿಕೃತವೆನಿಸುವುದು ಇದನ್ನು ಹಿಂದು ಕಾನೂನಿನಲ್ಲೂ ಪುರಸ್ಕರಿಸಲಾಗಿದೆ.

ನಾಲ್ಕು ಆಶ್ರಮಗಳಲ್ಲಿ – ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸ – ಗೃಹಸ್ಥಾಶ್ರಮವು ವಿಶಿಷ್ಟವಾದುದು. ಸಮಾಜದ, ಕುಟುಂಬದ, ಮನೆತನದ ಸ್ವಾಸ್ಥ್ಯ ಕಾಪಾಡುವ ಹಿರಿಮೆ ಇದರಲ್ಲಿದೆ.

ಮದುವೆಯ ನಂತರ ಪತಿ, ಪತ್ನಿಯರು ಸಾಮರಸ್ಯದಿಂದ ಬಾಳುತ್ತ, ತಮ್ಮ ಹೊಣೆಗಾರಿಕೆಯನ್ನು ಅರಿತು ನಡೆಯಬೇಕು.

ಶಾರೀರಿಕ ಹಾಗೂ ಮಾನಸಿಕ ದೃಢತೆಗಳನ್ನು ಹೊಂದಿ, ಪರಸ್ಪರರು ತಮ್ಮ ಕರ್ತವ್ಯಗಳನ್ನು ತಿಳಿದುಕೊಂಡು ಕುಟುಂಬ ಪೋಷಣೆ, ಅತಿಥಿ ಸತ್ಕಾರ (ಯಥಾಶಕ್ತಿ) ನಡೆಸಲು ಧರ್ಮಕ್ಕೆ ವಿರೋಧವಾಗದ ರೀತಿ ಧನಾರ್ಜನೆ ಮಾಡಿ, ಆಹಾರವನ್ನು ಸಂಗ್ರಹಿಸಿ, ಸಂರಕ್ಷಣೆ ಮಾಡಿ, ವಿತರಣೆಯನ್ನು ವಿಚಕ್ಷಣೆಯಿಂದ ಮಾಡಬೇಕು.

ಸತ್ಸಂತಾನ ಪಡೆದು ಪಿತೃ ಋಣ ತೀರಿಸಿ, ಮಕ್ಕಳನ್ನು ಸತ್ಪ್ರಜೆಗಳಾಗಿ ಬೆಳೆಸುವ ಜವಾಬ್ದಾರಿ ಹೊರಬೇಕು. ಮನೆತನದ ಸಂಪ್ರದಾಯ, ವ್ರತಾಚರಣೆಗಳನ್ನು ಮುಂದುವರೆಸಿಕೊಂಡು ಬರಬೇಕು.

ಈ ಎಲ್ಲ ಕಾರ್ಯಗಳಲ್ಲೂ ತನಗೆ ಸಹಕಾರ ನೀಡುವ ಹೊಣೆ ಹೊರಬೇಕೆಂಬುದನ್ನು ಸೂಚಿಸುವ ಮಾತುಗಳು ಅರ್ಥಪೂರ್ಣವಾಗಿವೆ.

ಅನ್ನ, ಬಲ, ಸಂಪತ್ತು, ಸಂತಾನ, ಕಾಲಧರ್ಮಕ್ಕೆ ಅನುಗುಣವಾಗಿ ಒದಗುವ ಸವಾಲನ್ನು ಎದುರಿಸುವಲ್ಲಿ ಸಖಿಯಾಗಿರಬೇಕೆಂದು

ಬಯಸುತ್ತೇನೆಂದು ವರನು ಕೇಳಿ, ಆಕೆಗೆ ತನ್ನ ಕರ್ತವ್ಯ ಜವಾಬ್ದಾರಿಗಳನ್ನು ಅರಹುವ ಸಂಕೇತವೇ ಸಪ್ತಪದಿ.

**ಸಪ್ತಪದಿ ಮಂತ್ರ**

ಸಖಾ ಸಪ್ತಪದಾಭವ । ಸಖಾಯೌ ಸಪ್ತಪದಾ ಬಭೂವ ।
ಸಖ್ಯಂ ತೇ ಗವೇಯಂ । ಸಖ್ಯಾತ್ತೇ ಮಾಯೋಷಮ್ ।
ಸಖ್ಯಾನ್ಮೇ ಮಾಯೋಷ್ಠಾಃ । ಸಮಯಾವ ಸಂಕಲ್ಪಾವಹೈ ।
ಸಮ್ಪ್ರಿಯೌ ರೋಚಿಷ್ಣೂ ಸುಮನಸ್ಯಮಾನೌ ।
ಇಷಮೂರ್ಜಮಭಿ ಸಂವಸಾನೌ ಸನ್ನೌಮನಾಗ್‌ಂಸಿ ।
ಸಂವ್ರತಾ ಸಮುಚಿತಾನ್ಯಾಕರಮ್ ।

(ಈ ಏಳು ಹೆಜ್ಜೆಗಳನ್ನಿಡುವುದರಿಂದ ನೀನು
ನನ್ನ ಜೀವನದ ಗೆಳತಿಯಾಗಿರುವೆ.
ನಾವಿಬ್ಬರೂ ಸ್ನೇಹಿತರಾದೆವು. ನಾನು ನಿನ್ನೊಡನೆ
ಗೆಳೆತನದಿಂದ ವಿಮುಖನಾಗುವುದಿಲ್ಲ.
ನೀನೂ ಸಹ ನನ್ನೊಡನಾದ ಗೆಳೆತನದಿಂದ
ವಿಮುಖಳಾಗಬೇಡ. ನಾವಿಬ್ಬರೂ ಒಟ್ಟಾಗಿ ಸೇರಿದ್ದೇವೆ.
ನಾವು ಅನ್ಯೋನ್ಯ ಪ್ರೀತಿಯಿಂದ ಇದ್ದು
ಚಿರಕಾಲ ಬದುಕಿ ಬಾಳೋಣ. ನಾವಿಬ್ಬರೂ ಪರಸ್ಪರ
ಸೌಹಾರ್ದದಿಂದ ಎಲ್ಲ ವಿಷಯಗಳನ್ನೂ
ಸಮಾಲೋಚನೆ ಮಾಡೋಣ. ನಾವು ಯಾವಾಗಲೂ
ಹಸನ್ಮುಖರಾಗಿಯೇ ಇದ್ದುಕೊಂಡು ನಮ್ಮಿಬ್ಬರ
ಮನಸ್ಸುಗಳೂ ಒಂದಾಗಿ ಕಲೆತು, ನಾವಿಬ್ಬರೂ ಸೇರಿ
ಒಂದೇ ವಿಧವಾದ ವ್ರತಾಚರಣೆಗಳನ್ನು ಮಾಡೋಣ.)

## ಸಂಸ್ಕಾರಗಳ ಮಹತ್ವ

ಸಂಸ್ಕಾರ ಎಂಬ ಸಂಸ್ಕೃತ ಪದವು 'ಕೃ' ಎಂಬ ಮೂಲ ಧಾತುವಿನಿಂದ ಜನಿಸಿ 'ಸಂ' ಎಂಬ ಉಪಸರ್ಗ ಮತ್ತು 'ಘನ್' ಎಂಬ ಅಂತ್ಯ ಪ್ರತ್ಯಯದಿಂದೊಡಗೂಡಿ ಅನೇಕ ಅರ್ಥಗಳಲ್ಲಿ ಬಳಕೆಯಾಗಿದೆ. ವಿವಿಧ ದರ್ಶನಗಳು ಈ ಪದಗಳನ್ನು ವಿವಿಧ ಅರ್ಥಗಳಲ್ಲಿ ಬಳಸಿವೆ. ಮೀಮಾಂಸಕರು ಯಜ್ಞಾಹುತಿಯ ಪ್ರೋಕ್ಷಣೆ ಮುಂತಾದ ಕರ್ಮದಿಂದುದಿಸುವ ಗುಣಧರ್ಮ ಎಂಬುದಾಗಿಯೂ, ಅದ್ವೈತಿಗಳು ಶರೀರ ಪ್ರವೃತ್ತಿಯಿಂದುದಿಸಿದ ಆತ್ಮದ ಒಂದು ಕೃತಕ ಗುಣಧರ್ಮ ಎಂದೂ, ನೈಯಾಯಿಕರು 'ಅನುಭವಗಳಾಗಿರುವ ಸ್ವಯಂ ಪುನರುತ್ಪತ್ತಿ ಶಕ್ತಿ ಅಥವಾ ಸಾಮರ್ಥ್ಯ'ವೆಂದೂ ಇದನ್ನು ಅರ್ಥ ಮಾಡಿಕೊಂಡಿದ್ದಾರೆ. ಪ್ರಮಾಣಭೂತವಾದ ಸಂಸ್ಕೃತ ಸಾಹಿತ್ಯದಲ್ಲಿ, ಸಂಸ್ಕಾರವೆಂದರೆ (೧) ಶಿಕ್ಷಣ ತರಬೇತಿ, ಅಭಿವೃದ್ಧಿ, (೨) ಶಿಷ್ಟಾಚಾರ, ನೈಪುಣ್ಯ, ವ್ಯಾಕರಣ ಸ್ವಚ್ಛತೆ, (೩) ಗುಣವರ್ಧನ, (೪) ಒಪ್ಪ ಹಾಕುವುದು, ಅಲಂಕಾರ ಮತ್ತು ಆಭರಣ, (೫) ಅನುಭವ, ಆಕಾರ, ಮುದ್ರೆ, ಹಸ್ತಕ್ರಿಯೆ, ಪ್ರಭಾವ, ಜ್ಞಾನ ಸಂಚಯಕ್ಕೆ ಕಾರಣವಾದ ಕ್ರಿಯಾಪ್ರವೃತ್ತಿ, (೬) ಪ್ರಾಯಶ್ಚಿತ್ತವಿಧಿ, ಪವಿತ್ರಮಯ ಅನುಷ್ಠಾನ ಮತ್ತು ಆಚಾರ, ದೀಕ್ಷೆ, ಪಾವಿತ್ರ್ಯಗೊಳಿಸುವಿಕೆ ಮತ್ತು ಪ್ರೋಕ್ಷಣೆ, (೮) ನಡೆದುಹೋದ ಕಾರ್ಯದ ಫಲ, ಕಾರ್ಯದಿಂದಾದ ಪುಣ್ಯ, ಮುಂತಾದ ಅರ್ಥಗಳಲ್ಲಿ ಬಳಸಿ, ಹಿಂದೂ ಸಂಸ್ಕಾರಗಳು ಕೇವಲ ಸಾಂಪ್ರದಾಯಿಕವಾದ ಶಾರೀರಿಕ ಶುದ್ಧತೆಯೊಂದನ್ನೇ ಗುರಿಯಾಗಿಟ್ಟುಕೊಳ್ಳದೆ, ಪ್ರತಿ ಗ್ರಾಹಕನಲ್ಲಿ ಒಂದು ವಿಶಿಷ್ಟವಾದ ಅರ್ಹತೆಯನ್ನುಂಟುಮಾಡಿ ಅವನ ಪೂರ್ಣ ವ್ಯಕ್ತಿತ್ವವನ್ನು ಪವಿತ್ರಗೊಳಿಸಿ ನೈಪುಣ್ಯ, ಶಿಷ್ಟಾಚಾರವನ್ನೊದಗಿಸುತ್ತವೆ ಎಂಬುದನ್ನು ಸೂಚಿಸುತ್ತದೆ.

ಸಂಸ್ಕಾರಗಳು 'ಭೂ' ಖಂಡವನ್ನೆಲ್ಲಾ ಆವರಿಸಿವೆ. ಸಂಸ್ಕಾರಗಳನ್ನೂ ಮೀರಿದ ಶಕ್ತಿ ದೈವಶಕ್ತಿ – 'ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ತೇನ ತ್ಯಕ್ತೇನ ಭೂಂಜೀಥಾ ಮಾಗೃದಃ ಕಸ್ಯಸ್ವಿದ್ಧನಮ್' ಎಂಬುದು ತತ್ತ್ವ. ನಾವು ವಾಸಿಸುತ್ತಿರುವ ನೆಲ–ಮಣ್ಣು–ಕಲ್ಲನ್ನು ಹದಗೊಳಿಸುವುದೇ ಸಂಸ್ಕಾರ. ನಾವು ಭಗವಂತನನ್ನು ಕಾಣಲು, ಸರ್ವಶಕ್ತನನ್ನು ಸಮೀಪಿಸಲು ಮಾಡುವ ಕಾರ್ಯಕ್ರಮವೇ ಸಂಸ್ಕಾರ. ಇದರಿಂದ ಕಲ್ಲು ವಜ್ರವಾಗುತ್ತದೆ, ಕಲ್ಲು ಮೂರ್ತಿಯಾಗುತ್ತದೆ, ಮಣ್ಣು ಚಿನ್ನವಾಗುತ್ತದೆ, ಮಾನವನು ಪರಮಾತ್ಮನ ಪ್ರಚೋದನೆಯಿಂದ ಕಾರ್ಯಪ್ರವರ್ತನಾಗುತ್ತಾನೆ.

ಇದರಿಂದ ಜೀವಿಯು ಸಂಸ್ಕಾರವಂತನಾಗುತ್ತಾನೆ. ಪ್ರಾಚೀನ ಕರ್ಮಗಳಿಗೆ ಅನುಸಾರವಾಗಿ ಜೀವಿಯು ಗೌರವ ಪ್ರತಿಷ್ಠೆಗಳನ್ನೂ, ಸ್ಥಾನ ಮಾನಗಳನ್ನೂ ಪಡೆಯುತ್ತಾನೆ.

**ಆತ್ಮನೋ ಮೋಕ್ಷಾರ್ಥಂ ಜಗದ್ ಹಿತಾಯಚ :** ಸಂಸ್ಕಾರ ಎಂದರೆ ಯಾವುದೇ ನಿಶ್ಚಿತ ಕಾರ್ಯವನ್ನು ಸುಂದರವಾಗಿ ಮಾಡುವ ವಿಶಿಷ್ಟ ಕ್ರಿಯೆ. **ಯೋಗಃ ಕರ್ಮ ಸುಕೌಶಲಂ** ಎಂಬ ಗೀತಾವಾಣಿಯಂತೆ ಮಾಡುವ ಕೆಲಸ ಸ್ವಚ್ಛ, ಸುಲಭ, ಕೌಶಲ್ಯದಿಂದ ಕೂಡಿರಬೇಕು. ಅಂತಹ ಕಾರ್ಯಕ್ಕೆ ಒಂದು ಗುರಿ (ಧ್ಯೇಯ) ಇರಬೇಕು. ಒಬ್ಬ ಗುರುವು ಇರಬೇಕು. ಹೀಗೆ ನೆರವೇರಿಸಿದ ಕಾರ್ಯ ಸದಾ ಸಿದ್ಧಿಯನ್ನು ಕೊಡುವುದರಲ್ಲಿ ಸಂಶಯವಿಲ್ಲ. ಸದರಿ ಕಾರ್ಯ ಧರ್ಮದಿಂದ ಕೂಡಿ ಬಹುಜನ ಹಿತವಾಗಿರಬೇಕು.

'ಸಂಸ್ಕಾರ'ವೆಂದರೆ ನಿಶ್ಚಿತವಾದ ಕಾರ್ಯವನ್ನು ಕ್ರಿಯಾ (ಕರ್ಮದಿಂದ) ಧರ್ಮ ಶ್ರದ್ಧೆಯಿಂದ ನಿರ್ವಹಿಸುವ ಕಾರ್ಯ. ಇದು ಒಂದು ವೈಜ್ಞಾನಿಕ ತತ್ತ್ವ. ಜೀವಿಯ ಶಾರೀರಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಉನ್ನತಿಯನ್ನು ಪಡೆಯುವ ಉನ್ನತ ಕಾರ್ಯ. ಇದು ದೇಹವನ್ನೂ, ಮಾನವ ಸಮಾಜವನ್ನೂ ಪವಿತ್ರಗೊಳಿಸುವ ಕಾರ್ಯ.

ಸಂಸ್ಕಾರಗಳ ಆಚರಣೆಯಲ್ಲಿ ಮೂರು ಸ್ತರಗಳಿವೆ. ಅವು ಯಾವುದೆಂದರೆ, (೧) ದೋಷಮಾರ್ಜನ, (೨) ಅತಿಶಯದಾನ, (೩) ಊನಾಂಗ ಪೂರಣ.

**೧. ದೋಷಮಾರ್ಜನ :** ವ್ಯಕ್ತಿಯ, ವಸ್ತುವಿನ ದೋಷ ಮತ್ತು ಮನುಷ್ಯನ ಮನಸ್ಸಿನ ದೋಷ (ತಪ್ಪು ತಿಳುವಳಿಕೆ) ಗಳನ್ನು ತೊಳೆಯುವುದು ಎಂದರ್ಥ (ಮಾರ್ಜನ ಎಂದರೆ ಸ್ನಾನ)

**೨. ಅತಿಶಯದಾನ :** ವಸ್ತು ವಿಶೇಷಗಳನ್ನು ಶುದ್ಧೀಕರಿಸುವುದು. ವ್ಯಕ್ತಿಯು ಆರೋಗ್ಯವಾಗಿ ಬುದ್ಧಿವಂತವಾಗಿ ಬದುಕಲು ವ್ಯಾಯಾಮ ಯೋಗ ಇತ್ಯಾದಿ ಕಲಿಯುವುದು ಇತ್ಯಾದಿ.

**೩. ಊನಾಂಗಪೂರಣ :** ಇರುವ ವಸ್ತುಗಳನ್ನು ಪರಸ್ಪರ ಕೂಡಿಸಿ ಅಥವಾ ಬೇರೆ ವಸ್ತುಗಳನ್ನು ಕೂಡಿಸಿ ಅದಕ್ಕೆ ಹೆಚ್ಚಿನ ಹಾಗೂ ಉಪಯುಕ್ತ ಸೌಂದರ್ಯ ಬಲಗಳನ್ನು ತರಿಸುವುದು.

## ಸಂಸ್ಕಾರಗಳ ವ್ಯಾಪ್ತಿ

ಗೃಹ್ಯ ಸೂತ್ರಗಳು ಸಂಸ್ಕಾರಗಳನ್ನು ವಿವರಿಸುವಾಗ ಸಾಮಾನ್ಯವಾಗಿ ವಿವಾಹದಿಂದ ಮೊದಲು ಮಾಡಿ ಸಮಾವರ್ತನದಲ್ಲಿ ಕೊನೆ ಮಾಡುತ್ತವೆ. ಸಾವು ಅಪವಿತ್ರ ಮತ್ತು ಅಮಂಗಳಕರವೆಂಬ ಕಾರಣದಿಂದಲೋ ಏನೋ ಅನೇಕ ಸೂತ್ರಗಳಲ್ಲಿ ಅಂತ್ಯೇಷ್ಟಿಯನ್ನು (ಉತ್ತರ ಕ್ರಿಯೆ) ವಿವರಿಸುವುದಿಲ್ಲ. ಪಾರಸ್ಕರ, ಆಶ್ವಲಾಯನ ಮತ್ತು ಬೌಧಾಯನ ಗೃಹ್ಯ ಸೂತ್ರಗಳಲ್ಲಿ ಅಂತ್ಯೇಷ್ಟಿಯನ್ನು ವಿವರಿಸುವ ಪ್ರಕರಣಗಳೇ ಇವೆ. ಗೃಹ್ಯ ಸೂತ್ರಗಳಲ್ಲಿ ಹನ್ನೆರಡರಿಂದ ಮೊದಲುಗೊಂಡು ಹದಿನೆಂಟು ಸಂಸ್ಕಾರಗಳವರೆಗೂ ಉತ್ತರಕ್ರಿಯೆಯ ಬಗ್ಗೆ ವಿವರಣೆ ಇದೆ. ಕಾಲಾನುಕ್ರಮದಲ್ಲಿ ಸಂಸ್ಕಾರಗಳ ಸಂಖ್ಯೆಯು ಈ ಕೆಳಗೆ ಕಾಣುವ ಹದಿನಾರು ಎಂದು ನಿರ್ಣಯಿಸಲಾಗಿದೆ : (೧) ಗರ್ಭಾದಾನ (೨) ಪುಂಸವನ (೩) ಸೀಮಂತೋನ್ನಯನ (೪) ಜಾತಕರ್ಮ (೫) ನಾಮಕರಣ (೬) ನಿಷ್ಕ್ರಮಣ (೭) ಅನ್ನಪ್ರಾಶನ (೮) ಚೂಡಾಕರ್ಮ (೯) ಕರ್ಣವೇಧ (೧೦) ವಿದ್ಯಾರಂಭ ಅಥವಾ ಅಕ್ಷರಾರಂಭ (೧೧) ಉಪನಯನ (೧೨) ವೇದಾರಂಭ (೧೩) ಕೇಶಾಂತ (೧೪) ಸಮಾವರ್ತನ (೧೫) ವಿವಾಹ (೧೬) ಅಂತ್ಯೇಷ್ಟಿ.

ಇದೂ ಅಲ್ಲದೆ ಸಂಸ್ಕಾರಗಳು ಸಮಾಜದ ಪ್ರಗತಿಯನ್ನು ಸೂಚಿಸುವಂತಹ ಸಾಂಸ್ಕೃತಿಕ ಉದ್ದೇಶಗಳನ್ನು ಹೊಂದಿವೆ. ಐಶ್ವರ್ಯ, ಆಯುಷ್ಯ, ಸಂತಾನ, ಕೀರ್ತಿ, ಗೋಸಂಪತ್ತು, ಶಾರೀರಿಕ ಮತ್ತು ಮಾನಸಿಕ ಬಲ ಮುಂತಾದ ಸಾಂಸಾರಿಕ ಸುಖಪ್ರದವಾದ ವಸ್ತುಗಳನ್ನು ಬಯಸುವ ಯಜ್ಞ ಕರ್ಮಗಳನ್ನು ಇವು ಒಳಗೊಂಡಿವೆ. ಪುರೋಹಿತರು ಸಮಾಜದ ಶಾಸ್ತ್ರವಿಧಿಗಳು ಮತ್ತು ಅವುಗಳ ಆಚರಣೆಯಲ್ಲಿ ಮತ್ತಷ್ಟು ಮಾರ್ಪಾಡುಗಳನ್ನು ತಂದರು. ಅವರು ಗೃಹಸ್ಥರ ಲೌಕಿಕ ಆಕಾಂಕ್ಷೆಗಳನ್ನು ಸ್ವಾಗತಿಸಿ ಆಶೀರ್ವದಿಸಿದರಲ್ಲದೆ ಸಮಾಜದ ಜನತೆಯನ್ನು ಪಾವನಗೊಳಿಸಿ ಅವರ ಆಧ್ಯಾತ್ಮ ಪ್ರಗತಿಯಲ್ಲಿ ಸಹಕರಿಸಿದರು.

ಪುರಾತನ ಹಿಂದೂ ಧರ್ಮದಲ್ಲಿ ಉಕ್ತವಾದ ಕರ್ಮಾಚರಣೆ ಮತ್ತು ಯಜ್ಞಗಳಿಂದಾದ ಸಾಂಸ್ಕೃತಿಕ ಲಾಭವು ಮೂಲತಃ ವ್ಯಕ್ತಿಯ ಪ್ರಗತಿಗೆ ಪೋಷಕವಾಗಿದ್ದುವು. ಒಂದು ಚಿತ್ರದ ರಚನೆಯಲ್ಲಿ ಅನೇಕ ಬಣ್ಣಗಳು ಸಹಕರಿಸುವಂತೆ ಒಬ್ಬ ವ್ಯಕ್ತಿಯ ಸ್ವಭಾವವು ಅವನು ಆಚರಿಸುವ ಎಲ್ಲಾ ಸಂಸ್ಕಾರಗಳಿಂದ ರೂಪಿತವಾಗುತ್ತದೆ. ತಮ್ಮ ಸಮಾಜದಲ್ಲಿ ಜನಿಸಿದ ವ್ಯಕ್ತಿಯ

ಗುಣ ಧರ್ಮಗಳನ್ನು ತಮಗಿಚ್ಛೆ ಬಂದಂತೆ ಬೆಳೆಯಲು ಬಿಡದೆ ಎಚ್ಚರದಿಂದ ಮಾರ್ಪಡಿಸಿ ರೂಪಿಸುವ ಅವಶ್ಯಕತೆಯನ್ನು ಪುರಾತನ ಋಷಿಗಳು ಮನಗಂಡಿದ್ದರು. ವಿನೂತನ ರೀತಿಯಲ್ಲಿ ವ್ಯಕ್ತಿ ಧರ್ಮವನ್ನು ರೂಪಿಸುವುದೆಂದರೆ ಕೇವಲ ಪಡಿಯಚ್ಚುಗಳನ್ನಾಗಿ ಮಾಡುವುದೆಂದರ್ಥವಲ್ಲ. ಸಕಾಲದಲ್ಲಿ ವ್ಯಕ್ತಿಗೆ ಬೇಕಾಗುವ ಮಾರ್ಗದರ್ಶನ ಮತ್ತು ಸಹಕಾರವನ್ನು ದೊರಕಿಸುವುದೆಂದರ್ಥ. ಮಾನವನು ಹುಟ್ಟುವಾಗ ಶೂದ್ರನಾಗಿದ್ದು, ಸಂಸ್ಕಾರಗಳ ಆಚರಣೆಯಿಂದ ದ್ವಿಜನಾಗಿ, ವೈದಿಕ ಜ್ಞಾನದಿಂದ ವಿಪ್ರನಾಗಿ (ಸ್ಫೂರ್ತಿ ಪಡೆದ ಕವಿ) ಬ್ರಹ್ಮ ಜ್ಞಾನವನ್ನು ಗಳಿಸಿ ಬ್ರಾಹ್ಮಣನಾಗುತ್ತಾನೆಂಬ ಕಲ್ಪನೆ ಇನ್ನೂ ರೂಢಿಯಲ್ಲಿದೆ. ಕೇವಲ ಆಚರಣೆಗೋಸ್ಕರವಾಗಿ ಸಂಸ್ಕಾರಗಳನ್ನು ಆಚರಿಸುತ್ತಿರಲ್ಲಿಲ್ಲ. ಅವುಗಳನ್ನು ನೈತಿಕ ಬೆಳವಣಿಗೆ ಮತ್ತು ಧಾರ್ಮಿಕ ಪರಿಪಕ್ವತೆಗಾಗಿ ಆಚರಿಸುತ್ತಿದ್ದರು. ಇವುಗಳ ಆಚರಣೆಯ ಅವಶ್ಯಕತೆಯನ್ನು ಹೇಳುವಾಗ ಗೌತಮನು, ಮಾನವನು ತನ್ನ ಬಾಳಿನ ಪರಮ ಧ್ಯೇಯವನ್ನು ಪಡೆಯಬೇಕಾದರೆ, ಕೇವಲ ಸಂಸ್ಕಾರಗಳಿಂದ ಮಾತ್ರವೇ ಸಾಧ್ಯವಿಲ್ಲ. ಅವುಗಳ ಜೊತೆಗೆ ಆತ್ಮಬಲವೂ ಬೆಳೆಯಬೇಕು. ಆದ್ದರಿಂದಲೇ ಬಾಳಿನ ವಿವಿಧ ಹಂತಗಳಲ್ಲಿ ಆಚರಿಸಲಾಗುವ ವಿವಿಧ ಸಂಸ್ಕಾರಗಳು ಸೂಕ್ತವಾಗಿ ಹಾಗೂ ವಿವಿರವಾಗಿ ವಿಧಿಸಲ್ಪಟ್ಟ ನೈತಿಕ ನಿಬಂಧನೆಗಳಿಂದ ಆವೃತವಾಗಿವೆ.

ಮರಣದ ತನಕ ಆಚರಿಸುವ ಸಂಸ್ಕಾರಗಳು ಮತ್ತು ಮರಣೋತ್ತರ ಸಂಸ್ಕಾರಗಳು ಎಂಬ ಎರಡು ಬಗೆಗಳಿವೆ. ಅವುಗಳನ್ನು ಪೂರ್ವ ಸಂಸ್ಕಾರಗಳು ಮತ್ತು ಉತ್ತರ ಸಂಸ್ಕಾರಗಳು ಎನ್ನುತ್ತಾರೆ.

**ಸಂಸ್ಕಾರ ಪ್ರಭೇದಗಳು**

ಋಷಿಗಳು ಸಂಸ್ಕಾರಗಳಲ್ಲಿ ಇನ್ನೂ ಮೂರು ಬಗೆಯ ವಿಭೇದಗಳನ್ನು ಗುರುತಿಸಿದ್ದಾರೆ. ಅವು ಯಾವುದೆಂದರೆ : ೧. ಶ್ರೌತ, ೨. ಸ್ಮಾರ್ತ ೩. ತಂತ್ರ ಎಂಬ ವೇದೋಕ್ತ ಸಂಸ್ಕಾರಗಳು.

೧. ಶ್ರೌತ ಸಂಸ್ಕಾರ ಎಂದರೆ ವೇದೋಕ್ತ ಕರ್ಮಗಳಾದ ಯಜ್ಞ-ಯಾಗಾದಿಗಳನ್ನು ಆಚರಿಸುವುದು.

೨. ಸ್ಮಾರ್ತ ಸಂಸ್ಕಾರ ಎಂದರೆ ಸ್ಮೃತಿ ಶಾಸ್ತ್ರದ ಪ್ರಕಾರ ಮನುಷ್ಯನ ಹುಟ್ಟಿನಿಂದ ಸಾವಿನ ತನಕ ಆಚರಿಸುವ ಸಂಸ್ಕಾರಗಳು.

೩. ತಂತ್ರ ಸಂಸ್ಕಾರ ಎಂದರೆ ಮಂತ್ರ-ತಂತ್ರ ಮುಂತಾದವುಗಳಿಂದ ಕೂಡಿದ ವೇದೋಕ್ತ ಯಜ್ಞ-ಯಾಗಗಳು ಇತ್ಯಾದಿ (ಉದಾ: ನಮಮ ನಮಮ).

ಅವುಗಳಲ್ಲಿ ಒಂದರಿಂದ ಹದಿನೈದು ಜೀವ ದೈವತ್ವವನ್ನು ಪಡೆಯಲು ಆಚರಿಸುವ ಸಂಸ್ಕಾರಗಳು. ಹದಿನಾರನೇ ಸಂಸ್ಕಾರ ಅಂತ್ಯೇಷ್ಟಿ (ಸಾವು). ಪ್ರಾಣವಾಯು ಈ ಶರೀರದಿಂದ ಕಣ್ಮರೆಯಾಗುವವರೆಗೆ ಆಚರಿಸಬೇಕಾದ ಕರ್ಮಗಳು ಮತ್ತು ಪ್ರಾಣ ಶರೀರದಿಂದ ಮಾಯವಾದ ನಂತರ ಜಡ ದೇಹವನ್ನು ಇತಿಶ್ರೀ ಗೊಳಿಸುವ ಕ್ರಿಯೆಗಳು. ಈ ಕಾರ್ಯಗಳಿಗೆ **ಉತ್ತರ** ಕ್ರಿಯೆಗಳು ಎಂದು ಕರೆಯುತ್ತಾರೆ. ಜೀವಿಯು ದೇಹತ್ಯಾಗ ಮಾಡಿದಾಗಿನಿಂದ ಒಂದು ವರ್ಷದ ಕಾಲ ಆಚರಿಸುವ ಕಾರ್ಯಕ್ರಮಗಳಿಗೆ ಅಂತ್ಯೇಷ್ಟಿ ಎಂದು ಹೆಸರು. ವರ್ಷ ಪೂರ್ತಿ ತಿಲತರ್ಪಣ, ಪಿಂಡದಾನ ಮತ್ತು ದಶ ದಾನಗಳನ್ನು ಬ್ರಾಹ್ಮಣರಿಗೆ ಕೊಡುವುದೇ ಅಂತ್ಯೇಷ್ಟಿಯ ಮುಖ್ಯ ಕಾರ್ಯಕ್ರಮಗಳು. ವರ್ಷ ಕಳೆದ ಮೇಲೆ ಪ್ರತೀ ವರ್ಷ ಭಾದ್ರಪದ ಕೃಷ್ಣ ಪಾಡ್ಯಮಿಯಿಂದ ಮಹಾಲಯ ಅಮಾವಾಸ್ಯೆಯವರೆಗೆ ಪಿತೃಪಕ್ಷವೆಂತಲೂ, ಈ ಪಕ್ಷದಲ್ಲಿ ಮೃತರ ಹೆಸರಿನಲ್ಲಿ ಕೊಡುವ ದಾನಗಳು ಮಹಾ ಶ್ರೇಷ್ಠವೆಂತಲೂ, ಮೋಕ್ಷದಾಯಕ ಕರ್ಮವೆಂತಲೂ ಋಷಿಮುನಿಗಳು ಹೇಳಿದ್ದಾರೆ.

**ಪರಿಸಮಾಪ್ತಿ**

ಮಾನವನ ಬಾಳು ಎಂಬುದು ಗಹನವಾದ ಕಲೆ. ಇದರಲ್ಲಿ ಸದಾ ಜಾಗೃತವಾಗಿದ್ದು, ಸಂಸ್ಕರಿಸಿ ಹಸನುಗೊಳಿಸುವ ಹೊಣೆಗಾರಿಕೆಯನ್ನು ಅರಿತು ಬಾಳಬೇಕು ಎಂಬುದನ್ನು ಪುರಾತನ ಹಿಂದೂಗಳು ಗ್ರಹಿಸಿದ್ದರು. ಹುಟ್ಟಿದಂದಿನಿಂದಲೂ ತಾನೇ ತಾನಾಗಿ ಸ್ವೇಚ್ಛಾಪ್ರವರ್ತಕನಾದ ಮನುಷ್ಯನು ಅಶಿಕ್ಷಿತನೂ ಕ್ರೂರಿಯೂ ಆಗಿ ಪಂಚಭೂತಗಳಿಂದಾದ ಕೇವಲ ಒಂದು ಮೃಗದಂತಾಗಿ ಮಿಕ್ಕ ಕಾಡುಮೃಗಗಳಿಗಿಂತಲೂ ಯಾವ ರೀತಿಯಲ್ಲಿಯೂ ಉತ್ತಮನೆನಿಸುವುದಿಲ್ಲ. ಹಾಗಾಗಬಾರದೆಂದು ಅವನ ಬಾಳಿಗೆ ಸೂಕ್ತ ರಕ್ಷಣೆ ಮತ್ತು ಎಚ್ಚರಿಕೆಯನ್ನು ಸೂಚಿಸಬೇಕಾಗುತ್ತದೆ. ಇದಕ್ಕಾಗಿಯೆ ಪ್ರಾಚೀನಕಾಲದ ಋಷಿಗಳು ಈ ಅಶಿಕ್ಷಿತನಾದ ಮಾನವನನ್ನು ಸೂಕ್ತವಾದ ಸಂಸ್ಕಾರಗಳ ಸಹಾಯದಿಂದ ಸುಸಂಸ್ಕೃತನಾದ ಮಾನವನನ್ನಾಗಿ ಮಾರ್ಪಡಿಸಲು ಯತ್ನಿಸಿದ್ದಾರೆ. ಕರ್ಮಕಾಂಡದಲ್ಲಿ ಹೇಳಿರುವಂತೆ ಬಾಳು ಒಂದು ಚಕ್ರಗತಿಯಲ್ಲಿ ಚಲಿಸುತ್ತದೆಂಬುದನ್ನು ತಾತ್ವಿಕರೂ ಒಪ್ಪುತ್ತಾರೆ. ಅದು ಎಲ್ಲಿ ಮುಗಿಯುತ್ತದೋ ಅಲ್ಲಿಯೇ ಮೊದಲಾಗುತ್ತದೆ. ಕೊನೆಗಾಣದ ಆಸೆ, ಭೋಗಾಪೇಕ್ಷೆ ಮತ್ತು ಸತತ ಚಿಂತನೆ, ಈ ತಿರುಗಣೆಯ ಸುತ್ತಲೂ ನಮ್ಮ ಬಾಳಿನ ಎಲ್ಲ ಘಟನೆಗಳು ಸದಾ ಸುತ್ತುತ್ತಿರುತ್ತವೆ. ನಮ್ಮ ಎಲ್ಲಾ ಸಂಸ್ಕಾರಗಳು ಮತ್ತು ಅವುಗಳಿಗೆ ಸೇರಿದ ವಿಧಿನಿಯಮಗಳೂ ಸಹ ಇವುಗಳಿಂದಲೇ ಹುಟ್ಟಿವೆ.

## ಧಿಯೋ ಯೋನಃ ಪ್ರಚೋದಯಾತ್

ವಿಶ್ವದಲ್ಲೇ ಸುವ್ಯವಸ್ಥಿತವೆನಿಸಿರುವ ಧರ್ಮ ಸನಾತನ ಧರ್ಮ. ಅದೇ ಮಾನವ ಧರ್ಮ. ಈ ಧರ್ಮವು ಪ್ರಾಜ್ಞತೆ, ಉನ್ನತಿ ಮತ್ತು ಪರಿಶುದ್ಧತೆಗೆ ಹೆಸರಾಗಿದೆ. ಇದು ತ್ಯಾಗಭೋಗಗಳ ಗಣಿಯಾಗಿ ಸರ್ವ 'ಸ' ಕಾರಾತ್ಮಕ ಯೋಜನೆಗಳ ಗುಂಪಾಗಿ ರೂಪಗೊಂಡಿದೆ. ಸರ್ವೇಷಾಂ ಅವಿರೋಧೇನ ಬ್ರಹ್ಮಕರ್ಮ ಸಮಾರಭೇತ್ ಎಂದು ವೇದಗಳು ಸಾರಿವೆ. ಭಾರತೀಯ ಧರ್ಮದ ಮೂಲ. ಮಾನವೀಯತೆಯೆ ಸರ್ವ ಸಿದ್ಧಾಂತಗಳ ಸಾರ, ಸರ್ವ ಮತಗಳ ಗುರಿ.

ಸಮಗ್ರವೇದಗಳನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ೧. ಜ್ಞಾನ ಕಾಂಡ ೨. ಉಪಾಸನಕಾಂಡ ಮತ್ತು ೩. ಕರ್ಮಕಾಂಡ ಎಂದು.

'ಜ್ಞಾನ' ಎಂಬ ಮಾತಿಗೆ ವಿಜ್ಞಾನವನ್ನೊಳಗೊಂಡ ತತ್ವಜ್ಞಾನವೆಂತಲೂ (ಜ್ಞಾನಂ – ವಿಜ್ಞಾನ ಸಹಿತಂ ಎಂಬುದು ಗೀತಾವಾಕ್ಯ) ಉಪಾಸನ ಮತ್ತು ವ್ರತ ಕರ್ಮ ಎಂಬ ಮಾತುಗಳು ನಿಜ ಜೀವನದಲ್ಲಿ 'ಕರ್ಮ' ಎಂಬ ನಿಯಮಾವಳಿಯ ಪಟ್ಟಿಯನ್ನೊಳಗೊಂಡಿದೆ.

'ಜ್ಞಾನ' 'ಉಪಾಸನಾ' ಮತ್ತು 'ಕರ್ಮ' ಎಂಬ ವಚನಗಳು ಅರ್ಥಾತ್ ತತ್ತ್ವಜ್ಞಾನ–ಧ್ಯಾನ (ತಪಸ್ಸು) ಮತ್ತು ವೇದಗಳಲ್ಲಿ ಕಂಡುಬರುವ ವೈದಿಕ (ಕಾರ್ಯ) ಗಳು ಸಾಮಾನ್ಯ ಬಳಕೆಯಲ್ಲಿ 'ಕರ್ಮ' ಎಂಬ ಮಾತುಗಳಾಗಿ ಮಾನವನ ಎಲ್ಲಾ ಕ್ರಿಯೆಗಳನ್ನೂ ಒಳಗೊಂಡಿವೆ. ಹಾಗೆಯೇ ಆಚಾರ–ವ್ಯವಹಾರ– ಪ್ರಾಯಶ್ಚಿತ ಭಾಗಗಳನ್ನೂ ಒಳಗೊಂಡು ವಿಧಿ ನಿಷೇಧಗಳನ್ನೊಳಗೊಂಡ ಶೃತಿ–ಸ್ಮೃತಿ–ಧರ್ಮಶಾಸ್ತ್ರಗಳನ್ನು ಒಳಗೊಂಡ ಶಾಸ್ತ್ರ ಗ್ರಂಥಗಳಾಗಿವೆ. ಜೀವನವೇ 'ಯಜ್ಞ' ಎಂಬ ವಾದ ಸರಣಿಯಲ್ಲಿ ಯಜ್ಞಾಂಗಗಳೂ ಸೇರಿವೆ. ಕರ್ಮಕಾಂಡದಲ್ಲಿ ಬಹುಪ್ರಧಾನ ಅಂಗವೆಂದರೆ ಸಂಸ್ಕಾರಗಳು.

೧. ನಮಗೆ ಉಪಕಾರ ಮಾಡಿದವರಿಗೆ ಪ್ರತ್ಯುಪಕಾರ ಮಾಡುವುದು ಭಾರತೀಯ ಸಂಸ್ಕೃತಿಯ ಪ್ರಥಮ ಕರ್ತವ್ಯ.

೨. ನಮ್ಮ ಹುಟ್ಟಿಗೆ ಕಾರಣರಾದ ತಂದೆತಾಯಿಗಳನ್ನು ಗೌರವಿಸುವುದು ಆದ್ಯ ಕರ್ತವ್ಯವೇ ಆಗಿದೆ.

೩. ಬದುಕಿನ ಮೇಲೆ ಪ್ರಭಾವ ಬೀರಿದವರಿಗೆ ಕೃತಜ್ಞತೆಯಿಂದ ಸ್ಮರಿಸುವುದೂ ಸಹ ಪ್ರತಿಯೊಬ್ಬ ಮನುಷ್ಯನ ಕರ್ತವ್ಯ.

ಮಾಧವನಿದಾನವೆಂಬ ಆಯುರ್ವೇದ ಗ್ರಂಥ ಈ ಕೆಳಗಿನಂತೆ ವಿವರಿಸುತ್ತದೆ.

**ಪೂರ್ವಜನ್ಮ ಕೃತಂಪಾಪಂ ವ್ಯಾಧಿರೂಪೇಣ ಬಾಧ್ಯತೇ ।**
**ತಚ್ಛಾಂತಿಷಧೈದಾರ್ತಾ ನೈರ್ಜಪ ಹೋಮ ಸುರಾರ್ಚನೈಃ ॥**

ಪೂರ್ವಜನ್ಮದಲ್ಲಿ ಮಾಡಿದ ಪಾಪವು ವ್ಯಾಧಿರೂಪವನ್ನು ಧರಿಸಿ ಪೀಡಿಸುತ್ತದೆ. ಅದನ್ನು ಔಷಧ, ದಾನ, ಜಪ, ಹೋಮ ಮತ್ತು ದೇವತಾ ಆಚರಣೆಗಳಿಂದ ಶಮನಗೊಳಿಸಿಕೊಳ್ಳಬಹುದು. ಅಂದರೆ ವ್ಯಾಧಿ ನಿವಾರಣೆಗೆ ಇವೆಲ್ಲ ಸ್ವೀಕೃತ ಮಾರ್ಗಗಳು. ಇವುಗಳನ್ನು ಅಂಧಃಶ್ರದ್ಧೆ ಎಂದು ತಳ್ಳಿಹಾಕಬಾರದು.

----

ನವಗ್ರಹಗಳ ಗುಂಪಿಗೆ ಸೂರ್ಯನೇ ಆತ್ಮ, ಚಂದ್ರನೇ ಮನಸ್ಸು, ಮಂಗಳನಿಂದ ರಕ್ತಸಂಚಾರ, ಬುಧನಿಂದ ಕಲ್ಪನಾ ಶಕ್ತಿ, ಗುರುವಿನಿಂದ ಜ್ಞಾನ, ಶುಕ್ರನಿಂದ ವೀರ್ಯ, ಶನಿಯಿಂದ ಸುಖ ದುಃಖಗಳು ಇತ್ಯಾದಿ ಅನುಭೂತಿಗಳುಂಟಾಗುತ್ತವೆ. ಬದುಕಿನಲ್ಲಿ ನಮಗೆ ನೆರವನ್ನಿತ್ತವರಿಗೆ ಕೃತಜ್ಞತೆಯನ್ನರ್ಪಿಸುವುದು ಲೋಕಾರೂಢಿ. ನವಗ್ರಹಗಳು ನಮ್ಮ ಬದುಕು ಭಾಗ್ಯಗಳನ್ನು ಕೊಡುವರು. ಅದಕ್ಕಾಗಿ ನವಗ್ರಹಗಳನ್ನು ಕೃತಜ್ಞತೆಯಿಂದ ಸ್ಮರಿಸಿ ಪೂಜಿಸುವುದು ನಮ್ಮ ಧರ್ಮ. ನವಗ್ರಹಗಳು ಮಾನವ ಪ್ರಪಂಚದ ಇತರ ವರ್ಗಗಳಿಗಿಂತ ವಿಶಿಷ್ಟ.

ಕೋಟಿ ಕೋಟಿ ಭಕ್ತರು ಪ್ರತಿದಿನವೂ ಗ್ರಹಗಳ ಪೂಜೆ – ಮಂತ್ರ ಪಠನದಿಂದ, ಹವನ ಹೋಮಗಳಿಂದ ಮನಶ್ಶಾಂತಿ ಹಾಗೂ ಪರಿಹಾರಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಸಂಸ್ಕಾರಗಳು ಮೌಢ್ಯಗಳಲ್ಲ. ಇದನ್ನು ಅಲ್ಲಗಳೆಯಬಾರದು. ಇವುಗಳನ್ನು ಶೋಧಿಸಿ, ಅನುಭವಿಸಿ, ಶಾಂತಿ ಪಡೆಯಿರಿ ಎಂಬುದೇ ಸಂಸ್ಕಾರಗಳ ಸಂದೇಶ.

**ಆಹಾರ ನಿದ್ರಾ ಭಯ ಮೈಥುನಾಶ್ಚ ಸಮಾನ ಮೇತತ್ ಪಶುಭಿಃ ನರಾಣಾಂ ।**
**ಧರ್ಮೇತೇಷಾ ಮಥಿತೋ ವಿಶೇಷೋ। ಧರ್ಮೇಣನಾಃ ಪಶುಭಿಃ ಸಮಾನಾಃ॥**

ಎಂಬ ಪುರಾಣ ವಾಕ್ಯದಂತೆ ಸಾವು ಈ ನಾಲ್ಕು ಅಂಶಗಳ ಜಗತ್ತಿನ ಸರ್ವಜೀವ ಜಂತುಗಳಿಗೂ, ಪಶುಪಕ್ಷಿಗಳಿಗೂ, ಕ್ರಿಮಿಕೀಟಗಳಿಗೂ, ಸಸ್ಯಗಳಿಗೂ ಆವರಿಸಿಕೊಂಡಿದೆ. ವಿಜ್ಞಾನಿಗಳು ಸಾವನ್ನು ಮುಂದೆ ತಳ್ಳುವುದಕ್ಕೆ ಪ್ರಯತ್ನಿಸುತ್ತಿದ್ದಾರೆಯೇ ಹೊರತು, ಸಾವೇ ಇಲ್ಲದ ಜಗತ್ತನ್ನು ಕಂಡುಹಿಡಿಯಲು ಹೊರಟಿಲ್ಲ. ಸುಖ ಭೋಗಗಳ ಜೀವನ ವಿಜ್ಞಾನದ ಗುರಿ. ಹಾಗಿದ್ದಲ್ಲಿ ಈ ಸಾವು ಹುಟ್ಟುಗಳ ರಹಸ್ಯವೇನು? ಯಾರಾದರೂ ಈ ಕಾಲಚಕ್ರವನ್ನು ಭೇದಿಸಿದ್ದಾರೆಯೇ?

ಧರ್ಮಾಚರಣೆಯಿಲ್ಲದ ಮನುಷ್ಯ ಪಶುಸಮಾನ ಅರ್ಥಾತ್ ವಿದ್ಯಾವಿಹೀನಃ ಪಶುಃ ಎಂದು ಶೃತಿ ಸ್ಮೃತಿಗಳು ತಿಳಿಸುತ್ತವೆ.

***ಲೇಖಕರು : "ಜೀವನಯಜ್ಞ" ಸಂಪಾದಕರು***

# ಕರ್ಣವೇಧ

***ಜಿ. ಪಿ. ವಿದ್ಯಾ***

ಕರ್ಣವೇಧನ ಕಾರ್ಯಕ್ರಮವು ಗಂಡಾಗಲಿ, ಹೆಣ್ಣಾಗಲಿ ಎಲ್ಲ ಮಕ್ಕಳಿಗೂ ಮಾಡಬೇಕಾದ ಸಂಸ್ಕಾರ. ದೇವಗುರು ಬೃಹಸ್ಪತಿಯ ಪ್ರಕಾರ ಈ ಸಂಸ್ಕಾರವು ಮಗು ಹುಟ್ಟಿದ ನಂತರ ಹತ್ತನೇ, ಹನ್ನೆರಡನೇ ಅಥವಾ ಹದಿನಾರನೇ ದಿನದಂದು ಆಚರಿಸಬೇಕು. ಗರ್ಗ ಋಷಿಗಳು ಮಗುವಿಗೆ ಆರನೇ, ಏಳನೇ ಅಥವಾ ಹನ್ನೆರಡನೇ ತಿಂಗಳು ಈ ಸಂಸ್ಕಾರವನ್ನು ಆಚರಿಸಲು ಸೂಕ್ತವೆಂದು ತಿಳಿಸುತ್ತಾರೆ. ಕಾತ್ಯಾಯನ ಸೂತ್ರದಲ್ಲಿ ಮೂರನೇ ವರ್ಷ ಅಥವಾ ಐದನೇ ವರ್ಷದಲ್ಲಿ ಕರ್ಣವೇಧನ ಸಂಸ್ಕಾರ ಒಳ್ಳೆಯದೆಂದು ತಿಳಿಸಲಾಗಿದೆ. ಚೌಲಕರ್ಮದ ಜೊತೆಯಲ್ಲಿಯೇ ಕರ್ಣವೇಧನ ಕಾರ್ಯಕ್ರಮವನ್ನೂ ನಡೆಸಬಹುದೆಂದು ತಿಳಿಸಲಾಗಿದೆ.

ಈ ಕಾರ್ಯಕ್ರಮವನ್ನು ತಾಯಿಯ ತೊಡೆಯ ಮೇಲೆ ಮಗುವನ್ನು ಪೂರ್ವಾಭಿಮುಖವಾಗಿ ಕೂಳಿಸಿ ಮಾಡಬೇಕು. ಕರ್ಣವೇಧನ ಕಾರ್ಯದ ನಂತರ ಮಗುವಿನ ತಲೆಗೆ ಎಣ್ಣೆ ಹಚ್ಚಿ ಸಿಹಿ ತಿನಿಸಬೇಕು. ಅತ್ಯುತ್ತಮವಾದ ವಿಚಾರಗಳನ್ನೇ ಈ ಕಿವಿಯು ಕೇಳಲಿ ಎಂದು ದೇವರಲ್ಲಿ ಪ್ರಾರ್ಥಿಸಬೇಕು. ಸಾಧಾರಣವಾಗಿ ಗಂಡು ಮಕ್ಕಳಿಗೆ ಮೊದಲಿಗೆ ಬಲಗಿವಿಯನ್ನೂ, ಹೆಣ್ಣುಮಕ್ಕಳಿಗೆ ಎಡಗಿವಿಯನ್ನೂ ಚುಚ್ಚಲಾಗುವುದು. ಕಾರ್ಯಕ್ರಮದ ನಂತರ ಎಲ್ಲರಿಗೂ ಭೋಜನವನ್ನು ಉಣಬಡಿಸಿ ತೃಪ್ತಿಗೊಳಿಸಬೇಕು.

## ವೈಜ್ಞಾನಿಕ ಹಿನ್ನಲೆ

ಭಾರತೀಯ ಸಂಸ್ಕೃತಿಯ ಪ್ರತಿ ಆಚಾರ ವಿಚಾರವು ವೈಜ್ಞಾನಿಕ ಹಿನ್ನೆಲೆಯನ್ನು ಹೊಂದಿದೆ. ಶುಶ್ರುತ ಬರೆದಿರುವ ದೀರ್ಘಾಯುಷ್ಯದ ಗುಟ್ಟು ಎಂಬ ಪುಸ್ತಕದಲ್ಲಿ ಕಿವಿಚುಚ್ಚುವಿಕೆಯಿಂದ ಆಗುವ ಹಲವಾರು ಆರೋಗ್ಯ ಸಂಬಂಧಿ ಅನುಕೂಲಗಳನ್ನು ತಿಳಿಸಿದ್ದಾರೆ. ಗಂಡುಮಕ್ಕಳಲ್ಲಿ ಕಿವಿಚುಚ್ಚುವುದರಿಂದ ಕರುಳ ಮಡುಚುವಿಕೆ (Hernia) ಮತ್ತು ನೀರ್ದುಂಬಾವು (Hydrocele) ತಡೆಗಟ್ಟಬಹುದೆಂದು ತಿಳಿಸಲಾಗಿದೆ.

ಕ್ರಿ.ಪೂ. ೪೭೦ರಲ್ಲಿ ಪಾಶ್ಚಾತ್ಯ ವೈದ್ಯರುಗಳೂ ಸಹ ತಮ್ಮ ಉಲ್ಲೇಖದಲ್ಲಿ ಕಿವಿಚುಚ್ಚುವಿಕೆಯ ಮಹತ್ವವನ್ನು ತಿಳಿಸಿದ್ದಾರೆ. ಇದರಿಂದ ಹೆಣ್ಣುಮಕ್ಕಳಲ್ಲಿನ ಅನೇಕ ಸಮಸ್ಯೆಗಳನ್ನು ನಿವಾರಿಸಬಹುದೆಂದು ಹೇಳಿದ್ದಾರೆ. ಗ್ಯಾಲನ್ ಎಂಬ

ವಿಜ್ಞಾನಿ ಈ ಆಚರಣೆ ಹದಿಹರೆಯದ ಹೆಣ್ಣುಮಕ್ಕಳಲ್ಲಿ ಋತುಚಕ್ರದ ಸಮಸ್ಯೆಗಳನ್ನು ನಿವಾರಿಸುತ್ತದೆ. ಹೆಣ್ಣುಮಕ್ಕಳಲ್ಲಿ ಉನ್ಮಾದ ಚಿತ್ತೋದ್ರೇಕದಂತಹ ಮನೋವಿಕಾರಗಳನ್ನು ತಡೆಗಟ್ಟಲು ಸಹಕಾರಿಯಾಗುತ್ತದೆ ಎಂದಿದ್ದಾನೆ.

ಕಿವಿಯ ಹಾಳೆಯ ಹಿಂಬದಿಯಲ್ಲಿ ಒಂದು ಅತ್ಯಂತ ಸಣ್ಣ ನರ ಇರುತ್ತದೆ. ಈ ನರತಂತುವು ಆಸ್ತಮಾ, ಕೆಮ್ಮು, ಕ್ಷಯದಂತಹ ರೋಗವಾಹಕವಾಗಿರುತ್ತದೆ. ವಿಜ್ಞಾನದ ಪ್ರಕಾರ ಕರ್ಣವೇಧವು ಈ ನರತಂತುವನ್ನು ಭೇದಿಸಿ ರೋಗ ಹರಡದಂತೆ ತಡೆಗಟ್ಟುತ್ತದೆ. ಕಿವಿಚುಚ್ಚುವ ಸಂಸ್ಕಾರವನ್ನು ಪ್ರತಿಯೊಬ್ಬರೂ ಮಾಡಿಸಿಕೊಳ್ಳಬೇಕಾದ ಮಹತ್ವದ ಸಂಸ್ಕಾರ.

ಇದೇ ರೀತಿ ಮೂಗುಚುಚ್ಚುವ ಸಂಸ್ಕೃತಿಯು ನಮ್ಮ ಆಚರಣೆಯಲ್ಲಿದೆ.

## ಕಿವಿಚುಚ್ಚುವ ಸಂದರ್ಭದಲ್ಲಿ ವಹಿಸಬೇಕಾದ ಎಚ್ಚರಿಕೆಗಳು

೧. ಕಿವಿಚುಚ್ಚುವ ಸಾಧನ ಅತ್ಯಂತ ಸ್ವಚ್ಛವಾಗಿರಬೇಕು (sterlize).

೨. ಚುಚ್ಚಿದ ಜಾಗವನ್ನು ಸ್ವಚ್ಛ ಕೈಗಳಿಂದ ಮಾತ್ರ ಮುಟ್ಟಬೇಕು.

೩. ಬಟ್ಟೆ ಬದಲಿಸುವಾಗ ಕಿವಿಗೆ ತಾಗದಂತೆ ಎಚ್ಚರವಹಿಸಬೇಕು.

೪. ಗಾಯ ಕೆಂಪಾಗಿಯೇ ಉಳಿದಿದ್ದರೆ ತಕ್ಷಣ ವೈದ್ಯರನ್ನು ಕಾಣಬೇಕು.

ಕರ್ಣವೇಧನದಿಂದ ನಮಗೆ ಸಾಕಷ್ಟು ಅನುಕೂಲತೆಗಳು ಇರುವುದರಿಂದ ನಾವು ಅದನ್ನು ಆಚರಿಸಲೇಬೇಕು.

*ಲೇಖಕಿ: ತಂತ್ರಜ್ಞರು, ರೈಲ್ ವೀಲ್ ಫ್ಯಾಕ್ಟರಿ*
*ಯಲಹಂಕ, ಬೆಂಗಳೂರು – ೫೬೦ ೦೬೪*

# ಸಂಸ್ಕಾರಗಳು – ಒಂದು ದರ್ಶನ

*ಶೇಷಾದ್ರಿ ಕೈಪಾ. ಎಸ್.*

ಪರಮಾತ್ಮ ಜಗತ್ತನ್ನು ಕಟ್ಟಿರುವ ಪರಮೋನ್ನತ ಶಕ್ತಿ. ಬೃಹತ್ ಜಗತ್ತನ್ನು ನಡೆಸಲು ಆಗಾಧ ಶಕ್ತಿ ಬೇಕು. ಈ ಶಕ್ತಿಯೇ ಜಗತ್ತನ್ನು, ನಮ್ಮನ್ನು, ನಿಮ್ಮನ್ನು ತಂದಿರುವುದು. ಹಾಗಾಗಿ ಇದು ಎಲ್ಲರ ತಂದೆ. ಈ ಶಕ್ತಿ ಮೈಟಿ ಎನರ್ಜಿ ಮತ್ತು ಮೈಟಿಯಸ್ಟ್ ಎನರ್ಜಿ. ಇದನ್ನು ಆಲ್ಮೈಟಿ ಎನ್ನುತ್ತಾರೆ. ಇದನ್ನು ನಮ್ಮ ನುಡಿಯಲ್ಲಿ ಪರಮಾತ್ಮ ಎನ್ನುತ್ತಾರೆ. ಪರಮಾತ್ಮ ಎಲ್ಲರ ತಂದೆ, ನಮ್ಮ ತಂದೆ, ನಿಮ್ಮ ತಂದೆ, ಎಲ್ಲರೂ, ಎಲ್ಲವೂ ಅವನ ಮಕ್ಕಳು.

ಅವನು ಪರಿಶುದ್ಧ. ವೇಗ ಅನಂತ. ಇಂತಹ ಪರಮಾತ್ಮನ ಮಕ್ಕಳು ನಾವು. ಅವನು ನಾವಾದರೆ ನಾವು ಅವನಾಗಬಹುದೆ? ಹಾಗಾಗಿ ಜೀವನದ ಉದ್ದೇಶ ನಮ್ಮ ತಂದೆಯಷ್ಟು ಬಲಶಾಲಿಯಾಗುವುದು. ಅವನಿಗೆ ಏನೇನು ಲಭ್ಯವೋ ಅದೆಲ್ಲವನ್ನು ನಾವು ಪಡೆಯುವುದು. ಹಾಗಾಗಿ ಧರ್ಮ ಎಂದರೆ ಮೋಕ್ಷ. ಮೋಕ್ಷ ಎಂದರೆ ಹುಟ್ಟು ಸಾವಿಲ್ಲದೆ ಇರುವುದು. ಪರಮಾತ್ಮನಿಗೆ ಹುಟ್ಟು ಸಾವಿಲ್ಲ. ಅವನ ಹಾಗೆ ನಾವು ಆದಾಗ ನಮಗೂ ಹುಟ್ಟು ಸಾವಿಲ್ಲ. ಇದಕ್ಕೆ ದಾರಿ

**ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧೀಯೋ ಯೋನಾಃ ಪ್ರಚೋದಯಾತ್॥**
**ಪ್ರಣವಸ್ಯ ಪರಬ್ರಹ್ಮ ಋಷಿಃ ...... ಪ್ರಾಣಾಯಾಮೇ ವಿನಿಯೋಗಃ.** ಇದೇ ಮೋಕ್ಷ ಮಾರ್ಗ.

ಬ್ರಹ್ಮ:–ಎಲ್ಲ ವಸ್ತುಗಳಿಗೂ ನ್ಯೂಕ್ಲಿಯಸ್ಸು ಇದೆ. ಸೂರ್ಯ ನ್ಯೂಕ್ಲಿಯಸ್. ಈ ನ್ಯೂಕ್ಲಿಯಸ್ ಕಣದಲ್ಲೂ, ಬ್ರಹ್ಮಾಂಡದಲ್ಲೂ, ಇರುವೆಯಲ್ಲೂ ಇರುತ್ತದೆ. ಎಲ್ಲಾ ಸೃಷ್ಟಿಯೂ ನ್ಯೂಕ್ಲಿಯಸ್ಸಿನಿಂದ. ಈ ನ್ಯೂಕ್ಲಿಯಸ್ಸಿಗೆ ಸೃಷ್ಟಿಕರ್ತ ಅಥವಾ ಬ್ರಹ್ಮ ಎನ್ನುತ್ತಾರೆ. ನ್ಯೂಕ್ಲಿಯಸ್ಸ್ ಬಲವಾದರೆ ಎಲ್ಲವೂ ಬಲ. ಅದಕ್ಕೆ ಬ್ರಹ್ಮೋಪದೇಶ. ಮಾನವನ ಬ್ರಹ್ಮ–ಆತ್ಮ ಬಲವಾದರೆ ಮಾನವನಿಗೆ ಬಲ. ಈ ಬ್ರಹ್ಮ ಬೀಜ ರೂಪದ ಶಕ್ತಿಯೂ ಹೌದು. ಆ ಶಕ್ತಿಯನ್ನು ಹೆಚ್ಚಿಸಲು ಗರ್ಭಾಧಾನ ಸಂಸ್ಕಾರ.

ಮಾನವ ತಾಮಸ ಶರೀರಿ. ಪರಮಾತ್ಮನನ್ನು ಮುಟ್ಟುವ ಶಕ್ತಿ (ಜ್ಞಾನ) ಜ್ಯೋತಿ. ಈ ಜ್ಯೋತಿಯಲ್ಲಿ ಎಲ್ಲವನ್ನೂ ಕಾಣುತ್ತೇವೆ. ಮೃತ್ಯುವನ್ನು ಗೆದ್ದು ಮೋಕ್ಷವನ್ನೂ ಪಡೆಯುತ್ತೇವೆ.

*ಲೇಖಕರು : ಅಧ್ಯಕ್ಷರು – ಧರ್ಮಪ್ರತಿಷ್ಠಾನ,*
*ಬೆಂಗಳೂರು – ೫೬೦ ೦೦೪*

# ವ್ಯಕ್ತಿತ್ವ ವಿಕಾಸವೇ ಸಂಸ್ಕಾರ

**ಕೆ. ಎಸ್. ವಿಜಯಕುಮಾರ್**

ಸಕಲ ಜೀವರಾಶಿಗಳಲ್ಲಿ ಮಾನವ ಜನ್ಮ ಅತಿ ದೊಡ್ಡದು. ಈ ಜೀವನ ಸಾಗಿಸಲು ಬಹಳ ಪುಣ್ಯಗಳಿಸಬೇಕಾಗುತ್ತದೆ. ಆ ಕಾರಣದಿಂದ ಹರಿದಾಸರು ತಮ್ಮ ಸಾಹಿತ್ಯದಲ್ಲಿ ಮಾನವ ಜನ್ಮ ಅತಿ ದೊಡ್ಡದು. ಅದನ್ನು ಹಾಳು ಮಾಡಬೇಡಿರಿ ಎಂದು ಎಚ್ಚರಿಸಿದ್ದಾರೆ. ಆ ಎಚ್ಚರಿಕೆಯನ್ನು ನಾವುಗಳು ಸದಾ ನೆನಪಿಸಿಕೊಳ್ಳಬೇಕಾಗುತ್ತದೆ. ಇಂತಹ ಮಾನವ ಜನ್ಮವನ್ನು ಪಡೆದ ನಾವುಗಳು, ಸಕಲ ಜೀವಿಗಳಿಗೂ ಮಾದರಿಯಾಗಬೇಕಾಗುತ್ತದೆ. ಬರೀ ಮಾನವ ಜನ್ಮ ಪಡೆದು ವಿನಾಕಾರಣ ಹಾಳು ಮಾಡದೆ ತನಗೂ ಮತ್ತು ಅನ್ಯರಿಗೂ ಉಪಯೋಗವಾಗುವ ರೀತಿಯಲ್ಲಿಸಾಗಬೇಕಾಗುತ್ತದೆ.

ಮೌಲ್ಯರಹಿತ ಮಾನವ ಜೀವನವು ಸುಗಂಧವಿಲ್ಲದ ಪುಷ್ಪದಂತಾಗುತ್ತದೆ. ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳಿರುವಂತೆ ಯದ್ವಾ ಚರತ ಶ್ರೇಷ್ಠ, ಶ್ರೇಷ್ಠರಾಗಿ ಇನ್ನು ಉಳಿದವರಿಗೆ ಮಾರ್ಗದರ್ಶಿಗಳಾಗಬೇಕಾಗುತ್ತದೆ. ಹಿರಿಯರು ತುಳಿದ ದಾರಿಯಲ್ಲಿ ಉಳಿದವರು ಸಾಗುತ್ತಾರೆ. ಕಾರಣ ಸಮಾಜವನ್ನು ನಡೆಸಬೇಕಾದ ಮಾನವನು, ಸರಳ ಮತ್ತು ಮೌಲ್ಯಾಧಾರಿತ ಜೀವನವನ್ನು ಸಾಗಿಸಬೇಕಾಗುತ್ತದೆ. ಜೀವನದಲ್ಲಿ ಮೌಲ್ಯಗಳನ್ನು ಗಳಿಸುವುದು, ಕಳೆದುಕೊಳ್ಳುವುದು ನಮ್ಮ ಕೈಯಲ್ಲಿರುತ್ತದೆ.

ನೀವುಗಳಿಸಿದ ಹಣ, ನಿಮ್ಮೊಂದಿಗೆ ಬರುವುದಿಲ್ಲ. ಅವನ್ನು ಅನುಭವಿಸುವವರು ಬೇರೆ. ಆದರೆ ನೀವು ಗಳಿಸಿದ ಕೀರ್ತಿ, ಜೀವನದಲ್ಲಿಯ ಮೌಲ್ಯಮಾತ್ರ ಸದಾ ಕಾಲ ಉಳಿದು, ಜನರನ್ನು ಜ್ಞಾಪಿಸುತ್ತವೆ. ಸ್ವಾಮಿ ವಿವೇಕಾನಂದರು, ಅರವಿಂದಘೋಷರು, ಇನ್ನು ಅನೇಕ ವಿದ್ಯಾವಂತರು ಯಾವುದಕ್ಕೂ ಆಶಿಸದೇ ಸರಳ ಜೀವನವನ್ನು ಧರ್ಮದಿಂದ ನಡೆಸಿದರು. ವ್ಯಕ್ತಿಯ ಜೀವನದಲ್ಲಿ ಜೀವನ ಮೌಲ್ಯಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕೆ ಹೊರತು ಅವರ ಹಣ ಮತ್ತು ಆಸ್ತಿ ಗಳಿಕೆಗಳಿಗಲ್ಲ.

*ಲೇಖಕರು: ರಾಜ್ಯ ಸಂಘಟನಾ ಕಾರ್ಯದರ್ಶಿ*
*ಕರ್ನಾಟಕ ರಾಜ್ಯ ಶಿಕ್ಷಕರ ಪ್ರತಿಭಾ ಪರಿಷತ್ (ರಿ)*

# ಪಿತೃಯಜ್ಞದ ಮಹತ್ತ್ವ

***ಪ್ರೊ. ಎಂ. ವಿ. ಹೆಗಡೆ***

ಮಹಾಭಾರತದ ಮಹಾನಾಯಕರಲ್ಲೊಬ್ಬನಾದ ಕರ್ಣ ಸತ್ತು ಪಿತೃಲೋಕವನ್ನು ಸೇರಿದ. ಅಲ್ಲಿ ಪ್ರತಿನಿತ್ಯವೂ ಅವನಿಗೆ ಉಣ್ಣುವುದಕ್ಕೆ ಬಂಗಾರವನ್ನೇ ನೀಡಲಾಗುತ್ತಿತ್ತು. ಬಾಯಾರಿಕೆಯನ್ನು ನೀಗಿಸುವುದಕ್ಕೂ ಅದೇ. ಹೊನ್ನು ಶ್ರೇಷ್ಠವಾದುದು ನಿಜ; ಆದರೆ ಉಣ್ಣುವುದಕ್ಕಾದೀತೇ? ಬಾಯಾರಿಕೆಗೆ ಆದೀತೇ? ಕರ್ಣ ಕಂಗಾಲಾದ. ಯಮಧರ್ಮನನ್ನೇ ಕೇಳಬೇಕೆಂದು ನಿರ್ಧರಿಸಿದ. ಅವನಲ್ಲಿ ಕೇಳಿದ; ಅನ್ನಕ್ಕಾಗಿ ಬೇಡಿದ. ಅದಕ್ಕೆ ಯಮಧರ್ಮ ಹೇಳಿದ – "ನೀನು ದಾನಶೂರ ಜೀವನವಿಡೀ ಹೊನ್ನನ್ನು ದಾನ ಮಾಡಿದೆ. ಆದರೆ ಪಿತೃಗಳಿಗೆ ಅನ್ನವನ್ನು ಅರ್ಪಿಸಲಿಲ್ಲ; ತರ್ಪಣವನ್ನು ಮಾಡಿಲ್ಲ. ಹಾಗಾಗಿ ನಿನಗೆ ಇಲ್ಲಿ ಅನ್ನ ಸಿಕ್ಕದು." ಅದಕ್ಕೆ ಕರ್ಣ, "ನಾನೇನು ಮಾಡಬೇಕಿತ್ತು? ನನಗೆ ಪಿತೃಗಳು ಯಾರೆಂಬುದೇ ತಿಳಿದಿರಲಿಲ್ಲ. ಯಾರ ಶ್ರಾದ್ಧ ಮಾಡಬೇಕಿತ್ತು?" ಎಂದ. ಅದಕ್ಕೆ ಯಮ "ಆಯಿತು. ಯಾರೆಂಬುದು ತಿಳಿದ ಮೇಲೆಯೂ ಶ್ರಾದ್ಧಾದಿ ಕರ್ಮಗಳನ್ನು ಮಾಡಲಿಲ್ಲ. ಈಗ ಅವಕಾಶ ಕೊಡುತ್ತೇನೆ. ಭೂಮಿಗೆ ಹೋಗು. ಒಂದು ವರ್ಷದ ಅವಧಿಯಲ್ಲಿ ನಿನ್ನ ಪಿತೃಗಳನ್ನು ತೃಪ್ತಿಗೊಳಿಸು. ನಿನ್ನ ಕಾರಣದಿಂದ ಅದಕ್ಕೆ ಪಿತೃಪಕ್ಷವೆಂದೇ ಹೆಸರಾಗಲಿ" ಎಂದು ಭೂಮಿಗೆ ಕಳುಹಿಸಿದ.

ಇದು ಒಂದು ಕಥೆ. ಮೂಲವಾವುದೋ ತಿಳಿಯದು. ಭೂಮಿಗೆ ಬಂದ ಮೇಲೆ ಕರ್ಣನು ತೃಪ್ತಿಪಡಿಸಲು ಯಾರ್‍ಯಾರ ಶ್ರಾದ್ಧಗಳನ್ನು ಮಾಡಿದೆಂಬುದರ ವಿವರಗಳು ದೊರೆಯುವುದಿಲ್ಲ. ಆದರೂ ಸ್ವಾರಸ್ಯಕರವಾದುದು ಕಥೆ. ಪಿತೃಶ್ರಾದ್ಧದ ಅವಶ್ಯಕತೆಯನ್ನು ಬಿಂಬಿಸುವುದು ಉದ್ದೇಶ. ಮನುಷ್ಯನು ಎಷ್ಟೇ ಸತ್ಕರ್ಮಗಳನ್ನು ಮಾಡಿದರೂ ಪಿತೃಲೋಕವನ್ನಾಗಲಿ, ಸ್ವರ್ಗಲೋಕವನ್ನಾಗಲಿ ಸೇರಿದ ಮೇಲೆ ಹಸಿವು ನೀರಡಿಕೆಗಳ ಬಾಧೆಯಿಂದ ಬಳಲಬಾರದೆಂದಿದ್ದರೆ ಶ್ರಾದ್ಧ ತರ್ಪಣಗಳು ಯಾಕೆ ಬೇಕೆಂಬುದನ್ನು ಇದು ವಿವರಿಸುತ್ತದೆ. ಶ್ರಾದ್ಧಾದಿಗಳನ್ನು ಮಾಡುವುದು ಸತ್ತವರಿಗೆ ಮಾಡುವ ಉಪಕಾರವೆಂಬುದರಷ್ಟೇ ಸತ್ಯ. ನಮಗೆ ನಾವೇ ಮಾಡಿಕೊಳ್ಳುವ ಉಪಕಾರವೆಂಬ ಅರಿವು ಮೂಡಬೇಕಾದುದು ಅಗತ್ಯ. ಶ್ರಾದ್ಧ ತರ್ಪಣಾದಿಗಳನ್ನು

ಅಲಕ್ಷಿಸಿದರೆ ಪರದ ಬದುಕು ಕೆಡುತ್ತದೆ. ಇಹದ ಬದುಕಿನ ಮೇಲೆ ಕಷ್ಟಕಾರ್ಪಣ್ಯಗಳ ಕರಾಳ ಛಾಯೆ ಆವರಿಸಲಾರಂಭಿಸುತ್ತದೆ. ಹಾಗಾಗದಿರಲು ಇದು ಅವಶ್ಯ.

ಇಂದಿನ ವೈಜ್ಞಾನಿಕ ಯುಗದ ಗಾಳಿಯನ್ನು ಕುಡಿದವರಿಗೆ ಇದು ಮೌಢ್ಯವೆನಿಸೀತು. ಶ್ರಾದ್ಧದಲ್ಲಿ ಪಿಂಡದಾನ ಮಾಡಿದರೆ, ತರ್ಪಣ ನೀಡಿದರೆ, ಬ್ರಾಹ್ಮಣ ಭೋಜನ ಮಾಡಿದರೆ ಅದು ಯಾವುದೋ ದೂರದ ಲೋಕದಲ್ಲಿದ್ದವರಿಗೆ ತಲುಪೀತೆ? ಎಂದಾರು. ಈ ಪ್ರಶ್ನೆಯನ್ನು ಹಿಂದೆ ಚಾರ್ವಾಕನೇ ಎತ್ತಿದ್ದ. ಮಹಡಿಯ ಮೇಲೆ ವ್ಯಕ್ತಿಯೊಬ್ಬನನ್ನ ಕೂಡ್ರಿಸಿ ಕೆಳಗೆ ಅವನ ಶ್ರಾದ್ಧ ಮಾಡಿ ಮೇಲಿದ್ದವನಿಗೆ ಹೊಟ್ಟೆ ತುಂಬಿದರೆ ನಿಮ್ಮ ಮಾತನ್ನು ಒಪ್ಪಬಹುದು. ಆದರೆ ಹಾಗಾಗುವುದಿಲ್ಲ. ಇದೆಲ್ಲಾ ಬೊಗಳೆ ಎಂದಿದ್ದ.

ಅದಕ್ಕೆ ಮೂಲವಾದದ್ದು ವಿಜ್ಞಾನದ ಅಮಲು. ಪ್ರಪಂಚದ ರಹಸ್ಯಗಳನ್ನೆಲ್ಲವನ್ನೂ ತಿಳಿದಿದ್ದೇವೆ; ಎಲ್ಲವೂ ನಾವು ಹೇಳಿದಂತೆಯೇ ಇರಬೇಕು ಎಂಬ ದುರಾಗ್ರಹ. ಆದರೆ ವಿನೀತ ವಿಜ್ಞಾನಿಗಳ ಪರಿ ಬೇರೆ. ಅವರಲ್ಲಿ ಸರ್ವಜ್ಞತ್ವದ ಠೇಂಕಾರವಿಲ್ಲ. ನಾವು ಬಿಚ್ಚಿದಷ್ಟು ಮುಚ್ಚಿಕೊಂಡಿರುವ ರಹಸ್ಯಗಳು ತುಂಬಿರುವುದನ್ನು ಒಪ್ಪುತ್ತಾರೆ. ಎಲ್ಲವನ್ನೂ ವಿಜ್ಞಾನದ ಸಿದ್ಧ ಸೂತ್ರವೊಂದರಿಂದ ಭೇದಿಸಲು ಸಾಧ್ಯವಾಗದು. ನೆಲದ ಮೇಲಿನ ವಿಜ್ಞಾನ ನೆಲದಿಂದಾಚೆಗೆ ನೆಲ ತಪ್ಪುತ್ತದೆ. ನ್ಯೂಟನ್ನನು ಕಂಡುಕೊಂಡ ನಿಯಮಗಳು ಅನುಭಾರತ ವಿಜ್ಞಾನದಲ್ಲಿ ಕೆಲಸಕ್ಕೆ ಬಾರದವುಗಳಾಗುತ್ತವೆ. ಅಷ್ಟಕ್ಕೂ ಬದುಕೆಲ್ಲವೂ ವಿಜ್ಞಾನವೊಂದರಿಂದಲೇ ನಿಯಂತ್ರಿತವಾಗಿಲ್ಲ. ಅದನ್ನು ಮಿಕ್ಕಿದ ಮೀರಿದ ಅನೇಕ ಅಂಶಗಳುಂಟು. ವಿಜ್ಞಾನವನ್ನು ಅಲ್ಲಗಳೆಯಬೇಕಾಗಿಲ್ಲ. ಅಂತೆಯೇ ತಲೆಯ ಮೇಲೆ ಕೂಡ್ರಿಸಿಕೊಳ್ಳಬೇಕಾದುದು ಇಲ್ಲ. ಹಾಗೆ ಮಾಡಿದರೆ ಹೊಳೆಯನ್ನು ದಾಟಿಸಿತೆಂದು ಕೃತಜ್ಞತೆಯಿಂದ ದೋಣಿಯನ್ನು ಹೊತ್ತೇ ತಿರುಗಿದವರಂತಾದೀತು.

ಶ್ರಾದ್ಧದ ಹಿನ್ನೆಲೆಯಲ್ಲಿರುವ ಮನೋವೈಜ್ಞಾನಿಕತಯನ್ನು ಮನಗಾಣಬೇಕಾದ ಅವಶ್ಯಕತೆಯಿದೆ. ಅಲ್ಲಿರುವುದು ವ್ಯಕ್ತಿಯ ವ್ಯಕ್ತಿತ್ವದ ನಿರ್ಮಾಣದಲ್ಲಿ ಭಾಗಿಗಳಾದ ಬಂಧುಗಳ ಬಗೆಗಿನ ಕೃತಜ್ಞತೆಯ ಭಾವನೆ. ಈ ಲೋಕದಲ್ಲಿ ನಾವು ಕಣ್ಣು ಬಿಡುವುದಕ್ಕೆ ಬಣ್ಣ ತಳೆಯುವುದಕ್ಕೆ ಕಾರಣಕರ್ತರಾದವರನ್ನು ಮರೆಯಬಾರದೆಂಬ ಸಂವೇದನೆ. ಸಾಂವತ್ಸರಿಕ ಶ್ರಾದ್ಧದಲ್ಲಿ ಮೂರು ತಲೆಮಾರಿನವರನ್ನು ನೆನೆಯುವುದು

ಕ್ರಮವಾದರೆ ಮಹಾಲಯದಲ್ಲಿ ಬಂಧುಗಳೊಂದಿಗೆ ಬಳಗದವರನ್ನೂ ನೆನೆಪಿಸಿಕೊಳ್ಳಬೇಕಾಗುತ್ತದೆ. ಮನುಷ್ಯನ ಶರೀರದ ಕಣಕಣವೂ ಋಣದಿಂದ ವ್ಯಾಪ್ತವಾಗಿದೆ. ಎಲ್ಲವೂ ನಮ್ಮದೆಂದು ಕಾಣುತ್ತದೆ. ವಾಸ್ತವವಾಗಿ ಯಾವುದೂ ನಮ್ಮದಲ್ಲ. ಒಂದಿಲ್ಲೊಂದು ರೀತಿಯಲ್ಲಿ ಇನ್ನೊಬ್ಬರ ಋಣಭಾರ ಕಣದ ಮೇಲಿದೆ. ಜೀವಮಾನವಿಡೀ ಶ್ರಮಿಸಿದರೂ ಋಣವೆಲ್ಲವನ್ನೂ ತೀರಿಸಲಾರೆವು. ಹಾಗಂತ ಎಲ್ಲ ಭಾರವನ್ನೂ ಹೊತ್ತೇ ಹೊರಟು ಹೋಗಬೇಕೇ? ಸಾಧ್ಯವಾದಷ್ಟನ್ನು ಯಥಾಶಕ್ತಿಯಾಗಿ ಕಳೆಯುವುದಕ್ಕೆ ಪ್ರಯತ್ನಿಸಬೇಡವೆ? ಹಾಗೆ ಕಳೆದುಕೊಳ್ಳುತ್ತಾ ಹೋಗಲು ಬಯಸುವವರಿಗೆ ತೆರೆದಿಟ್ಟ ಮಾರ್ಗ ಪಿತೃಪಕ್ಷದಲ್ಲಿ ನಡೆಸುವ ಕ್ರಿಯಾಕಲಾಪ.

ವಾಸ್ತವವಾಗಿ ಯಮಾಲಯವು ಮಹಾಲಯವೆನಿಸುವುದು ಕೇವಲ ಹದಿನೈದು ದಿನಗಳಿಗೆ ಸೀಮಿತವಲ್ಲ. ಐದು ಪಕ್ಷಗಳ ಅವಧಿಯನ್ನು ಮಹಾಲಯವೆನ್ನುತ್ತಾರೆ.

**ಆಷಾಢೀಮವಧಿಂ ಕೃತ್ವಾ ಪಂಚಮಂ ಪಕ್ಷಮಾಶ್ರಿತಾಃ ।**
**ಕಾಂಕ್ಷಂತಿ ಪಿತರಃ ಕ್ಲಿಷ್ಟಾಃ ಅನ್ನಮಪ್ಯನ್ವಹಂ ಜಲಮ್ ॥**

ಆಷಾಢ ಮಾಸದ ಹುಣ್ಣಿಮೆಯ ನಂತರದ ಐದು ಪಕ್ಷಗಳ ಅವಧಿಯನ್ನು ಆಶ್ರಯಿಸಿದ ಪಿತೃಗಳು ಕ್ಲೇಶಕ್ಕೊಳಗಾಗಿ ಪ್ರತಿದಿನವೂ ಅನ್ನ ಹಾಗೂ ಜಲಗಳನ್ನು ಬಯಸುತ್ತಾರೆ.

ಆ ಕಾಲದಲ್ಲಿ ಪಿತೃಗಳಿಗೆ ಪಿತೃಲೋಕದಿಂದ ಪೂರ್ವಲೋಕಕ್ಕೆ ಪಯಣಿಸುವುದಕ್ಕೆ ಅಪೇಕ್ಷೆ – ಅವಕಾಶಗಳು. ಆದರೆ ಅಲ್ಲಿಂದ ಹೊರಟು ತನ್ನವರನ್ನು ಕಾಣುವುದಕ್ಕೆ ಪ್ರಯತ್ನಿಸುವವರಿಗೆ ಪಿತೃಲೋಕದಿಂದ ಅನ್ನಪ್ರಾಪ್ತಿಯಿಲ್ಲ. ಅವರಿಗೆ ಅವರ ವಂಶಜರೇ ವ್ಯವಸ್ಥೆ ಮಾಡಬೇಕು. ಅವರಿಗೆ ಪ್ರಿಯವಾದುದು ಅದು. ಪಿತೃಲೋಕದಿಂದ ಭೂಲೋಕಕ್ಕೆ ಬಂದು ಮನೆಯವರೆಗೆ ಬರಲಿಕ್ಕೆ ಒಂದು ವರ್ಷದ ಅವಧಿ. ಅನಂತರ ಎರಡು ತಿಂಗಳುಗಳ ಕಾಲ ನಮ್ಮ ಬಳಿಯಲ್ಲಿಯೇ ಇರುತ್ತಾರೆ ಎನ್ನಲಾಗಿದೆ.

**ಮಾಸದ್ವಯಂ ಪ್ರತೀಕ್ಷಂತೇ ಗೃಹದ್ವಾರಂ ಸಮಾಶ್ರಿತಾಃ ।**
**ವಾಯುಭೂತಾಃ ಪಿಪಾಸಾರ್ತಾಃ ಕ್ಷುತ್‌ಕ್ಷಾಮಾ ಪಿತರೋ ನೃಣಾಮ್ ॥**

ಮನೆಯ ಬಾಗಿಲನ್ನು ಆಶ್ರಯಿಸಿಕೊಂಡು ಗಾಡಿಯ ರೂಪದಲ್ಲಿದ್ದು ಹಸಿವಿನಿಂದ ಬಡವಾಗಿ ನೀರಡಿಕೆಯಿಂದ ಬಳಲುತ್ತ ಆ ನರರ ಪಿತೃಗಳು ಅನ್ನ-ನೀರುಗಳನ್ನು ನಿರೀಕ್ಷಿಸುತ್ತಿರುತ್ತಾರೆ.

ನಮಗೆ ನಮ್ಮದೇ ಆದ ಸಮಸ್ಯೆಗಳು - ಸಂಕಟಗಳು - ಸಂಭ್ರಮಗಳು. ನಮಗಾಗಿ ಹಿರಿಯರು ಕಾಯುತ್ತಿರುವರೆಂಬುದು ಅರಿವಾಗುವುದೇ ಇಲ್ಲ. ನಮ್ಮದು ಮಣ್ಣಿನ ಕಣ್ಣು. ಗಾಳಿಯನ್ನು ಕಾಣುವ ಶಕ್ತಿ ಅದಕ್ಕಿಲ್ಲ. ಅವರಿಗೋ ಅದೇ ರೂಪ. ಬೇರೆಯ ರೂಪವನ್ನು ಧರಿಸುವ ಶಕ್ತಿಯಿಲ್ಲ. ಪಿಶಾಚಿಗಳಂತೆ ಬೇರೆಯವರ ಶರೀರವನ್ನು ಪ್ರವೇಶಿಸುವವರೂ ಅಲ್ಲ. ಅದರಿಂದ ಪಾವಿತ್ರ್ಯ ಕೆಡುತ್ತದೆ. ಇಂದಲ್ಲ ನಾಳೆ ಅನ್ನ-ಜಲಗಳು ಅಪೇಕ್ಷಿತವಾದ ಕ್ರಮದಲ್ಲಿ ದೊರೆತರೆ ತೃಪ್ತರಾಗಿ ತೆರಳುತ್ತಾರೆ. ಇಲ್ಲವಾದರೆ ಅತೃಪ್ತರಾಗಿ ತೆರಳುತ್ತಾರೆ. ಅವರು ಶಾಪ ಹಾಕುವುದಿಲ್ಲ. ಆದರೆ ಅವರ ಒಡಲ ತಾಪವೇ ನಮ್ಮ ಪಾಲಿಗೆ ಶಾಪವಾಗುತ್ತದೆ. ಅವರನ್ನು ಕಾಯಿಸಿ ನಿರಾಶೆಗೊಳಿಸಿದ ಪಾಪ ನಮ್ಮನ್ನಾವರಿಸುತ್ತದೆ.

ಈ ಅವಧಿಯಲ್ಲಿ ಪ್ರತಿನಿತ್ಯವೂ ಶ್ರಾದ್ಧ ತರ್ಪಣಗಳನ್ನು ನಡೆಸುವುದು ಉತ್ತಮಪಕ್ಷ. ಆದರೆ ಅದು ಕಷ್ಟ. ವ್ಯಾವಹಾರಿಕವಾಗಿ ತೊಡಕಿನದು. ಒಂದು ಪಕ್ಷದಲ್ಲಿಯಾದರು ಪ್ರತಿನಿತ್ಯ ಶ್ರಾದ್ಧವನ್ನು ಮಾಡಬಹುದು. ಅದಕ್ಕೂ ಶಕ್ತಿ ಸಾಲದು ಎಂದಾಗ ಒಂದು ದಿನವಾದರೂ ಆದೀತು.

**ಆಷಾಢ್ಯಾಃ ಪಂಚಮೇಪಕ್ಷೇ ಕನ್ಯಾಸಂಸ್ಥೇ ದಿವಾಕರೇ ।**
**ಯೋ ವೈ ಶ್ರಾದ್ಧಂ ನರಃ ಕುರ್ಯಾದೇಕಸ್ಮಿನ್ನಪಿ ವಾಸರೇ ।**
**ತಸ್ಯ ಸಂವತ್ಸರಂ ಯಾವತ್ಸಂತೃಪ್ತಾಃ ಪಿತರೋ ಧ್ರುವಮ್ ॥**

ಆಷಾಢ ಹುಣ್ಣಿಮೆಯ ನಂತರದ ಐದನೆಯ ಪಕ್ಷದಲ್ಲಿ ಅಂದರೆ ಪಿತೃಪಕ್ಷದಲ್ಲಿ ಕನ್ಯಾ ರಾಶಿಯಲ್ಲಿ ಸೂರ್ಯನಿರುವಾಗ ಅರ್ಥಾತ್ ಕನ್ಯಾ ಮಾಸದಲ್ಲಿ ಒಂದು ದಿನವಾದರೂ ಶ್ರಾದ್ಧವನ್ನು ಮಾಡಿದರೆ ಅವನ ಪಿತೃಗಳು ವರ್ಷವಿಡೀ ಸಂತೃಪ್ತರಾಗಿರುತ್ತಾರೆಂಬುದು ನಿಶ್ಚಯ.

ಪಿತೃಪಕ್ಷವಿಡೀ ಶ್ರಾದ್ಧಾದಿಗಳನ್ನು ಮಾಡಬಹುದಾದರೂ ಅಮಾವಾಸ್ಯೆಯು

ಅತ್ಯಂತ ಪ್ರಶಸ್ತವಾದ ದಿನವೆನ್ನಲಾಗಿದೆ. ಅಂದು ಮಾಡಿದ ಕರ್ಮವು ಒಂದೇ ದಿನದ್ದಾದರೂ ಪಕ್ಷವಿಡೀ ನಡೆಸಿದ ಕರ್ಮಕ್ಕೆ ಸಮವಾದುದೆನ್ನಲಾಗಿದೆ. ಹಾಗಾಗಿ ಆ ದಿನವನ್ನು ಪಿತೃ ತರ್ಪಣಕ್ಕಾಗಿ ಮೀಸಲಾಗಿರಿಸುವ ಕ್ರಮ ಬೆಳೆದಿದೆ. ಇಂದಿನ ಧಾವಂತದ ಬದುಕಿನಲ್ಲಿ ಆ ಒಂದು ದಿನವನ್ನಾದರೂ ಪಿತೃಗಳ ಸಲುವಾಗಿ ಮೀಸಲಿಟ್ಟ ತೃಪ್ತಿ ನಮಗೆ.

ಈ ಪಕ್ಷದ ಮಹಾಲಯದ ಸಂದರ್ಭದಲ್ಲಿ ಮಹಾಲಯದ ಮಹಿಮೆಯನ್ನು ಅಂತ್ಯೇಷ್ಟಿಯ ಮಹತ್ವವನ್ನು ವಿವರಿಸುವ ಭಾಗವನ್ನು ಸೇರಿಸಿ ಪುಸ್ತಕವೊಂದನ್ನು ತರುತ್ತಿರುವುದು ಸಂತಸದ ವಿಷಯವಾಗಿದೆ. ಈ ಕೃತಿಯಲ್ಲಿನ ಅಂತ್ಯೇಷ್ಟಿಯ ಅಧ್ಯಾಯವು ನನ್ನ ಹಿಂದೂ ಸಂಸ್ಕಾರಗಳು ಎಂಬ ವಿಸ್ತೃತ ಗ್ರಂಥದ ಒಂದು ಅಧ್ಯಾಯವಾಗಿದೆ. ಅದನ್ನು ಹೆಚ್ಚು ಜನರು ಓದುವಂತಾಗಲೆಂಬ ಆಶಯವನ್ನು ನನ್ನ ಮೇಲೆ ಅಪಾರವಾದ ಅಭಿಮಾನವನ್ನೂ ತೋರಿದ ಶ್ರೀ ಪ್ರಭಾಕರ ರಾವ್ ಅವರ ಮನಸ್ಸು ದೊಡ್ಡದು. ದೂರವಾಣಿಯ ಮೂಲಕ ನನ್ನನ್ನು ಸಂಪರ್ಕಿಸಿ ತಮ್ಮ ಅಭಿಮಾನವನ್ನು ಪ್ರಕಟಿಸಿ, ಆಶಯವನ್ನು ವ್ಯಕ್ತಪಡಿಸಿ, ಮಾತುಗಳನ್ನು ಅಪೇಕ್ಷಿಸಿದಾಗ ಇಲ್ಲವೆನ್ನಲಾಗದೆ ತೋಚಿದ್ದನ್ನು ಬರೆದಿದ್ದೇನೆ. ಇಳಿಯ ವಯಸ್ಸಿನಲ್ಲಿಯೂ ಕಳಕಳಿಯಿಂದ ಭಾರತೀಯ ಸಂಸ್ಕೃತಿಯ ಉಳಿವಿಕೆ ಬೆಳವಿಕೆಗಳ ಬಗೆಗೆ ಲವಲವಿಕೆಯಿಂದ ದುಡಿಯುತ್ತಿರುವ ಅವರ ಹುಮ್ಮಸ್ಸು ನಿರಂತರವಾಗಿರಲೆಂಬುದು ಹಾರೈಕೆ.

*ಲೇಖಕರು: ನಿವೃತ್ತ ಪ್ರಾಂಶುಪಾಲರು (ಸಂಸ್ಕೃತ)*
*ಮಹಾತ್ಮಾ ಗಾಂಧಿ ಮಹಾವಿದ್ಯಾಲಯ, ಶಿರಸಿ*

# ಪಿತೃಗೌರವ

*ಪ್ರೊ. ಎಂ. ಆರ್. ನಾಗರಾಜು*

ಸಾವು ಆತ್ಮೀಯರನ್ನೂ ಅಗಲಿಸುವಷ್ಟು ಪ್ರಬಲವಾದದ್ದು. ಅತ್ಯಂತ ಆತ್ಮೀಯರೂ ರುದ್ರಭೂಮಿಯವರೆಗೇ ಜೊತೆಗೆ ಬರುತ್ತಾರೆ. ಅಲ್ಲಿಂದಾಚೆಗೆ ಎಲ್ಲರೂ ತ್ಯಕ್ತರಾದ ಮೇಲೆ ಪ್ರಕೃತಿಯಮಡಿಲಿನಲ್ಲಿ ಲೀನವಾಗುವುದೇ ಎಲ್ಲರ ಬದುಕು.

ಆದರೆ ಸಾವಿಗೂ ಸೋಲುಂಟು. ನಮ್ಮಿಂದ ಆತ್ಮೀಯರನ್ನು ಕಸಿದುಕೊಂಡರೂ ಅವರ ನೆನಪನ್ನು ಅಳಿಸಲಾಗದು. ಹೀಗಾಗಿ ಭೌತಿಕವಾಗಿ ಕಣ್ಮರೆಯಾದವರು ನಮ್ಮ ಅಂತರಂಗದ ಅವಿಭಾಜ್ಯ ಅಂಗವಾಗುತ್ತಾರೆ. ಕವಿ ಗೋಪಾಲಕೃಷ್ಣ ಅಡಿಗ ಅವರ ಈ ಮಾತು ಈ ಅಂಶವನ್ನು ಹೀಗೆ ಬಿತ್ತರಿಸುತ್ತದೆ:

ಸ್ಮಶಾನದಲ್ಲಿ ಸತ್ತು ಬೂದಿಯಾಗಿಹ ಅಪ್ಪ ನಾಳನಾಳಗಳಲ್ಲಿ ತೀರ್ಥರೂಪ. ತೀರ್ಥ ಎಂದರೆ 'ರಕ್ತ'. ಸಂಬಂಧವು ರಕ್ತ ಸಂಬಂಧವಾಗಿ ನಾಳನಾಳಗಳಲ್ಲಿ ಪ್ರವಹಿಸುತ್ತದೆ ಎಂಬರ್ಥದ ಜೊತೆಗೆ ತೀರ್ಥ ಎಂದರೆ ಜ್ಞಾನ ಎಂಬ ಅರ್ಥದಲ್ಲಿ ಮೃತರು ಸವಿನೆನಪಾಗಿ ನಮ್ಮೊಳಗೆ ಆವಿರ್ಭವಿಸುತ್ತಾರೆ.

ಆವೇಶ ಎಂಬ ಶಬ್ದಕ್ಕೆ ಇಮೋಷನ್ (Emotion) ಎಂದು ಹೇಳಲಾಗುತ್ತದೆ. (Emotion is expressing through motion) ಆವೇಶದ ತೀವ್ರತೆಯನ್ನು ಕಳೆದುಕೊಳ್ಳಲು ಅದು ಕ್ರಿಯೆಯ ಮೂಲಕ ಅಭಿವ್ಯಕ್ತವಾಗಬೇಕು.

ಗತಿಸಿದವರನ್ನು ಕರೆದು ತರಲು ಸಾಧ್ಯವಿಲ್ಲ. ನಮ್ಮ ಭಾವನೆಗಳು, ನೀಡಿಕೆಗಳು ಅವರನ್ನು ತಲಪುವುದಂತು ದೂರದಮಾತು. ಹಾಗಿದ್ದರೆ, ಶ್ರಾದ್ಧ ಮಾಡಿ ಏನು ಪ್ರಯೋಜನ? ಶ್ರಾದ್ಧ ಮಾಡಬೇಕೆ? ಇದು ಹಲವರ ಪ್ರಶ್ನೆ.

ಪ್ರೀತಿಯನ್ನು ಅಭಿವ್ಯಕ್ತಿಗೊಳಿಸುವ ಶ್ರದ್ಧೆ ಇಲ್ಲದವರು ಏನೂ ಮಾಡಬೇಕಾಗಿಲ್ಲ, ಹಾಗೆ ಶ್ರದ್ಧೆ ಇರುವವರೂ ತಮ್ಮ ಇತಿಮಿತಿ, ಸಂದರ್ಭದ ಇತಿಮಿತಿಯಲ್ಲಿ ಏನು ಮಾಡಬೇಕೆಂಬುದನ್ನು, ಹೇಗೆ ಮಾಡಬೇಕೆಂಬುದನ್ನು, ವಿಧಿವಿಧಾನಗಳನ್ನು ಸಂದರ್ಭೋಚಿತವಾಗಿ ಬದಲಿಸಿಕೊಳ್ಳಬಹುದು. ಅದನ್ನು ಎಲ್ಲರೊಂದಿಗೆ ಚರ್ಚಿಸಿ ಹೈರಾಣ ಮಾಡಬೇಕಾಗಿಲ್ಲ; ಹೈರಾಣ ಆಗಬೇಕಾಗಿಲ್ಲ.

ಶ್ರಾದ್ಧವು ಮೃತರ ಸಲುವಾಗಿ ಮಾಡುತ್ತಿದ್ದೇವೆಂಬ ಮಾತು ಬೇಡ. ನಮ್ಮ ಕೃತಜ್ಞತೆಯನ್ನು ಹಿರಿಯರಿಗೆ ಸಲ್ಲಿಸುವ ಸಲುವಾಗಿ ಮಾಡುತ್ತಿದ್ದೇವೆನ್ನುವುದು ಸರಿಯಾದ ನಿಲುವು.

ಮೃತವ್ಯಕ್ತಿಗಳೂ ಪರಮಾತ್ಮಾಂಶಸಂಭೂತರು. ಹಿರಿಯರಿಗೆ ಸಲ್ಲಿಸುವ ಗೌರವವೂ ಪರೋಕ್ಷವಾಗಿ ಪರಮಾತ್ಮನಿಗೆ ಪೂಜೆಯೇ. ಹಾಗೆಯೇ ಮೃತರ ಮೂಲಕ ಸಲ್ಲಿಸಲಾಗದ ಪೂಜೆಯನ್ನು ಜೀವಂತ ವ್ಯಕ್ತಿಗಳ ಮೂಲಕ ಸಲ್ಲಿಸಿ ಅದು ಪರಮಾತ್ಮನಿಗೆ ತಲಪಲೆಂದು ಮಾಡುವ ಕ್ರಿಯೆಯೇ ಪಿತೃಯಜ್ಞ. ಎಲ್ಲರೂ ಪರಮಾತ್ಮಾಂಶಸಂಭೂತರಲ್ಲದೆ ಹೋದಲ್ಲಿ ದೇವರು ಸರ್ವಾಂತರ್ಯಾಮಿ ಹೇಗಾದಾನು? ಪಿತೃಯಜ್ಞವೆಂದರೆ ಪಿತೃಗಳ ನೆನಪಿನಲ್ಲಿ ಹೆಸರಿನಲ್ಲಿ ಬದುಕಿರುವವರನ್ನು ಆಧರಿಸಿ ಮಾಡುವ ಯಜ್ಞ.

ನಾವು ಮಾಡುವ ಊಟವನ್ನು ಅನ್ನ ಯಜ್ಞ ಎಂದು ಹೇಳಲಾಗುತ್ತದೆ. ನಾವು ತಿಂದ ಅನ್ನವು ಉದರ ಸೇರಿ ಶಕ್ತಿ ನೀಡುವುದೆಂಬ ನಂಬಿಕೆಯಾಚೆಗೆ ನಮಗೇನು ತಿಳಿದಿದೆ? ದೇಹಕ್ಕೆ ಉಪಯುಕ್ತವಾಗಿದೆ ಎಂಬ ನಂಬಿಕೆಯಿಂದ ಅನ್ನಯಜ್ಞ. ದೇಹದಲ್ಲಿ ಏನೆಲ್ಲಾ ಆಗುವುದೆಂಬ ಬಗ್ಗೆ ಪೂರ್ಣವಾಗಿ ಸ್ಪಷ್ಟವಾಗಿ ತಿಳಿದು ಊಟಮಾಡಲು ಸಾಧ್ಯವಿಲ್ಲ. ಆದ್ದರಿಂದಲೇ ಅದು ಅನ್ನಯಜ್ಞ.

ಯಜ್ಞ, ಹವನ ಮತ್ತು ಹೋಮಗಳೂ ಸಾರ್ವತ್ರಿಕವಾಗಿ ಒಳಿತಾಗುವುದೆಂದು ಸದ್ಭಾವನೆ ಇರುವಮಂದಿ, ಒಳಿತಿನ ಸಲುವಾಗಿ ಮಾಡುವರೇ ವಿನಃ, ಅದು ಹೇಗೆ ಉಪಯುಕ್ತವಾಗುವುದೆಂಬ ವಿವರ ಅರಿತು ಮಾಡುವುದಿಲ್ಲ.

ನಾವು ತಿಂದ ಆಹಾರ ಏನಾಗುವುದೆಂದು ತಿಳಿದು ಊಟ ಮಾಡಬೇಕೆಂದಾದರೆ ಎಲ್ಲರೂ ಉಪವಾಸ ಸಾಯಬೇಕು.

ಅನ್ನಯಜ್ಞದ ಹಾಗೆ ಪಿತೃಯಜ್ಞವನ್ನು ನಂಬಿಕೆ ಇರುವವರು ಅವರ ನಂಬಿಕೆಯ ಅಭಿವ್ಯಕ್ತಿಗೆ, ಸಂದರ್ಭದ ಇತಿಮಿತಿಗೆ ತಕ್ಕಂತೆ ಮಾಡಲಿ. ಬದುಕಿನ ಯಾವ ಆಚರಣೆಯನ್ನು ತಾನೆ ಎಲ್ಲ ಜನರಿಗೆ, ಎಲ್ಲ ಕಾಲದೇಶಗಳಲ್ಲೂ ಅನ್ವಯವಾಗುವಂತೆ ಮಾಡಲು ಸಾಧ್ಯ?

ದಾನ ಮಾಡಿದಾಗ ದಾನ ಪಡೆದವರಿಗೆ ಆಗುವ ಅನುಕೂಲವನ್ನು ಕಣ್ಣಾರೆ ಕಂಡು, ಆನಂದಿಸಲು ಸಾಧ್ಯ. ಹಾಗೆಯೇ ಪಿತೃಯಜ್ಞಮಾಡುವಾಗಲೂ ಬದುಕಿರುವವರನ್ನು ಆದರಿಸಿ ಅವರ ಸಂತೃಪ್ತಿಯಲ್ಲೇ ಸಂತೋಷಪಡುವ ಮೂಲಕ ಕೃತಜ್ಞತೆ, ಧನ್ಯತೆ ಕಂಡುಕೊಳ್ಳುವುದೇ ಪಿತೃಯಜ್ಞ.

'ಅತಿಯಾಗಿ ಪ್ರಶ್ನೆ ಕೇಳಬೇಡ' ಎಂಬ ಮಾತು ಬೃಹದಾರಣ್ಯಕ ಉಪನಿಷತ್ತಿನಲ್ಲಿ ಉಂಟು. ಅದರ ಅರ್ಥ ಪ್ರಶ್ನೆ ಕೇಳಬಾರದೆಂದಲ್ಲ, ಪಿತೃಯಜ್ಞದಲ್ಲಿ ಸಲ್ಲಿಸಿದ್ದು ಮೃತರಿಗೆ ತಲಪುವುದೆಂದು ಯಾರೂ ನಂಬಲಾರರು; ನಂಬಬೇಕಾಗಿಲ್ಲ.

ಆಚರಣೆಯ ಸಾಂಕೇತಿಕತೆಯನ್ನು ಕಲ್ಪಿಸಿಕೊಳ್ಳಬೇಕೆ ವಿನಾ ತರ್ಕವನ್ನು ವಿಸ್ತರಿಸುವುದನ್ನು ನಿಲ್ಲಿಸಿ. ತರ್ಕವನ್ನೇ ನಂಬುವವರು ಪಿತೃಯಜ್ಞ ಮಾಡುವುದು ಖಂಡಿತಾಬೇಡ.

ಹುಟ್ಟು ಸಾವಿನಂತಹ ಬದುಕಿನ ಏರಿಳಿತಗಳು, ಹಬ್ಬಹರಿದಿನಗಳು ಜೊತೆಯವರನ್ನು ಮಾನ್ಯ ಮಾಡುವ, ಮಾನ್ಯತೆ ಸ್ವೀಕರಿಸುವ ಸದವಕಾಶಗಳು ಮನ್ನಣೆಯ ಮುಗ್ಗಟ್ಟನ್ನು ಏಕಾಂಗಿತನವನ್ನು ಮೆಟ್ಟಿ ಏರಲು ಮೆಟ್ಟಲುಗಳು. ಅಲೌಕಿಕ ಆಶೋತ್ತರದ ಹಾಗೆಯೆ ಲೌಕಿಕ ಅನುಕೂಲಗಳು ಅವಕ್ಕೆ ಉಂಟು.

## ಕಾಲ ಪ್ರಜ್ಞೆ

ಗಡಿಯಾರವು ದಿನದ ಇಪ್ಪತ್ನಾಲ್ಕು ಗಂಟೆಗಳನ್ನು ಎರಡು ಹನ್ನೆರಡು ಗಂಟೆಗಳಾಗಿ ತೋರಿಸುವ ಕ್ರಮವಿದೆ. ಒಂದರಿಂದ ಇಪ್ಪತ್ನಾಲ್ಕರವರೆಗೆ ತೋರಿಸುವ ಗಡಿಯಾರಗಳು ಈಚೆಗೆ ಬಂದಿವೆ. ದಿನವು ಹಗಲು ರಾತ್ರಿಗಳೆಂದು ಎರಡು ಭಾಗವಾಗಿಯೇ ಅನುಭವ ವೇದ್ಯ. ಮುಂದಿನ ಭಾಗ (ಪೂರ್ವ) ಅನಂತರದ ಭಾಗ (ಉತ್ತರ) ಕೂಡಿದಾಗಲೇ ಪೂರ್ವೋತ್ತರ.

ಹಾಗಿದ್ದರೆ ತಿಂಗಳು ಹೇಗೆ ಮಾಪನವಾಗುತ್ತದೆ? ಪಾಶ್ಚಿಮಾತ್ಯ ಗಣನೆ ಆಧರಿಸಿದ ಕ್ಯಾಲೆಂಡರಿನಲ್ಲಿ ನಿರಂತರದ ಎಣಿಕೆ ಉಂಟು. ಆದರೆ ಭಾರತೀಯ ಕ್ರಮದಲ್ಲಿ ತಿಂಗಳನ್ನು ಎರಡು ಹದಿನೈದು ದಿನಗಳಾಗಿಯೇ ವಿಭಾಗಿಸಲಾಗಿದೆ. ಹಗಲು ರಾತ್ರಿಗಳನ್ನು ಸೂರ್ಯನ ಬೆಳಕಿನ ಹಾಜರಿ, ಗೈರು ಹಾಜರಿ ಆಧರಿಸಿ ಕೈಗೊಂಡ ಹಾಗೆಯೇ ಚಂದ್ರನ ಬೆಳಕಿನ ಏರಿಳಿತಗಳನ್ನು ಆಧರಿಸಿ ತಿಂಗಳನ್ನು ಶುಕ್ಲ ಹಾಗೂ ಕೃಷ್ಣ ಪಕ್ಷಗಳಾಗಿ ವಿಭಾಗಿಸಲಾಗಿದೆ. ತಿಂಗಳು ಎಂದರೆ ಚಂದ್ರನ ಬೆಳಕು. ಶುಕ್ಲ ಎಂದರೆ ಬೆಳಕು. ಎಲ್ಲವೂ ಸ್ಪಷ್ಟ. ಕೃಷ್ಣ ಎಂದರೆ ಎಲ್ಲವೂ ಕತ್ತಲು, ಎಲ್ಲವೂ ನಿಗೂಢ. ಹೀಗಾಗಿ ತಿಂಗಳನ್ನು ಎಣಿಕೆ ಮಾಡುವುದು ಹದಿನೈದು ದಿನಗಳ ಎರಡು ಗುಂಪುಗಳಾಗಿ.

ವರ್ಷವನ್ನು ಎರಡು ವಿಭಾಗವಾಗಿಸಿದರೆ ಆಗ ಚೈತ್ರ ಮಾಸದಿಂದ ಭಾದ್ರಪದ ಮಾಸದವರೆಗೆ ಆರು ತಿಂಗಳು, ಆಶ್ವಯುಜ ಮಾಸದಿಂದ ಫಾಲ್ಗುಣ ಮಾಸದವರೆಗೆ ಆರು ತಿಂಗಳು ಆಗುತ್ತದೆ. ವರ್ಷದ ಮೊದಲ ಆರು ತಿಂಗಳ ಮುಕ್ತಾಯವನ್ನು ಘೋಷಿಸುವ ಅಮಾವಾಸ್ಯೆಯೇ–ಮಹಾಲಯ ಅಮಾವಾಸ್ಯೆ. ಆ ಅಮಾವಾಸ್ಯೆಯ

ಹಿಂದಿನ ಹುಣ್ಣಿಮೆಯಿಂದ ಅಮಾವಾಸ್ಯೆಯುವರೆಗೆ ಇರುವ ಕೃಷ್ಣಪಕ್ಷವೇ ಪಿತೃಪಕ್ಷ.

ಪಿತೃಪಕ್ಷವೆಂದ ಮೇಲೆ ಮಾತೃಪಕ್ಷ ಎಂಬುದೊಂದುಂಟಲ್ಲವೇ? ಎಂಬ ತಾರ್ಕಿಕ ಪ್ರಶ್ನೆ ಅರ್ಥಹೀನ. 'ಪಿತೃ ದೇವತೆ'ಗಳನ್ನುವಾಗ ಲಿಂಗಭೇದವಿಲ್ಲ. ಹಾಗೆ ನೋಡಿದರೆ ಪಿತೃ–ಎಂಬ ಶಬ್ದಕ್ಕೆ 'ತಂದೆ' ಎಂದಷ್ಟೇ ಅರ್ಥವಿಲ್ಲ. ನಮ್ಮ ಏಳಿಗೆಗೆ ಕಾರಣರಾದ ಎಲ್ಲ ಮಹಿಳೆಯರೂ, ಪುರುಷರೂ ನಮ್ಮ ಪಾಲಿಗೆ ಪಿತೃದೇವತೆಗಳೇ! ಗತಿಸಿದ ಅವರೆಲ್ಲರನ್ನು ಸ್ಮರಿಸುವ 'ಪಕ್ಷ'ವೇ ಪಿತೃಪಕ್ಷ.

**ಜನಿ**ಸುವ ಹಾಗೂ **ಗತಿ**ಸುವ ಗುಣವುಳ್ಳದ್ದೇ – ಜಗತ್ತು. ಈ ಜಗತ್ತು ನಮ್ಮ ಅಂತರಂಗದಲ್ಲಿ ಜನಿಸಬೇಕಾದರೆ 'ಕರ' ಅಥವ ಬೆಳಕಿನ ಕಿರಣ ಅಗತ್ಯ. ಆ 'ಕರ'ವನ್ನು ಕರುಣಿಸುವವನೇ ಪ್ರಭಾಕರ (ಪ್ರ – ವಿಶೇಷ, ಭಾ – ಬೆಳಕಿನ ಕರ – ಕಿರಣ). ಕರದ ಸಂಪರ್ಕವಿದ್ದಾಗಲೇ ನಮಗೆ ಕಿರಣಗಳ ಮೂಲಕ ಲೋಕ ಸಂಪರ್ಕ. ಕರ ಮತ್ತು ಕಿರಣಗಳ ಸಂಕರಣವೇ ಜಗವು ನಮ್ಮ ಒಳ ಜಗವನ್ನು ಪ್ರವೇಶಿಸಲು ಕಾರಣ. ಹಗಲು ಸೂರ್ಯನ ಕಿರಣ, ಇರುಳು ಚಂದ್ರನ ಕಿರಣ ಗಳಿಗೆ ಅಂತಃಕರಣ ಸ್ಫುರಿಸುವಂತೆ – ತಾಳಲಯದಲ್ಲಿ ಬಾಳ ನಡೆಸು ದೇವಾ, ಎಂದು ಕನ್ನಡ ಕವಿಯೊಬ್ಬರು ಹಾಡಿದ್ದಾರೆ.

ಹಗಲು ಸೂರ್ಯನ ಕಿರಣ ಹೊರಜಗವನ್ನು, ಇರುಳು ಚಂದ್ರನ ಕಿರಣ ಒಳಜಗವನ್ನು ಜಾಗರಗೊಳಿಸುತ್ತದೆ. ಪ್ರಭಾಕರ ಕಿರಣಾಂಶವೇ ಸುಧಾಕರ. ಏಕೆಂದರೆ ಚಂದ್ರನಿಗೆ ಸ್ವತಂತ್ರ ಬೆಳಕಿಲ್ಲ. ಸೂರ್ಯನ ಬೆಳಕನ್ನೇ ಭೂಮಿಗೆ ಹಿಂತಿರುಗಿಸುವವ.

ಅಮಾವಾಸ್ಯೆ ರಾತ್ರಿ ಎರಡೂ ಕಿರಣಗಳೂ ಬಂದ್. ಈ ಕಾರಣದಿಂದಾಗಿಯೆ ನಮ್ಮನ್ನು ಸುತ್ತುವರಿದ 'ಇಹ' ಸಂಪರ್ಕವೂ ಬಂದ್ ಆಗಿಬಿಡುತ್ತದೆ. ಆಗ ಹಗಲಿನಲ್ಲಿ, ಹಗಲಿನ ಬೆಳಕಿನಿಂದಾಗಿಯೇ ಕಣ್ಮರೆ ಆದ ತಾರೆಗಳು ರಾತ್ರಿಯಲ್ಲಿ ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತವೆ. ಇಹದ ಪರದಾಟ ತಪ್ಪಿದಾಗ ಪರಲೋಕದ ತಾರೆಗಳು ಕಾಣಿಸಿಕೊಳ್ಳುತ್ತವೆ. ಆ ತಾರೆಗಳು ಇಹಲೊಕದಲ್ಲಿ ಬಾಳಿ ಬದುಕಿ ಕೀರ್ತಿ ಸಾಧಿಸಿದ ಆಚಂದ್ರಾರ್ಕ ಕೀರ್ತಿಯ ಕೀರ್ತಿಶೇಷರ ಸಂಕೇತಗಳು.

ಅಂದ ಮೇಲೆ ಭಾದ್ರಪದ ಮಾಸ ಕೃಷ್ಣಪಕ್ಷ ಲೌಕಿಕ ಬದುಕಿನ ಉತ್ಸವ, ಸಂಭ್ರಮ, ಸಡಗರಗಳನ್ನು ದೂರಸರಿಸಿ ನಮ್ಮ ಬದುಕನ್ನು ಹಸನಾಗಿಸಲು

ಪರಿಶ್ರಮವಹಿಸಿ ಗತಿಸಿ ಕಣ್ಮರೆಯಾದ ಹಿರಿಯರನ್ನು ನೆನಪಿಸಿಕೊಳ್ಳುವ ಪಕ್ಷ. ವ್ಯಾವಹಾರಿಕ ಸಂಬಂಧವನ್ನು ಕಳೆದುಕೊಂಡ ಮೇಲೂ ಇಂತಹ ಮಹನೀಯರ ನೆನಪಿನ ನೆರಳಿನಡಿಯಲ್ಲಿಯೇ ನಮ್ಮ ಬಾಳು ಸಾಗಬೇಕು. ಅವರನ್ನು ಪ್ರತಿ ವರ್ಷವೂ ನೆನಪಿಸಿಕೊಳ್ಳುವ ಸಂಪ್ರದಾಯ ಪಿತೃಪಕ್ಷದ ಆಚರಣೆಯ ಆಶಯ.

ದೇವರು ಎಂದರೆ ಕಾಣುವ ನಶ್ವರಜಗಕ್ಕೆ ಕಾರಣನಾದ ಜಗದೀಶ. ಜಗದೀಶನೆಂಬುವುದು ದೂರದ ಅಮೂರ್ತತತ್ತ್ವ. ಆದರೆ ನಮ್ಮ ಇಂದಿನ ಬದುಕಿಗೆ ತಮ್ಮ ಬಾಳನ್ನು ಸವೆಸಿ ಈ ಹಿಂದೆ ಶ್ರಮಿಸಿ ಕಣ್ಮರೆಯಾಗಿ ಹಿಂದೆ ಸರಿದವರೆಂದರೆ ಹಿಂದಿನ ತಲೆಮಾರಿನ ಹಿರಿಯರು. ಅವರ ಪರಂಪರೆಯನ್ನು ನಮ್ಮ ಇಂದಿನ ಸ್ಥಿತಿಗೆ ಮೂರ್ತ ಹಾಗೂ ಸಾಂತ ಕಾರಣತತ್ತ್ವ ಎಂದು ಭಾವಿಸಿದರೆ ತಪ್ಪೇನಲ್ಲ. ಇದರಿಂದಾಗಿ ಅವರೂ ನಮ್ಮ ಪಾಲಿಗೆ ಕಾರಣ ತತ್ತ್ವವಾದ ದೈವಸಮಾನರು. ಪ್ರತಿದಿನವೂ ಪ್ರಾತಃ ಸ್ಮರಣೀಯರು. ಅಂತಹವರನ್ನು ಲೋಕಲೀಲೆಯ ಮಾಯೆಯಲ್ಲಿ ಮರೆತು ಮೆರೆಯುವ ನಾವು, ಪಿತೃಪಕ್ಷದ ಸಂದರ್ಭದಲ್ಲಿ ಸ್ಮರಿಸಿಯಾದರೂ ಮನಃಪೂರ್ವಕವಾಗಿ ಕೃತಕೃತ್ಯರಾಗೋಣ.

ಮಕ್ಕಳಿಗೆ ಅಜ್ಜ ಅಜ್ಜಿಯರ ಹೆಸರನ್ನಿಡುವ ವಾಡಿಕೆ ಇತ್ತು. ಹೀಗಾಗಿ ಹಿಂದಿನ ತಲೆಮಾರಿನವರ ಹೆಸರುಗಳನ್ನು ಮಕ್ಕಳು ನೆನಪಿಡುತ್ತಿದ್ದರು. ತಂದೆತಾಯಿಯರೂ ತಮ್ಮ ಮಕ್ಕಳೊಡನೆ ಮಾತನಾಡುವಾಗ ಆ ಮನೆಯ ಹಿರಿಯರನ್ನು ಕುರಿತ ಪ್ರಸಂಗಗಳನ್ನು ರೋಚಕಕತೆಯಾಗಿ ವಿವರಿಸುತ್ತಿದ್ದ ಕಾರಣ ಮಕ್ಕಳಿಗೆ ತಮ್ಮ ವಂಶಸ್ಥ ಹಿರಿಯರ ಬಗೆಗೆ ಹೆಮ್ಮೆ ಮೂಡುತ್ತಿತ್ತು.

ಈಗ ನವೀನ ಹೆಸರುಗಳನ್ನಿಡುವ ಚಟದಲ್ಲಿ ಹಿರಿಯರ ಹೆಸರೂ ಕಣ್ಮರೆಯಾಗುತ್ತಿವೆ. ತಂದೆತಾಯಿಯರು ಮಕ್ಕಳೊಡನೆ ಕಾಲಕಳೆಯುವ ಅವಧಿಯೇ ಕಡಿಮೆ. ಆ ಅವಧಿಯಲ್ಲಿಯೂ ಆಡುವ ಮಾತುಗಳು ವ್ಯಾವಹಾರಿಕ ಜಾಣ್ಮೆ ಕುರಿತವೇ ವಿನಃ ಪರಂಪರೆಯ ಹಿರಿಯರನ್ನು ಕುರಿತು ಅಲ್ಲ.

ಹೀಗೆ ಪರಂಪರೆಯ ಪ್ರಜ್ಞೆಯೇ ಪಲಾಯನವಾಗುತ್ತಿರುವ ಈ ಸಂದರ್ಭದಲ್ಲಿ, ಮಹಾಲಯ ಅಮಾವಾಸ್ಯೆ ತನ್ನ ಮಹತ್ತ್ವವನ್ನು ಹೆಚ್ಚಿಸಿಕೊಂಡಿದೆ. ಸಮುದಾಯ ಪ್ರಜ್ಞೆ, ಪರಂಪರೆಯ ಪ್ರಜ್ಞೆ, ಹಾಗು ವಿಶಾಲ ಸಮಾಜದ ಅನೇಕ ವ್ಯಕ್ತಿಗಳ ಪರಿಶ್ರಮ, ಪರಿತ್ಯಾಗಗಳ ಪರಿಣಾಮವಾಗಿಯೇ ನಮ್ಮ ಬದುಕು ಸುಗಮವಾಗಿದೆ

ಎಂಬ ಎಚ್ಚರವನ್ನು ವರ್ಷದಲ್ಲಿ ಒಂದು ಪಕ್ಷವಾದರೂ ತೀವ್ರಗೊಳಿಸಿಕೊಳ್ಳುವುದಗತ್ಯ. ಇಲ್ಲದಿದ್ದ ಪಕ್ಷದಲ್ಲಿ– ಎಳೆಯ ಬದುಕು ಬೆಳದ ಬದುಕು ಏನಿದ್ದೂ ತಬ್ಬಲಿ.

**ಒಬ್ಬನುಣುವೂಟದಲ್ಲಿ ಸವಿಯಿಲ್ಲ ಸೊಗವಿಲ್ಲ ।**
**ಇಬ್ಬರಾಗುವೆನೆಂದನಂತೆ ಪರಬೊಮ್ಮಂ ॥**
**ಹೆಬ್ಬದುಕನೊಂಟಿತನದೊಳದೇನು ಬದುಕುವೆಯೊ? ।**
**ತಬ್ಬಿಕೊಳೊ ವಿಶ್ವವನು – ಮಂಕುತಿಮ್ಮ ॥**

ಬದುಕು ಮಹಾ ಆಲಯವಾಗಲಿ – ಮಹಾಲಯ ಆಗದಿರಲಿ ಎಂಬ ಹಾರೈಕೆಗೆ ಮಹಾಲಯ ಅಮಾವಾಸ್ಯೆಯ ಆಚರಣೆ ಪೂರಕ, ಪ್ರೇರಕ ಆಗಲಿ.

**ತ್ರೀಣಿ ಶ್ರಾದ್ಧೇ ಪವಿತ್ರಾಣಿ ದೌಹಿತ್ರಃ ಕುತಪಸ್ತಿಲಾಃ ।**
**ತ್ರೀಣಿ ಚಾತ್ರ ಪ್ರಶಂಸಂತಿ ಶೌಚಮಕ್ರೋಧ ಮತ್ವರಾಂ ॥** (ಮಹಾಭಾರತ ಆದಿಪರ್ವ)

ಶ್ರಾದ್ಧದಲ್ಲಿ ಪ್ರಶಂಸನೀಯವಾದದ್ದು ಶುಚಿತ್ವ, ಕೋಪವಿಲ್ಲದಿರುವುದು, ರಭಸರಹಿತವಾಗಿರುವುದು. ರಭಸಜೀವನದ ಬದಲಾವಣೆಯಾಗಿ ಪಿತೃಪಕ್ಷದಲ್ಲಿ– ಪ್ರಶಾಂತರಾಗಿಯೂ ರಭಸ ಜೀವನ ರಭಸ ವಿಚಾರಗಳಿಂದ ದೂರವಾಗಿಯೂ ಇರೋಣ. ದೈಹಿಕ/ಮಾನಸಿಕ ಸ್ವಾಸ್ಥ್ಯದ ದೃಷ್ಟಿಯಿಂದ ಇದು ಅಗತ್ಯವಾದ ವಿಶ್ರಾಂತಿ.

### ಭಗವದ್ಗೀತೆ ಹಾಗೂ ಪಿತೃಪೂಜೆ

ಶ್ರೀ ಕೃಷ್ಣ ಪ್ರತಿಪಾದಿಸಿದ ಭಗವದ್ಗೀತೆ ಇಡೀ ಉಪನಿಷತ್ತಿನ ಸಾರ ಸಂಗ್ರಹ. ಅಧಿಕೃತ ಭಾಷೆಯಲ್ಲಿ ಪರಮಾತ್ಮನೇ ನಿರೂಪಿಸಿರುವ ಈ ಕೃತಿಯ ಒಂಭತ್ತನೇ ಅಧ್ಯಾಯದಲ್ಲಿ ಈ ಶ್ಲೋಕವನ್ನು ಕಾಣಬಹುದು.

**ಪಿತಾಮಹಂ ಅಸ್ಯ ಜಗತೋ ಮಾತಾದಾತಾ ಪಿತಾಮಹಃ**
**ವೇದ್ಯಂ ಪವಿತ್ರಮೋಂಕಾರ ಋಕ್ ಸಾಮ ಯಜುರೇವ ಚ ॥ ೧೭ ॥**

ಜಗತ್ತಿಗೆ ನಾನೇ ಪಿತಾ, ಮಾತಾ, ದಾತಾ ಪಿತಾಮಹ ಎಂದು ಪರಮಾತ್ಮ ಘೋಷಿಸಿರುವುದನ್ನು ಗಮನಿಸಿ ಜಗತ್ತಿಗೆ ನಮ್ಮನ್ನ ತಂದ ತಂದೆ, ಒಡಲಿನಲ್ಲಿ ಆಕಾರ ನೀಡಿ ಮಡಿಲಲ್ಲಿಟ್ಟು ಸಾಕಿದ ತಾಯಿಯ ಹಾಗೆಯೇ ಪರಮಾತ್ಮ ಕರುಣೆ ಎಂದೂ ಅರ್ಥಮಾಡಬಹುದು. ಹೆತ್ತ ತಾಯಿಯಾಗಲಿ, ಜನ್ಮ ನೀಡಿದ ತಂದೆಯಾಗಲಿ ಪ್ರಜ್ಞಾಪೂರ್ವಕವಾಗಿ ನಮ್ಮನ್ನು ರೂಪಿಸಿಲ್ಲ. ಅವರನ್ನು ನಿಮಿತ್ತವಾಗಿರಿಸಿಕೊಂಡು ಪರಮಾತ್ಮನೇ ಈ ಲೀಲೆಯಾಡುತ್ತಾನೆ ಎಂಬ ಭಾವವೂ ಇದರಲ್ಲಿದೆ.

**ತ್ವಮೇವ ಮಾತಾ ಪಿತಾತ್ವಮೇವ**
**ತ್ವಮೇವ ಬಂಧುಶ್ಚ ಸಖಾತ್ವಮೇವ**
**ತ್ವಮೇವ ವಿದ್ಯಾ ದ್ರವಿಣಂ ತ್ವಮೇವ**
**ತ್ವಮೇವ ಸರ್ವಂ ಮಮ ದೇವ ದೇವ**

ಎಂಬ ಶ್ಲೋಕವೂ ಇದೇ ಮಾತನ್ನು ಪ್ರತಿಪಾದಿಸುತ್ತದೆ.

ನಮ್ಮ ಇರುವಿಗೆ ಕಾರಣರಾದ ನಿಮಿತ್ತ ಮಾತಾಪಿತರರೂ, ಲಕ್ಷ್ಮೀನಾರಾಯಣನ ವ್ಯಕ್ತರೂಪವೇ! ಹೀಗಾಗಿ ಪಿತೃ ಸಮರ್ಪಿತವೆಲ್ಲವೂ ದೈವಸಮರ್ಪಿತವೇ ವಿನಃ ಸಾಂತ ನಿಮಿತ್ತ ವ್ಯಕ್ತಿಗಳ ವಿಳಾಸಕ್ಕೆ ಕಳುಹಿಸಿದ ಟಪಾಲಲ್ಲ. ಅದೇ ದೈವದ ಸೃಷ್ಟಿಯಾದ ಹಿರಿಯರನ್ನು ಸತ್ಕರಿಸಿ ಅವರನ್ನೇ ನಿಮಿತ್ತ ಮಾತಾಪಿತೃಗಳೆಂದು ಭಾವಿಸಿ ಮಾಡುವ ಪಿತೃಯಜ್ಞ ಶ್ರೀಕೃಷ್ಣಾರ್ಪಣವೇ. ಶ್ರಾದ್ಧದ ಅಂತ್ಯದಲ್ಲೂ ಇದನ್ನು ಘೋಷಿಸಲಾಗುತ್ತದೆ. ಮಿಗಿಲಾಗಿ ಈಗ ಪ್ರಸ್ತಾಪಿಸಿದ ಶ್ಲೋಕದ ಹಿಂದಿನ ಶ್ಲೋಕ ಗಮನಿಸಿ.

**ಅಹಂ ಕ್ರತುರಹಂಯಜ್ಞಃ ಸ್ವಧಾಹಮಹವೌಷಧಮ್ ।**
**ಮಂತ್ರೋಽಹಮಹಮೇವಾಜ್ಯ ಮಹಮಗ್ನಿರಹಂ ಹುತಂ ॥ ೧೬ ॥**

ಮಾಡುವ ಕ್ರಮ, ಯಜ್ಞ ಮೊದಲಾದ ಕಲ್ಯಾಣಕಾರಕ ಅಗ್ನಿ ಪೂಜೆಯೊಂದಿಗೆ 'ಸ್ವಧಾ' ಅಂದರೆ ಪಿತೃಗಳಿಗೆ ಸಲ್ಲಿಸುವ ಹವಿಸ್ಸು ತಾನೇ ಎಂದು ಘೋಷಿಸಿರುವ ಪರಮಾತ್ಮ, ಮುಂದುವರಿದು ಮಂತ್ರ, ಆಜ್ಯ, ಅಗ್ನಿ, ಅಗ್ನಿಪೂಜೆ – ಎಲ್ಲವೂ ತಾನೇ ಎಂದು ಹೇಳಿರುವಾಗ, ದ್ರವ್ಯವೂ, ದಾನವೂ, ದಾತನೂ, ಸ್ವೀಕೃತದಾರನೂ ತಾನೇ ಎಂದಿರುವಾಗ ಪಿತೃಪೂಜೆ / ಪಿತೃಯಜ್ಞದ ವಾರಸುದಾರ ಪಿತರ ಸೃಷ್ಟಿಗೆ ಕಾರಣನಾದ ಕಾರಣಸ್ಯ ಕಾರಕಾ ನಾರಾಯಣನೇ ಎಂಬುದು ವಿದಿತ.

ಇಂತಹ ಉದಾತ್ತ ಸಾಂಕೇತಿಕ ಆಚರಣೆಯಲ್ಲಿ ತರ್ಕಕರ್ಕಶತೆ ಬೆರೆಸದೆ ಆಶಯವನ್ನು ಅರಿತು ಹಿರಿಯರ ಆಶೀರ್ವಾದ ಪಡೆದು ಧನ್ಯರೂ, ಕೃತಕೃತ್ಯರೂ ಆಗೋಣ.

ಬ್ಯಾಂಕಿನಲ್ಲಿ ನಾವು ಸಂಚಯಿಸಿದ ಹಣವನ್ನು ನಮಗೆ ಮತ್ತೆ ಅದೇ ಹಣವಾಗಿ ಹಿಂತಿರುಗಿಸುವುದಿಲ್ಲ. ವ್ಯಾವಹಾರಿಕ ಬದುಕಿನಲ್ಲಿಯೇ ಈ ಪರೋಕ್ಷತೆ ಇರುವಾಗ ನಂಬಿಕೆ ಶ್ರದ್ಧೆಯ ಪ್ರತೀಕವಾದ ಪಿತೃಪೂಜೆಗೂ ಇದು ಅನ್ವಯ. ನಾವು ಮಾಡುವ ಪಿತೃಸೇವೆಯ ಪ್ರತೀಕ ನೀಡಿಕೆ ಸ್ವೀಕರಿಸಲು ಎಲ್ಲರೂ ಅರ್ಹರು.

***ಲೇಖಕರು: ನಿವೃತ್ತ ಪ್ರಾಧ್ಯಾಪಕರು***
***ಸರ್ಕಾರಿ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು***

# ಮಹಾಲಯ ಅಮಾವಾಸ್ಯೆ

*ಜಿ. ವಿ. ಪ್ರಭಾಕರ ರಾವ್*

ಚಾತುರ್ಮಾಸ್ಯದಲ್ಲಿಯ ಭಾದ್ರಪದ ಮಾಸದ ಕೃಷ್ಣಪಕ್ಷವನ್ನು ಪಿತೃವಿನ ಪಕ್ಷ ಅಥವಾ ಮಹಾಲಯ ಪಕ್ಷವೆಂದು ಕರೆಯುತ್ತಾರೆ.

ಈ ಹಿಂದೆ ಧರ್ಮರಾಜ ಹಾಗೂ ಭೀಷ್ಮರ ನಡುವೆ ನಡೆದ ಸಂಭಾಷಣೆಯ ವಿವರವನ್ನು ವೈಶಂಪಾಯನರು ಜನಮೇಜಯ ಮಹಾರಾಜರಿಗೆ ತಿಳಿಸಿರುತ್ತಾರೆ. ಅದರ ಸಾರಾಂಶ ಕೆಳಕಂಡಂತಿದೆ.

೧. ನಿತ್ಯಮೃತರಾದ ಪಿತೃಗಳ ಚೇತನವು ಯಾವುದಾದರೂ ಒಂದು ಲೋಕದಲ್ಲಿ ಯಾವುದಾದರೂ ಒಂದು ಯೋನಿಯಲ್ಲಿರುವುದು ಸತ್ಯಭೂತವಾದದ್ದೇ. ಶ್ರಾದ್ಧ ದೇವತೆಗಳು ನಾವು ಕೊಡುವ ತರ್ಪಣ ವಿಧಿಯಿಂದ ತೃಪ್ತರಾಗಿ ನಮ್ಮ ಪಿತೃಗಳು ಯಾವ ಯೋನಿಯಲ್ಲಿದ್ದರೂ ಅವರಿಗೆ ಉಚಿತವಾಗುವಂತೆ ಮಾರ್ಪಡಿಸಿ ತಲುಪಿಸುವರು. (ಮತ್ಸ್ಯಪುರಾಣದ ಆಧಾರದಿಂದ)

೨. ಪಿತೃ ದೇವತೆಗಳ ವಾಸಸ್ಥಾನವಾದ ಪಿತೃಲೋಕವು, ಚಂದ್ರಲೋಕದ ಮೇಲ್ಭಾಗದಲ್ಲಿದೆ. ಈ ಲೋಕದಲ್ಲಿ ಕೃಷ್ಣ ಪಕ್ಷದ ಅಷ್ಟಮಿಯಿಂದ ಶುಕ್ಲ ಪಕ್ಷದ ಅಷ್ಠಮಿಯವರೆಗೆ ಹಗಲು ಮತ್ತು ಶುಕ್ಲಪಕ್ಷದ ಅಷ್ಟಮಿಯಿಂದ ಕೃಷ್ಣಪಕ್ಷದ ಅಷ್ಠಮಿಯವರೆಗೆ ರಾತ್ರಿ ಇರುವುದು. ನಮ್ಮ ಅಮಾವಾಸ್ಯೆಯು ಅವರಿಗೆ ಮಧ್ಯಾಹ್ನವಾಗಿರುವುದು. ಆದ ಕಾರಣ ಪ್ರತಿ ಅಮಾವಾಸ್ಯೆ ಆ ದೇವತೆಗಳಿಗೆ ತಿಲ ತರ್ಪಣಾ ಕೊಡುವ ಪರಿಪಾಠ ಇರುತ್ತದೆ.

೩. ''ಸಧಯಾ ಚಪಿತ್ರ್ಯಾನಪಿಃ ಅಮೃತೇನ ಸುರಾನ್ಯರ್ವಾನ್'' ಎಂಬ ವಾಕ್ಯದಂತೆ ಸುಷುಮ್ನಾ ಎಂಬ ಸೂರ್ಯನ ಕಿರಣವು ಚಂದ್ರನನ್ನು ಬೆಳಗಿಸಿ ದೇವ ಮತ್ತು ಪಿತೃಗಳಿಗೆ ಆಹಾರ ಕೊಡುತ್ತದೆ. ಪಿತೃಗಳಿಗೆ ಕೊಡುವ ಆಹಾರಕ್ಕೆ ''ಸ್ವಾಧಾ'' ಎಂತಲೂ, ದೇವತೆಗಳಿಗೆ ಕೊಡುವ ಆಹಾರಕ್ಕೆ ''ಅಮೃತ'' ಎಂತಲೂ ಕರೆಯಲಾಗಿದೆ. ಈ ಕಿರಣದಲ್ಲಿನ ೧೪ ಭಾಗದ ಕಲಿಯನ್ನು

ದೇವತೆಗಳೂ ಮತ್ತು ೧ ಭಾಗದ ಕಲಿಯನ್ನು ಪಿತೃ ದೇವತೆಗಳು ಭೋಗಿಸುವರು. ಅಂದರೆ ಅಮಾವಾಸ್ಯೆಯ ದಿನ ಸೂರ್ಯನ ರೂಪವಾದ ಚಂದ್ರನ ೧೫ನೇ ಕಲಿಯು ಪಿತೃ ದೇವತೆಗಳಿಗೆ ಆಹಾರ ಒದಗಿಸುವುದು. ಅರ್ಥಾತ್ ಸೂರ್ಯನ ಕಿರಣವೇ ಪಿತೃ ದೇವತೆಗಳ ಆಹಾರ ಆಗುವುದು. ಅಂದರೆ "ಸ್ವಾಧಾ" ಎಂಬ ಉಚ್ಚಾರಣೆಯಿಂದ ಶ್ರಾದ್ಧದಲ್ಲಿ ಕೊಡುವ ಸೂಕ್ಷ್ಮ ಜಲಾಂಶಗಳು ಸೂರ್ಯನ ಕಿರಣದ ಮೂಲಕ ಪಿತೃ ದೇವತೆಗಳಿಗೆ ಮುಟ್ಟುವುವು. ಶ್ರದ್ಧಾವಾಆಪಃ

೪. ದಕ್ಷಿಣಾಯನದಲ್ಲಿ ಸೂರ್ಯನು ಕನ್ಯಾ ಪ್ರವೇಶಿಸಿದಾಗ ಮಹಾಲಯ ಆಗಿ ಈ ಅವಧಿಯಲ್ಲಿ ಸೂರ್ಯನು ಭೂಮಿಗೆ ಹತ್ತಿರ ಇದ್ದು, ಅವನ ಕಿರಣ ಪಿತೃಗಳ ದಿಕ್ಕಾದ ದಕ್ಷಿಣಕ್ಕೆ ಪಸರಿಸುವುದು ಮತ್ತು ಸದರಿ ದಿನ ನೀಡಿದ ತರ್ಪಣ ಅಂದರೆ ಜಲ ಶೀಘ್ರವಾಗಿ ಪಿತೃ ದೇವತೆಗಳನ್ನು ತಲುಪುವುವು. ಕಾರಣ ಮಹಾಲಯ ಅಮಾವಾಸ್ಯೆ ತರ್ಪಣ – ಶ್ರಾದ್ಧ ಅತ್ಯಂತ ಶ್ರೇಷ್ಠ ಮತ್ತು ನಮ್ಮ ಆದ್ಯ ಕರ್ತವ್ಯವಾಗಿರುತ್ತದೆ. ಮೇಲಿನ ಪಿತೃ ಕ್ರಿಯೆಯಿಂದ ಸಂತುಷ್ಟರಾದ ಪಿತೃ ದೇವತೆಗಳು ಕರ್ತೃವಿಗೆ ಇಹಲೋಕದಲ್ಲಿ ಆಯುರಾರೋಗ್ಯ, ಐಶ್ವರ್ಯ, ಸುಖ, ಸಂತಾನ, ಸಂಪತ್ತು, ಜ್ಞಾನಾದಿಗಳನ್ನು ಪರಲೋಕದಲ್ಲಿ ಸ್ವರ್ಗ ಮತ್ತು ಮೋಕ್ಷವನ್ನು ಅನುಗ್ರಹಿಸುವರು.

೫. ಪೂರ್ವ ಜನ್ಮದ ಪಾಪ ಪುಣ್ಯದ ಫಲ ಮನುಷ್ಯ ಜನ್ಮ. ಈ ಜನ್ಮದಿಂದ ನಮ್ಮ ವಂಶ ಪಾವನ ಆಗಬೇಕಾಗಿದೆ. ವಂಶದ ಪಿತೃಗಳು ತೃಪ್ತಿಯಾಗಬೇಕಾದರೆ ಸತ್ಕರ್ಮ, ದಾನ, ಧರ್ಮ, ಜಪ, ತಪ, ನಡತೆ, ಸಹವಾಸ ಇವುಗಳಿಂದ ಪಿತೃಗಳು ಸಂತುಷ್ಟರಾಗುತ್ತಾರೆ. ಇವರ ತೃಪ್ತಿಯಿಂದ ದೇವತೆಗಳೂ ತೃಪ್ತಿ ಹೊಂದುತ್ತಾರೆ. ತೀರ್ಥ ಕ್ಷೇತ್ರ ತರ್ಪಣದಿಂದ ಪಿತೃಗಳು ಸಂತುಷ್ಟರಾಗುತ್ತಾರೆ. ನೀವು ಬಿಡುವ ಎಳ್ಳು ಸಹಿತ ನೀರು, ಪಿತೃಗಳಿಗೆ ಇರುವ ಕ್ಷುದ್ಬಾಧೆಯನ್ನು ನಿವಾರಿಸುತ್ತದೆ. ಇದೇ ರೀತಿ ಪಿಂಡ ಸಹ ಅವರ ಹಸಿವನ್ನು ನಿವಾರಿಸುತ್ತದೆ.

ತೀರ್ಥ–ಕ್ಷೇತ್ರದಲ್ಲಿ ಕೊಡುವ ತರ್ಪಣವು ಜಾತಕದಲ್ಲಿರುವ ಶನಿ–ರಾಹು, ಶನಿ–ರವಿ, ಶನಿ–ಚಂದ್ರ, ಶನಿ–ಕುಜ, ಶನಿ–ಗುರು, ಶನಿ–ಶುಕ್ರ ದೋಷಗಳನ್ನು ಹೋಗಲಾಡಿಸಿ ಆ ನವಗ್ರಹಗಳ ಮತ್ತು ಪಿತೃಗಳ ಆಶೀರ್ವಾದ ಪಡೆಯುವೆವು.

ಹಿಂದೂಸ್ಥಾನದ ಜೀವನ ಪದ್ಧತಿಯಲ್ಲಿ ನಿತ್ಯವೂ ಕೃತಜ್ಞತಾ ಭಾವವೇ, ನಿತ್ಯವೂ ತರ್ಪಣವೇ, ನಿತ್ಯವೂ ಹಬ್ಬವೇ. ದ್ವೇಷಾ ಅಸೂಯೆಗಳ ಹತ್ತಿರ ಸುಳಿಯಬಾರದೆಂಬುದೇ ಇದರ ಅರ್ಥ.

ತರ್ಪಣವೆಂದರೆ–ಅಂಜಲಿ ಬದ್ಧವಾದ ಜಲ ತರ್ಪಣ ಋಣ ಮುಕ್ತರಾಗುವುದೇ ಭಾರತೀಯರ ಹುಟ್ಟುಗುಣ, ಜ್ಞಾನವನ್ನು ದಯಪಾಲಿಸಿದವರ ಮತ್ತು ದೇಹವನ್ನು ಕೊಟ್ಟವರ ಪವಿತ್ರ ನೆನಪು ತರ್ಪಣಸೇವೆ. ನಮಗೆ ಉಪಕಾರ ಮಾಡಿದವರೆಲ್ಲರನ್ನು ನೆನೆಸುವುದು ಕಷ್ಟಕರ ಆದರೆ ಕೆಳವೊಂದು ವ್ಯಕ್ತಿಗಳನ್ನು ನೆನೆಯಲೇಬೇಕು. ಇಂತಹ ಕೆಲವರು ನಿತ್ಯ ತರ್ಪಣಕ್ಕೆ ಅರ್ಹರು. ಮೂರು ಋಣಗಳನ್ನು ನಾವು ತೀರಿಸಲೇಬೇಕು. ಆ ಮೂರು ಋಣಗಳಾವುವೆಂದರೆ ಪಿತೃ ಋಣ, ಋಷಿ ಋಣ ಮತ್ತು ದೇವ ಋಣ.

**ಪಿತೃ ಋಣ** – ದೇಹ ಕೊಟ್ಟವರು ಮತ್ತು ನಾವು ಪ್ರಪಂಚದಲ್ಲಿ ಬದುಕಲು ಅನುವು ಮಾಡಿಕೊಟ್ಟವರಿಗೆ ಎಡೆ ಹಾಕುವುದು, ಶ್ರಾದ್ಧ, ತರ್ಪಣ ಕೊಡುವುದು ಮುಖ್ಯ.

**ಋಷಿ ಋಣ** – ವೇದ ಶಾಸ್ತ್ರಗಳು, ದರ್ಶನಗಳನ್ನು ತಪಸ್ಸಿನ ಮೂಲಕ ತಂದು ಕೊಟ್ಟವರು. ಇವರು ಮನುಕುಲಕ್ಕೆ ಪೂಜ್ಯರು.

**ದೇವ ಋಣ** – ಭೂಮಿ, ಆಕಾಶ, ನೀರು, ಅಗ್ನಿ, ಗಾಳಿ ಎಂಬ ಪಂಚಭೂತಗಳನ್ನು ನಾವು ಬಳಸುತ್ತಿರುವುದೇ ದೇವ ಋಣ. ಈ ಋಣವನ್ನು ತೀರಿಸಲು ಸಾಧ್ಯವಿಲ್ಲ. ಕೇವಲ ಭಕ್ತಿ, ಶ್ರದ್ಧೆ ಮತ್ತು ಸೇವೆಯಿಂದ ಸ್ಮರಿಸಬಹುದು.

## ಮಹಾಲಯ ಅಮಾವಾಸ್ಯೆಯ ತರ್ಪಣ

ಭಾದ್ರಪದ ಮಾಸದ ಅಮಾವಾಸ್ಯೆಯನ್ನು ಮಹಾಲಯ ಅಮಾವಾಸ್ಯೆ, ಸರ್ವ ಪಿತೃ ಅಮಾವಾಸ್ಯೆ ಎಂದು ಕರೆಯುವರು. ನಮ್ಮ ಹಿರಿಯರು ನಮಗಾಗಿ

ಅಪಾರ ತ್ಯಾಗ ಮಾಡಿದ್ದಾರೆ. ಅವರು ಅನೇಕ ಕಷ್ಟ ನಷ್ಟ ಅನುಭವಿಸಿ, ಕೆಲವೊಮ್ಮೆ ಸಾಲ–ಸೋಲ ಮಾಡಿ, ವಿದ್ಯೆ–ಬುದ್ಧಿ ಕಲಿಸಿ, ನಮ್ಮನ್ನು ಬೆಳೆಸಿ, ನಮ್ಮ ಬಾಳು ಬೆಳಗಲು ಕಾರಣರಾದವರು. ಅವರು ಪ್ರತ್ಯಕ್ಷವಾಗಿ ನಮ್ಮ ಕಣ್ಮುಂದೆ ಇಲ್ಲವಾದರೂ ಸೂಕ್ಷ್ಮ ರೂಪದಿಂದ ಪರೋಕ್ಷವಾಗಿ ನಮ್ಮ ಕರ್ತವ್ಯ ಕರ್ಮಗಳನ್ನು ವೀಕ್ಷಿಸುತ್ತಾ ಇರುತ್ತಾರೆ. ಅಂತಹ ಪೂಜನೀಯ ಹಿರಿಯರನ್ನು ನಾವು ಎಷ್ಟು ಸ್ಮರಿಸಿದರೂ ಸಾಲದು. ನಮ್ಮನ್ನಗಲಿದ ತಂದೆ ತಾಯಿಯರನ್ನು, ಅಣ್ಣ–ತಮ್ಮಂದಿರನ್ನು, ಅವರ ಪತ್ನಿಯರನ್ನು, ಆಪ್ತರನ್ನು ನಮ್ಮ ಜೀವನದ ಜಂಜಾಟದಲ್ಲಿ ನಿತ್ಯವೂ ಸ್ಮರಿಸಲು ಸಾಧ್ಯವಾಗುವುದಿಲ್ಲ. ಕೊನೆಯ ಪಕ್ಷ ವರ್ಷಕ್ಕೊಮ್ಮೆ ಪಿತೃ ಪಕ್ಷದಲ್ಲಿ ಅಥವಾ ಮಹಾಲಯ ಅಮಾವಸ್ಯೆಯ ದಿನದಂದಾದರೂ ಅವರನ್ನು ಸ್ಮರಿಸಿ ತಿಲತರ್ಪಣ, ಜಲತರ್ಪಣ, ಬಲಿ ಅಥವಾ ಪಿಂಡದಾನ ಮಾಡುವುದರ ಮೂಲಕ ಕೃತಜ್ಞತೆ ಸಲ್ಲಿಸುವುದು ನಮ್ಮ ಕರ್ತವ್ಯವಾಗಿದೆ. ಇದು ಈ ಮಹಾಲಯ ಅಮಾವಾಸ್ಯೆಯ ವಿಶೇಷವಾಗಿದೆ.

ಈ ಹಬ್ಬವನ್ನು ಹಿರಿಯರಿಗೆ ಎಡೆ ಇಡುವ ಕಾರ್ಯವೆಂದು ಸರ್ವವರ್ಣೀಯರು ಮಾಡುತ್ತಾರೆ. ಆ ದಿನ ಅವರ ಹಿರಿಯರಿಗೆ ಇಷ್ಟವಾದ ತಿಂಡಿ, ತಿನಿಸುಗಳನ್ನು ಬಟ್ಟೆ–ಬರೆಗಳನ್ನು ಅವರ ಭಾವಚಿತ್ರದ ಬಳಿ ಇಟ್ಟು ಪೂಜೆಮಾಡಿ ನಂತರ ಅದನ್ನು ಮನೆಯವರು ಪ್ರಸಾದದ ರೂಪದಲ್ಲಿ ಸ್ವೀಕರಿಸುವರು. ಈ ದಿನ ಬಡವರಿಗೆ ದಾನ ಮಾಡುವ ಪದ್ಧತಿಯೂ ಇದೆ.

ಈ ಪಿತೃಪಕ್ಷದ ದಿನಗಳಂದು ಅಥವಾ ಮಹಾಲಯ ಅಮಾವಾಸ್ಯೆಯೆಂದು ನಮ್ಮಲ್ಲಿರುವುದರಲ್ಲಿ ಸ್ವಲ್ಪವನ್ನಾದರೂ ದಾನ ಮಾಡಿದರೆ ಪಿತೃಗಳು ಸಂತುಷ್ಟರಾಗಿ ನಮಗೆ ಇನ್ನೂ ಹೆಚ್ಚಿನ ಸುಖ ಸಂತೋಷವನ್ನು ನೀಡುತ್ತಾರೆ.

***ಲೇಖಕರು: "ಜೀವನಯಜ್ಞ" ಸಂಪಾದಕರು***

# ಮಾತಾಪಿತೃ ಸೇವೆ

***ಟಿ. ಎಸ್. ನಾಗರಾಜರಾವ್***

ತೈತ್ತರೀಯ ಉಪನಿಷತ್ತಿನ ಶೀಕ್ಷಾವಲ್ಲಿಯಲ್ಲಿ ಗುರುಗಳು ಅಧ್ಯಯನ ಮುಗಿಸಿ ಗುರುಕುಲದಿಂದ ಹಿಂತಿರುಗುವ ವಿದ್ಯಾರ್ಥಿಗಳಿಗೆ ಹೀಗೆ ಹಿತವಚನ ನೀಡುತ್ತಾರೆ.

1. ಸತ್ಯಂ ವದ । ಧರ್ಮಂ ಚರ । ಸ್ವಾಧ್ಯಾಯಾನ್ ಮಾ ಪ್ರಮದಃ । (ಸತ್ಯವನ್ನು ಹೇಳು, ಧರ್ಮವನ್ನೇ ಆಚರಿಸು, ನಿನ್ನ ಅಧ್ಯಯನ ವ್ಯಾಸಂಗವನ್ನು ಬಿಡಬೇಡ)
2. ಮಾತೃದೇವೋಭವ । ಪಿತೃದೇವೋ ಭವ । ಆಚಾರ್ಯದೇವೋ ಭವ । ಅತಿಥಿ ದೇವೋಭವ ।

   (ತಾಯಿ, ತಂದೆ, ಗುರುಗಳು, ಅತಿಥಿ ಅಭ್ಯಾಗತರನ್ನು ದೇವರ ಸಮಾನವೆಂದು ಭಾವಿಸು)
3. ಕುಶಲಾನ್ನ ಪ್ರಮದಿತವ್ಯಂ । ಭೂತ್ಮ್ಯೈ ನ ಪ್ರಮದಿತವ್ಯಂ ।

   ದೇವ ಪಿತೃ ಕಾರ್ಯಾಭ್ಯಾಂ ನ ಪ್ರಮದಿತವ್ಯಮ್ ॥

   (ಆರೋಗ್ಯವನ್ನೂ, ಧನವನ್ನೂ ಉಪೇಕ್ಷಿಸಬೇಡ. ದೇವಕಾರ್ಯ, ಪಿತೃಕಾರ್ಯಗಳನ್ನು ಶ್ರದ್ಧೆಯಿಂದ ಮಾಡು)

ವಿಶೇಷವಾಗಿ ಮಕ್ಕಳು ತಾಯಿ ತಂದೆಯರ ಸೇವೆಯನ್ನು ಪ್ರೀತಿ ಆದರಗಳಿಂದ ಮಾಡಬೇಕು. ಜೀವನ ಪರ್ಯಂತ ಅವರ ಆಹಾರ, ಆರೋಗ್ಯ, ವಿಶ್ರಾಂತಿ, ದೇವಕಾರ್ಯ, ಮನಸ್ಸಿಗೆ ನೆಮ್ಮದಿ, ಶಾಂತಿ, ಸಂತೃಪ್ತಿ – ಇವುಗಳ ಬಗ್ಗೆ ಸೂಕ್ತ ಗಮನ ನೀಡಬೇಕು.

ತಾಯಿ ತಂದೆ ಸೇವೆಗೆ ರಾಮಾಯಣದ ಶ್ರವಣಕುಮಾರ ಹಾಗೂ ಮಹಾಭಾರತದ ಧರ್ಮವ್ಯಾಧರು ನಮಗೆ ಆದರ್ಶವಾಗಬೇಕು.

**ನಾಸ್ತಿ ಮಾತೃ ಸಮಂ ದೈವಂ ನಾಸ್ತಿ ಪಿತೃ ಸಮೋ ಗುರುಃ ।**
**ತಯೋರ್ನಿತ್ಯಂ ಪ್ರಿಯಂಕುರ್ಯಾತ್ ಮನಸಾ ಗಿರಾ ॥**

ತಾಯಿಗೆ ಸಮನಾದ ದೇವರಿಲ್ಲ. ಸ್ತನ್ಯಪಾನದಿಂದ ಹಿಡಿದು, ಎಲ್ಲ ಮಕ್ಕಳನ್ನು ಹೊತ್ತು ಹೆತ್ತ ತಾಯಿ ತಾನಿರುವವರೆಗೂ ಕರುಳ ಬಳ್ಳಿಗಳನ್ನು ವಾತ್ಸಲ್ಯದಿಂದ ಪೋಷಿಸಿದವಳು.

ತಂದೆಗೆ ಸಮನಾದ ಗುರುವಿಲ್ಲ. ಉಪನಯನದಲ್ಲಿ ಬ್ರಹ್ಮೋಪದೇಶ ನೀಡುವವನು ತಂದೆಯೇ. ಮನಸ್ಸಿನಿಂದ, ಮಾತಿನಿಂದ ಅವನಿಗೆ ನಿತ್ಯವೂ ಸಂತೋಷ ಉಂಟುಮಾಡಬೇಕಾದ್ದು ಮಕ್ಕಳ ಕರ್ತವ್ಯ.

## ಪಿತೃಕಾರ್ಯ

ಯಾವಜ್ಜೀವ ಮಾತಾಪಿತರನ್ನು ಕಾಪಾಡಿದ ನಂತರ, ಅವರ ಮರಣಾ ನಂತರವೂ ವಿವಿಧ ಕರ್ಮಗಳನ್ನು ನಡೆಸುವ ಬದ್ಧತೆ ಮಕ್ಕಳಿಗಿದೆ. ಅದನ್ನು ಮಾತೃಯಜ್ಞ, ಪಿತೃಯಜ್ಞ ಎನ್ನುತ್ತಾರೆ.

ಷೋಡಶ ಸಂಸ್ಕಾರಗಳಲ್ಲಿ ಅಂತ್ಯೇಷ್ಟಿ ಕಡೆಯದು. ಮರಣವಾದ ಮೇಲೆ ಮೃತರ ಶರೀರವನ್ನೇ ಸಮಿತ್ತಾಗಿ ಅಗ್ನಿಗೆ ಮಂತ್ರೋಕ್ತವಾಗಿ ಅರ್ಪಿಸುವುದೇ ಅಂತಿಮ ಸಂಸ್ಕಾರ. ಸಾಮಾನ್ಯವಾಗಿ ಪುತ್ರ (ಗಂಡುಮಗ)ನಿಗೆ ಈ ಅಧಿಕಾರ. ಅಪುತ್ರಸ್ಯ ಗತಿರ್ನಾಸ್ತಿ ಎಂಬ ಮಾತಿದೆ. ಪುತ್ ಎಂಬ ನರಕದಿಂದ ಪಾರುಮಾಡುವವನು ಪುತ್ರ. ಪುತ್ರನಿಲ್ಲದಾಗ ಶಾಸ್ತ್ರ ಪ್ರಕಾರ ಅಧಿಕಾರವುಳ್ಳವರು ಈ ಅಂತಿಮ ಸಂಸ್ಕಾರ ಮಾಡಬಹುದು. ಸಾವಿನ ನಂತರ ಮಾಡುವ ಕ್ರಿಯೆಗಳಿಗೆ ಅಪರ ಕರ್ಮ ಎನ್ನುವರು.

ಇದರಲ್ಲಿ ಅಗ್ನಿ ಸಂಸ್ಕಾರ (ದಹನ), ಅಸ್ಥಿ ವಿಸರ್ಜನೆ, ಹತ್ತು ದಿನಗಳ ನಿತ್ಯವಿಧಿ, ಹತ್ತನೆಯ ದಿನ ಧರ್ಮೋದಕ, ಹನ್ನೊಂದು ಹನ್ನೆರಡನೇ ದಿನಗಳ ವಿಧಿ (ಪ್ರೇತತ್ವ ನಿವಾರಣೆಗಾಗಿ). ನಂತರ ಸಪಿಂಡೀಕರಣ ಸೇರಿವೆ.

## ಸಪಿಂಡೀಕರಣ

ಮರಣವಾದಾಗ ಜೀವ ಪ್ರೇತವಾಗುತ್ತದೆ. ದಹನದಿಂದ ಸ್ಥೂಲಶರೀರ ಇಲ್ಲವಾಗುತ್ತದೆ. ನಂತರ ಸೂಕ್ಷ್ಮ ಶರೀರ ಪ್ರೇತರೂಪದಲ್ಲಿರುವಾಗ ಅದನ್ನು ತೃಪ್ತಿಗೊಳಿಸಲು ಹತ್ತು ದಿನಗಳ ಕಾಲ ನಿತ್ಯವಿಧಿ (ಪಿಂಡ ಪ್ರದಾನ ಮಾಡಬೇಕು, ಕಾಗೆಗಳಿಗೆ ಇಡಬೇಕು, ನೀರಿನಲ್ಲಿ ವಿಸರ್ಜಿಸುವಂತಿಲ್ಲ.)

ಪ್ರೇತತ್ವ ವಿಮೋಚನೆ ಮಾಡಿ, ಜೀವವನ್ನು ಪಿತೃವರ್ಗಕ್ಕೆ ಸೇರಿಸುವ ಕ್ರಿಯೆಯೇ ಸಪಿಂಡೀಕರಣ. ನಂತರ ಪಿತೃಲೋಕಕ್ಕೆ ಪ್ರಯಾಣ. ಇದು ನಮ್ಮ ಕಾಲದ ರೀತಿಯಲ್ಲಿ ಒಂದು ವರ್ಷ.

ಈ ಸಮಯದಲ್ಲಿ ಆದ್ಯಮಾಸಿಕ [ಅಶೌಚ ನಿವೃತ್ತಿಯ ನಂತರ, ಸಪಿಂಡೀಕರಣ ಆದ ಮೇಲೆ ಮೊದಲ ಶ್ರಾದ್ಧ] ಹನ್ನೆರಡನೇ ತಿಂಗಳವರೆಗೆ ಪ್ರತಿ ತಿಂಗಳೂ

ಮಾಸಿಕ, 27, 45, 176, 346 ದಿನಗಳಲ್ಲಿ ನಡೆಸುವ ಊನ ಮಾಸಿಕಗಳು – ಒಟ್ಟು 16 ಶ್ರಾದ್ಧಗಳು ಉತ್ತಮ ಷೋಡಶಿ ಎಂದು ಹೇಳಲಾಗುತ್ತದೆ. (ಷೋಡಶ ಶ್ರಾದ್ಧೇಷು ತರ್ಪಣಂ ನಾಸ್ತಿ)

ವರ್ಷಾಂತಿಕದಲ್ಲಿ ಅಬ್ಧಿ ವಿಮೋಕ, ನಂತರ ಪ್ರಥಮ ಸಾಂವತ್ಸರೀಕ ಶ್ರಾದ್ಧಗಳು, ವೈಕುಂಠ ಸಮಾರಾಧನೆ (ಬಂಧು ಇಷ್ಟರಿಗೆ ಭೋಜನ ಮಾಡಿಸುವುದು) ನಂತರ ಪ್ರತಿ ವರ್ಷ ಮೃತರ ತಿಥಿಯಂದು ಶ್ರಾದ್ಧ ಮಾಡುವುದು. ಮಹಾಲಯ ಪಕ್ಷದಲ್ಲಿ (ಭಾದ್ರಪದ ಕೃಷ್ಣಪಕ್ಷ) ಎಲ್ಲಾ ಪಿತೃವರ್ಗಕ್ಕೂ [ಗತಿಸಿರುವ ತಾಯಿ, ತಂದೆ, ಅವರ ಹಿಂದಿನವರು, ಸೋದರವರ್ಗ, ತನ್ನ ಸಹೋದರ ವರ್ಗ, ಪತ್ನಿಯ ಸಂಬಂಧಿಗಳು, ಅತ್ತೆ, ಮಾವ, ಭಾವಮೈದುನರು ಎಲ್ಲ ಸೇರುತ್ತಾರೆ] ಶ್ರಾದ್ಧ, ತರ್ಪಣಗಳನ್ನು ನಡೆಸಬೇಕು.

ಸಂವತ್ಸರ ಶ್ರಾದ್ಧಗಳಲ್ಲಿ ಕೇವಲ ಮೂರು ತಲೆಗಳವರಿಗೆ (ಪಿತೃ, ಪಿತಾಮಹ, ಪ್ರಪಿತಾಮಹ / ಮಾತೃ, ಮತಾಮಹಿ, ಪ್ರಪಿತಾಮಹಿ) ತರ್ಪಣ ನೀಡುವುದು. (ಭಾಗವತ ಐದನೇ ಅಧ್ಯಾಯದಲ್ಲಿ ಧುಂದುಕಾರಿ ವಿಚಾರ ಗಮನಿಸಿ) ಅಮಾವಾಸ್ಯೆ, ಸಂಕ್ರಮಣಗಳಲ್ಲಿ ದ್ವಾದಶ ಪಿತೃಗಳಿಗೆ ತರ್ಪಣ ನೀಡಬೇಕು.

| | | |
|---|---|---|
| ದ್ವಾದಶ ಪಿತೃಗಳು – | ತಂದೆ, ತಾತ, ಮುತ್ತಾತ | ೩ |
| | ತಾಯಿ, ಅಜ್ಜಿ, ಮುತ್ತಜ್ಜಿ | ೩ |
| | ತಾಯಿಯ ತಂದೆ, ತಾತ, ಮುತ್ತಾತ | ೩ |
| | ತಾಯಿಯ ತಾಯಿ, ಅಜ್ಜಿ, ಮುತ್ತಜ್ಜಿ | ೩ |
| | **ಒಟ್ಟು** | **೧೨** |

ದಕ್ಷಿಣಾಯನ ಮತ್ತು ಉತ್ತರಾಯಣಗಳ ಸಂಕ್ರಾಂತಿ ದಿನಗಳು ಗ್ರಹಣ, ಮಹಾಲಯಗಳಲ್ಲಿ, ತೀರ್ಥಕ್ಷೇತ್ರಗಳಲ್ಲಿ ಮೇಲಿನ ೧೨ ಪಿತೃಗಳಲ್ಲದೆ, ಮೃತಪಟ್ಟಿರುವ ಹೆಂಡತಿ, ಮಗ, ಅಣ್ಣ, ತಮ್ಮ ಅವರ ಪತ್ನಿಯರು, ದೊಡ್ಡಪ್ಪ, ದೊಡ್ಡಮ್ಮ, ಚಿಕ್ಕಪ್ಪ, ಚಿಕ್ಕಮ್ಮ ಅವರ ಮಕ್ಕಳು ಸೋದರಮಾವ – ಅವರ ಹೆಂಡತಿ, ಮಕ್ಕಳು, ಸೋದರತ್ತೆ – ಅವರ ಗಂಡ ಮಕ್ಕಳು, ಅಕ್ಕ ತಂಗಿಯರು – ಅವರ ಗಂಡಂದಿರು, ಗಂಡು ಮಕ್ಕಳು, ಮಾವ, ಅತ್ತೆ, ಭಾವ ಮೈದುನರು, ಅವರ ಪತ್ನಿಯರು, ಹೆಂಡತಿಯ ಸೋದರಿಯರು, ಅವರ ಪತಿಗಳು, ಗುರುಗಳು.

(ಮೃತರಾದ ಸಂಬಂಧಿಗಳಿಗೆ ಮಾತ್ರ) – ಇವರಿಗೂ ತರ್ಪಣ ಬಿಡಬೇಕು.

ದ್ವಾದಶ ಪಿತೃಗಳಿಗೆ ಮಾತ್ರ ಮೂರು ಬಾರಿ. ಉಳಿದವರಿಗೆ ಕೇವಲ ಒಂದು

ಸಲ "ಸ್ವಧಾನಮಸ್ತರ್ಪಯಾಮಿ" ಎಂದು ಹೇಳಿ ಬಿಡಬೇಕು. (ಮರಣ ಹೊಂದಿದ ಒಂದು ವರ್ಷವಾಗುವವರೆಗೆ ಅವರಿಗೆ ತರ್ಪಣ ಬಿಡುವಂತಿಲ್ಲ.)

**ಅಶೌಚ**

ಶಿಶು ಜನನದಲ್ಲಿಯ ಅಶೌಚಕ್ಕೆ ಪುರುಡು ಎನ್ನುವುದು ಚಾಲ್ತಿಯಲ್ಲಿದೆ. ಮರಣದಲ್ಲಿನ ಅಶೌಚಕ್ಕೆ ಸೂತಕ ಎಂದು, ಅಸ್ಪೃಶ್ಯತೆಯು ಆಚರಣೆಯಲ್ಲಿದೆ. ಕಾಲಾನುಕ್ರಮದಿಂದ ಈಗ ಔಪಚಾರಿಕವಾಗಿ ಚಾಲನೆಯಲ್ಲಿದೆ. ಅಶೌಚದಲ್ಲಿ ಸಂಧ್ಯಾವಂದನೆ ಈ ಕೆಳಗಿನಂತೆ ಆಚರಿಸಬೇಕು.

೧. ಅಮಂತ್ರಕ ಪ್ರಾಣಾಯಾಮ – ಮಂತ್ರ ಹೇಳದೆ ಶ್ವಾಸ ತೆಗೆದುಕೊಂಡು ಬಿಡುವುದು.
೨. ಅರ್ಘ್ಯದವರೆಗಿನ ಮಂತ್ರಗಳನ್ನು ಮನಸ್ಸಿನಲ್ಲೇ ಸ್ಮರಿಸಿಕೊಳ್ಳುವುದು.
೩. ಮಂತ್ರ ಹೇಳಿ ಅರ್ಘ್ಯಬಿಟ್ಟು ಪ್ರವರ ಹೇಳಬಾರದು. ನಂತರ ನಮಸ್ಕಾರ ಮಾಡಿ ಸಂಧ್ಯಾವಂದನೆ ಮುಗಿಸುವುದು. ಜಪ, ದಿಗ್ ನಮಸ್ಕಾರಗಳಿಲ್ಲ.

ವಿಷಯವನ್ನು ಹಂಸಕ್ಷೀರನ್ಯಾಯದಿಂದ ಸ್ವೀಕರಿಸಲು ಬಿನ್ನಹ ಓಂ ತತ್ಸತ್

**ಪಿತೃಯಾನ ಉಡಾವಣೆಯ ಸಾಮ್ಯ :** ನಾವು ಮಾಡುವ ಅಪರ ಕರ್ಮವು ಮೃತರ ಆತ್ಮವನ್ನು ಪಿತೃಲೋಕಕ್ಕೆ ಸೇರಿಸಲು ಮಾಡುವ ಕ್ರಿಯೆ. ಇದನ್ನು ಮಾನವನಿರ್ಮಿತ ಉಪಗ್ರಹ ಉಡಾವಣೆಗೆ ಹೋಲಿಸಬಹುದು.

ಸ್ಥೂಲ ಶರೀರದಿಂದ ಹೊರಗೆ ಹೋದ ಆತ್ಮವು, ಸೂಕ್ಷ್ಮ ಶರೀರ ಹೊಂದಿ ಪ್ರೇತಾವಸ್ಥೆಯಲ್ಲಿರುತ್ತದೆ. ಸೂಕ್ಷ್ಮ ಶರೀರವನ್ನು ಅಭಿವೃದ್ಧಿಪಡಿಸುವ ಲೋಕಾಂತರಕ್ಕೆ ಪಯಣಿಸಲು ಸಿದ್ಧಗೊಳಿಸುವುದು – ಮಲಿನ ಷೋಡಶಿ (ಉಪಗ್ರಹ ಜೋಡಣೆ).

ಗುರುತ್ವಾಕರ್ಷಣೆ ಇಹ ಬಂಧ ತ್ಯಜಿಸಿ ಪಿತೃಲೋಕಕ್ಕೆ ರವಾನಿಸುವುದು. ಶವ ತೆಗೆಯುವಾಗ ಮುಖತಂಡುಲ. ಹತ್ತನೆಯ ದಿನ ಜ್ಞಾತಿಗಳು, ಮಿತ್ರರು ಧರ್ಮೋದಕ ನೀಡುವುದರಿಂದ ಬಂಧುಗಳ ಮಮಕಾರ ನಿವಾರಣೆ. ಸಪಿಂಡೀಕರಣ – [ಉಪಗ್ರಹ ಉಡಾವಣೆ].

ವರ್ಷ ಪೂರ್ತಿ ಶ್ರಾದ್ಧಗಳು – [ರಾಕೆಟ್ಟುಗಳು ಹಂತಹಂತವಾಗಿ ಉರಿದು ಬೀಳುತ್ತವೆ] ಆತ್ಮ ಉಪಗ್ರಹವನ್ನು ಮೇಲೇರಿಸುವುದು.

ಒಂದು ವರ್ಷದ ನಂತರ ಕಕ್ಷೆಗೆ (ಪಿತೃಲೋಕಕ್ಕೆ) ಸೇರುವುದು.

*ಲೇಖಕರು: ನಿವೃತ್ತ ವ್ಯವಸ್ಥಾಪಕರು*
*ಭಾರತೀಯ ಜೀವ ವಿಮಾ ನಿಗಮ*

# ಅಂತ್ಯೇಷ್ಟಿ

*ಪ್ರೊ. ಎಂ. ವಿ. ಹೆಗಡೆ*

ಜೀವಿಗೆ ಸಲ್ಲಬೇಕಾದ ಸಂಸ್ಕಾರಗಳಲ್ಲಿ ಕೊನೆಯದು ಅಂತ್ಯೇಷ್ಟಿ. ಇದನ್ನು ಅಂತ್ಯಕ್ರಿಯೆ, ಉತ್ತರಕ್ರಿಯೆ, ಔರ್ಧ್ವದೇಹಿಕ ಕರ್ಮ, ಪಿತೃಮೇಧ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಮರಣದ ಸಮಯದಲ್ಲಿ ಹಾಗೂ ಮರಣಾನಂತರದಲ್ಲಿ ಮಾಡಬೇಕಾದ ಕ್ರಿಯಾಕಲಾಪಗಳೆಲ್ಲವೂ ಇದರ ವ್ಯಾಪ್ತಿಯಲ್ಲಿ ಬರುತ್ತದೆ. ಬದುಕಿನುದ್ದಕ್ಕೂ ವಿವಿಧ ಸಂಸ್ಕಾರಗಳಿಂದ ಸಂಪನ್ನವಾದ ಜೀವಕ್ಕೆ ಮರಣಾನಂತರದಲ್ಲಿಯೂ ಸೂಕ್ತ ಸಂಸ್ಕಾರಗಳು ದೊರೆತು ಸದ್ಗತಿ ಪ್ರಾಪ್ತವಾಗಲೆಂದು ಆಶಯ ಇಲ್ಲಿದೆ.

ಜಾತಸಂಸ್ಕಾರಗಳಿಗಿಂತಲೂ ಮೃತ ಸಂಸ್ಕಾರಕ್ಕೆ ಮಹತ್ವ ಹೆಚ್ಚು. ಜಾತಸಂಸ್ಕಾರಗಳಲ್ಲಿ ಲೋಪವಾದರೆ ಅವನೊಬ್ಬನೇ ಭ್ರಷ್ಟನಾದಾನು. ಮೃತಸಂಸ್ಕಾರದಲ್ಲಿ ಹಾಗಲ್ಲ. ಮೃತನಾದವನಿಗೆ ಸದ್ಗತಿಯೂ ಇಲ್ಲ, ಜೀವಂತನಾಗಿದ್ದವನಿಗೆ ಸುಖವೂ ಇಲ್ಲ. ವ್ಯಕ್ತಿ ಮೃತನಾದ ಮೇಲೆ ಅವನ ಸಂಸ್ಕಾರಗಳ ಸಲುವಾಗಿ ನಾವೇಕೆ ಶಮಿಸಬೇಕೆಂದುಕೊಂಡರೆ ಅದರಿಂದ ಅಪಾಯ ತಪ್ಪಿದ್ದಲ್ಲ. ಸಂಸ್ಕಾರ ಹೀನವಾದ ಜೀವವು ಪೀಡಾಕಾರಕವಾಗುತ್ತದೆ. ಪ್ರೇತಾವಸ್ಥೆಯಿಂದ ವಿಮೋಚನವಿಲ್ಲದಿದ್ದರೆ ಇದ್ದವರಿಗೂ-ಇಲ್ಲದಿದ್ದವರಿಗೂ ನೆಮ್ಮದಿ ಇಲ್ಲ. ಹೀಗಾಗಿ ಇಹಪರ ಸೌಖ್ಯದ ಸಲುವಾಗಿ ಮೃತಸಂಸ್ಕಾರವು ಅವಶ್ಯ.

## ಸಂಸ್ಕಾರದ ಹುಟ್ಟು

ಒಂದಿಲ್ಲೊಂದು ವಿಧಾನದಿಂದ ಶವಕ್ಕೆ ಗತಿ ಕಾಣಿಸುವುದು ಎಲ್ಲ ಜನಾಂಗಗಳಲ್ಲಿಯೂ ಇದೆ.

ಇನ್ನೊಂದು ಕಾರಣವೆಂದರೆ ಭಯ. ಇಲ್ಲಿ ಭಯವಿರುವುದು ಇತರರಿಗೆ ಸಾವು ಘಟಿಸಿ ಹೋಗಿರುತ್ತದೆಯಾದರೂ ಮೃತ ವ್ಯಕ್ತಿಯು ಪ್ರೇತವಾಗಿ ಕಾಡಬಹುದೆಂಬ ಭಯ. ಅವನಲ್ಲದಿದ್ದರೆ ಅಲೆದಾಡುವ ದುಷ್ಟಶಕ್ತಿಗಳು ಶವವನ್ನು

ತಮ್ಮ ಶರೀರವನ್ನಾಗಿಸಿಕೊಂಡಾವು. ಆಗ ಅವುಗಳಿಗೆ ಹೆಚ್ಚಿನ ಶಕ್ತಿ ಬರುತ್ತದೆ. ಅದು ಇತರರನ್ನು ವಿಶೇಷತಃ ಮೃತನ ಕುಟುಂಬದವರನ್ನು ಪೀಡಿಸಬಹುದೆಂಬ ಭಯ. ಪ್ರೇತಾತ್ಮನಿಂದ ಯಾವುದೇ ತೆರನಾದ ಪೀಡೆಗಳೊದಗದಿರಬೇಕಾದರೆ ಸಾಂಗವಾಗಿ ಅಂತ್ಯಕ್ರಿಯೆಯನ್ನು ಪೂರೈಸಬೇಕು. ಬಹುಶಃ ಇಂದಿಗೂ ಈ ಭಯವೇ ಅಂತಿಮ ಸಂಸ್ಕಾರವನ್ನು ಬಿಡದಿರುವಂತೆ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿದೆ.

ಭಯದ ಭಾವನೆಯಂತೆಯೇ ಮೃತ ವ್ಯಕ್ತಿಯ ಬಗೆಗೆ ನಮಗಿರಬಹುದಾದ ಪ್ರೀತ್ಯಾದರಗಳೂ ಅಂತ್ಯಕ್ರಿಯೆಗೆ ಕಾರಣವಾಗಿವೆ. ವ್ಯಕ್ತಿಯ ಜೊತೆಗೆ ನಮಗಿರುವ ಸಂಬಂಧವನ್ನು ಸ್ಮರಿಸಿಕೊಳ್ಳುತ್ತೇವೆ. ಸದ್ಗುಣಗಳನ್ನು ನೆನೆಯುತ್ತೇವೆ. ಅವನು ಬದುಕಿದ್ದಾಗ ಮಾಡಿದ ಉಪಕಾರಗಳು ನಮ್ಮನ್ನು ನಡೆಸಿಕೊಂಡ ರೀತಿ ಇತ್ಯಾದಿಗಳೆಲ್ಲ ನೆನಪುಗಳಾಗಿ ಕಾಡತೊಡಗುತ್ತವೆ. ಅವನ ಬಗೆಗೆ ನಮ್ಮ ಪ್ರೀತ್ಯಾದರಗಳನ್ನು ತೋರ್ಪಡಿಸುವ ಬೇರಾವ ವಿಧಾನಗಳಿಗಿಂತ ಉತ್ತರಕ್ರಿಯೆ ಪ್ರಾಶಸ್ತ್ಯ ಪಡೆಯುತ್ತದೆ. ಹಾಗೆ ಮಾಡಿದ್ದರಿಂದ ಅವನ ಆತ್ಮವು ಶಾಂತಿಯನ್ನು ಪಡೆಯುವುದೆಂದು ನಂಬುತ್ತೇವೆ.

ಮರಣವೆಂದರೆ ಆತ್ಮವು ಶರೀರದಿಂದ ಬೇರೆಯಾಗುವುದು ಮಾತ್ರ. ಅವನ ದೇಹವು ನಶಿಸುವುದೇ ಹೊರತು ಆತ್ಮವು ಅಮರವೆಂದು ತಿಳಿದಾಗ ಮರಣೋತ್ತರ ಜೀವನದ ಬಗೆಗೆ ಇನ್ನಷ್ಟು ವಿವರಗಳು ದೊರೆತವು. ಆಗ ಕಂಡುಕೊಂಡದ್ದೇ ಪರಲೋಕ. ಆತ್ಮವು ಈ ಶರೀರದಿಂದ ಬಿಡುಗಡೆ ಹೊಂದಿದ ಮೇಲೆ ದಿವ್ಯ ಶರೀರವನ್ನು ಧರಿಸಿ ಕರ್ಮಾನುಸಾರಿಯಾಗಿ ಫಲವನ್ನು ಅನುಭವಿಸುವುದೆಂದು ತಿಳಿದಾಗ ಪರಲೋಕಕ್ಕೆ ಸುರಕ್ಷಿತವಾಗಿ ತಲುಪಲು ಮತ್ತು ಅಲ್ಲಿ ಜೀವನವನ್ನು ಕಳೆಯಲು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂಬ ಅಭಿಪ್ರಾಯ ತಲೆದೋರಿತು. ಹಾಗಾಗಿ ಪರಲೋಕ ಗಮನ ಮತ್ತು ಅಲ್ಲಿನ ವಾಸಕ್ಕೆ ಅಗತ್ಯವಾದ ಸಾಮಗ್ರಿಗಳನ್ನು ಕಳುಹಿಸಿಕೊಡಬೇಕೆಂದು ಬಯಸಿದರು.

ಜೀವಂತವಿದ್ದವರಿಗೆ ಮರಣಾಶೌಚದಿಂದ ಬಿಡುಗಡೆ ಹಾಗೂ ಮೃತಾತ್ಮಕ್ಕೆ ಶಾಂತಿ.

## ಮಹಾಪ್ರಯಾಣದ ಸಿದ್ಧತೆ

ಧರ್ಮಶಾಸ್ತ್ರಗಳದು ಇದಕ್ಕಿಂತ ಭಿನ್ನ ನಿಲುವು. ಅವುಗಳ ಪ್ರಕಾರ ಅದೊಂದು ಸಹಜ ಘಟನೆ. ಹುಟ್ಟಿದವರೆಲ್ಲ ಒಂದಿಲ್ಲೊಂದು ದಿನ ಸಾಯಲೇಬೇಕು. ಹುಟ್ಟಿದನೆಂಬ ಕಾರಣದಿಂದ ಹರ್ಷವಾಗಲಿ ಸತ್ತನೆಂಬ ಕಾರಣದಿಂದ ಶೋಕವಾಗಲಿ ಸಲ್ಲದು.

ಗೋಮಯದಿಂದ ಸಾರಿಸಿದ ನೆಲದ ಮೇಲೆ ದಕ್ಷಿಣಾಗ್ರವಾಗಿ ದರ್ಭೆಗಳನ್ನು ಹರಡಿ ಮಕ್ಕಳು ಎಳ್ಳುಗಳನ್ನು ಬೀರಬೇಕು. ಅದರ ಮೇಲೆ ವಸ್ತ್ರವನ್ನೋ ಕೃಷ್ಣಜಿನವನ್ನೋ ಹಾಸಿ ಅದರ ಮೇಲೆ ದಕ್ಷಿಣ ದಿಕ್ಕಿಗೆ ತಲೆಯಿರುವಂತೆ ಮಾಡಿ ಮಲಗಿಸಬೇಕು. ಮರಣ ಸಮಯದಲ್ಲಿ ಬಾಯಿಗೆ ಗಂಗಾಜಲವನ್ನೋ ತುಲಸೀಜಲವನ್ನೋ ಬಿಡುವ ರೂಢಿಯೂ ಉಂಟು.

ಗೋಮಯವು ಶುದ್ಧಿಕಾರಕ. ಕೀಟಾಣುಗಳನ್ನು ನಾಶಗೊಳಿಸುವ ಶಕ್ತಿ ಅದಕ್ಕಿದೆ. ರೋಗಗ್ರಸ್ತಾವಸ್ಥೆಯಲ್ಲಿ ಹುಟ್ಟಿರಬಹುದಾದ ರೋಗಾಣುಗಳನ್ನು ಅದು ಒಂದು ಪ್ರಮಾಣದಲ್ಲಿ ನಾಶಗೊಳಿಸಿ ನಿಯಂತ್ರಿಸುತ್ತದೆ.

ಗೋಮಯದಂತೆ ದರ್ಭೆಯೂ ವಿದ್ಯುತ್ತನ್ನು ನಿರೋಧಿಸುವಂಥದು. ಅದರ ಯೋಗ್ಯತೆ ಬಂಗಾರಕ್ಕಿಂತ ಕಡಿಮೆಯಲ್ಲ. ಆದರೆ ಬಂಗಾರದಂತಲ್ಲದೆ ಅದು ಸರ್ವಜನ ಸುಲಭವಾಗಿದೆ. ದಿವ್ಯವಾದ ತೈಜಸ ಗುಣಗಳ ಆಕರ ಅದು. ಮೇಲಾಗಿ ಪಾವಿತ್ರ್ಯ ಸೂಚಕ. ಪೂಜ್ಯರನ್ನು ಸ್ವಾಗತಿಸಿ ನೀಡುವ ಆಸನವೆಂದರೆ ದರ್ಭಾಸನ.

ದಕ್ಷಿಣಕ್ಕೆ ತಲೆಯಿರಿಸಿ ಮಲಗಿಸುವುದು ಪಿತೃಲೋಕ ಗಮನವನ್ನು ಸೂಚಿಸುವ ಸಲುವಾಗಿ.

## ಆತುರದಾನ

ಮರಣಕಾಲದಲ್ಲಿ ತಿಲದಾನ, ಮರಣಾ ನಂತರದಲ್ಲಿ ತಿಲಹೋಮ, ಜಲಾಂಜಲಿಯನ್ನು ಕೊಡುವಲ್ಲಿ ತಿಲಾಂಜಲಿ. ಹೀಗೆ ನೋಡಿದರೆ ಅಪರ ಕರ್ಮಗಳಲ್ಲಿ ತಿಲ ಅಥವಾ ಎಳ್ಳಿಗೆ ವಿಶೇಷ ಪ್ರಾಧಾನ್ಯವಿದೆ. ತಿಲಕ್ಕೆ ಇಷ್ಟೊಂದು ಪ್ರಾಶಸ್ತ್ಯವಾದರೂ ಏತಕ್ಕೆ? ಅದಕ್ಕೆ ತಿಲದ ಮಹಿಮೆಯೇ ಕಾರಣ. ಗರುಡಪುರಾಣದಲ್ಲಿ ತಿಲ ಮಹಿಮೆಯನ್ನು ಹೀಗೆ ಬಣ್ಣಿಸಲಾಗಿದೆ.

***ಮಮ ಸ್ವೇದ ಸಮುದ್ಭೂತಾ ಯತಸ್ತೇ ಪಾವನಾ ತಿಲಾಃ ।***
***ಅಸುರಾ ದಾನವಾ ದೈತ್ಯಾ ವಿದ್ರವಂತಿ ತಿಲೈ ಸ್ತತಃ ॥***

ನನ್ನ ಬೆವರಿನಿಂದ ಹುಟ್ಟಿದವುಗಳಾದ್ದರಿಂದ ತಿಲಗಳು ಪಾವನವಾಗಿವೆ. ದೈತ್ಯ–ದಾನವ–ರಾಕ್ಷಸರು ತಿಲಗಳಿಂದ ಭಯಗೊಂಡು ಓಡಿಹೋಗುತ್ತಾರೆ.

ಮಹರ್ಷಿಯಾದ ಕಾಶ್ಯಪನ ವಂಶದಲ್ಲಿ ಹುಟ್ಟಿದ ತಿಲವನ್ನು ದಾನ ಮಾಡುವುದರಿಂದ ನನ್ನ ಪಾಪಗಳು ದೂರವಾಗಲಿ. ಇದು ತಿಲದಾನದ ಸಮಯದಲ್ಲಿ ಹೇಳಬೇಕಾದ ಮಾತು.

ನಾವು ಕೊಡುವ ತಿಲಾಂಜಲಿಯಾದರೂ ಪಿತೃಗಳೊಂದಿಗೆ ಸುಮಧುರ ಸಂಬಂಧ ಸ್ಥಾಪನೆಯ ಉದ್ದೇಶದಿಂದ.

ದಾನಗಳನ್ನು ವಿಧಿಸಿರುವುದು ಲೋಭದ ವಿರುದ್ಧವಾಗಿ. ಜೀವನದಲ್ಲಿ ಹಣಗಳಿಸುವುದೇ ಸರ್ವಸ್ವವೆಂದು ತಿಳಿದವರು ಕಡಿಮೆಯಿಲ್ಲ. ಅಂತಹವರು ಜೀವನ ಪರ್ಯಂತ ದಾನ ಧರ್ಮಾದಿಗಳಲ್ಲಿ ತೊಡಗಿರುವುದಿಲ್ಲ. ಅಂತ್ಯಕಾಲದಲ್ಲಿಯಾದರೂ ದಾನ ಮಾಡಿದರೆ ಅದು ಅವರಿಗೇ ಒಳ್ಳೆಯದೆಂದು ತಿಳಿಸುವುದಕ್ಕಾಗಿ ದಾನಗಳನ್ನು ವಿಧಿಸಲಾಗಿದೆ. ತಾನು ಸಂಪಾದಿಸಿದ್ದರಲ್ಲಿ ಕೆಲಭಾಗವನ್ನು ದಾನವಾಗಿ ಸಮಾಜಕ್ಕೆ ಅರ್ಪಿಸುವುದು ವ್ಯಕ್ತಿಯ ಕರ್ತವ್ಯವಾಗಿದೆ. ಅದು ವ್ಯಕ್ತಿಗೆ ಹಿತಕರವಾಗುವಂತೆ ಸಮಾಜಕ್ಕೂ ಹಿತಕರ. ಇಂಥ ಮಾತುಗಳನ್ನು ಸುಮ್ಮನೆ ಹೇಳಿದರೆ ಬೆಲೆ ಬಾರದು. ಹಾಗಾಗಿ ಅನುಶಾಸನದ ಮೂಲಕ ವಿಧಿಸುವ ಅಗತ್ಯವುಂಟಾಯಿತು.

ಅಂದರಿಷ್ಟೇ; ವ್ಯಕ್ತಿಯು ಸಮಾಜದ ಹಿತಕ್ಕಾಗಿ ತನ್ನ ಸಂಪತ್ತಿನ ಕೆಲ ಭಾಗವನ್ನಾದರೂ ವಿನಿಯೋಗಿಸಬೇಕು. ಸಮಾಜದಿಂದ ಅವನು ಗಳಿಸಿದ್ದು ಅದು. ಮುಖ್ಯವಾದ ಸಿದ್ಧಾಂತ. ಶಾಸ್ತ್ರಗಳು ವಿಧಿಸಿದ ದಾನಗಳು ಆ ಕಾಲದ ಸಮಾಜಕ್ಕೆ ಉಪಯುಕ್ತವಾಗಿದ್ದವು. ವಿದ್ಯಾವಂತರಾದ ಬ್ರಾಹ್ಮಣರಿಗೆ ದಾನವನ್ನು ಕೊಟ್ಟಿದ್ದರಿಂದ ಅದು ಸತ್ಪಾತ್ರಕ್ಕೆ ಸೇರಿದಂತಾಗುತ್ತಿತ್ತು. ಆದರೆ ಇಂದಿನ ಕಾಲದಲ್ಲಿ ಸಮಾಜದ ಶ್ರೇಯೋಭಿವೃದ್ಧಿಗೆ ಶ್ರಮಿಸುವ ಇನ್ನೂ ಕೆಲವು ಸಂಘ ಸಂಸ್ಥೆಗಳಿವೆ. ಅಂತಹವುಗಳಿಗೆ ಯಥಾಶಕ್ತಿಯಾಗಿ ನೆರವು ನೀಡುವುದರ ಮೂಲಕ ದಾನವನ್ನು ಇನ್ನಷ್ಟು

ಸಾರ್ಥಕಗೊಳಿಸಿಕೊಳ್ಳಬಹುದು. ಬ್ರಾಹ್ಮಣರಿಗೆ ಕೊಟ್ಟ ದಾನವು ಮಾತ್ರ ಸಾರ್ಥವೆಂದು ತಿಳಿಯಬೇಕಾಗಿಲ್ಲ.

## ಸುಲಭದಲ್ಲಿ ಮುಕ್ತಿ

ಎಷ್ಟೇ ಪಾಪವನ್ನು ಮಾಡಿದ್ದರೂ ಹರಿನಾಮ ಸ್ಮರಣೆಯಿಂದ ಅದು ದೂರವಾಗುತ್ತದೆ. ಅವನು ಪುಣ್ಯಾತ್ಮನಾಗುತ್ತಾನೆ.

ಹರಿನಾಮ ಸ್ಮರಣೆಯ ಇನ್ನೊಂದು ವಿಶೇಷವೆಂದರೆ ಅದನ್ನು ಉದ್ದೇಶ ಪೂರ್ವಕವಾಗಿ ಮಾಡಬೇಕೆಂದಿಲ್ಲ. ಯಾವ ನೆಪದಿಂದಲೇ ಆಗಲಿ, ಆ ಅಕ್ಷರಗಳು ಬಾಯಿಂದ ಬಂದರೆ ಸಾಕು. ಇದಕ್ಕೆ ಅಜಾಮಿಳನ ಕಥೆಯೇ ಉದಾಹರಣೆ. ಪರಮ ಪಾಪಿಯಾದ ಆತ ಸಾಯುವಾಗ ತನ್ನ ಪ್ರೀತಿಯ ಮಗನನ್ನು 'ನಾರಾಯಣ' ಎಂದು ಕರೆದ. ಅವನು ಕರೆದದ್ದು ನಾರಾಯಣನೆಂಬ ಹೆಸರಿನ ತನ್ನ ಮಗನನ್ನೇ ಆದರೂ ಹರಿಯ ನಾಮವು ನಾಲಿಗೆಯಿಂದ ಬಂದ ಕಾರಣ ಅವನು ವೈಕುಂಠವನ್ನು ಸೇರಿದ.

ಹರಿನಾಮ ಸ್ಮರಣೆಯಂತೆಯೇ ಮಹತ್ವವನ್ನು ಗಳಿಸಿದ್ದು ಗಂಗಾಪಾನ. ಮರಣಾಸನ್ನ ವ್ಯಕ್ತಿಯ ಬಾಯಲ್ಲಿ ಪವಿತ್ರವಾದ ಗಂಗಾಜಲದ ಒಂದು ಹನಿ ಬಿದ್ದರೂ ಸಾಕು. ಅವನ ಸಕಲ ಪಾಪಗಳು ನಶಿಸಿ ಹೋಗುತ್ತವೆ. ಅವನು ಮುಕ್ತಿಯನ್ನು ಸೂರೆಗೊಳ್ಳುತ್ತಾನೆ.

ವಿಷ್ಣುವಿಗೆ ಪ್ರಿಯವಾದ ತುಲಸೀ ಗಿಡವಿದ್ದರೆ ಅಂಥ ಮನೆಯನ್ನು ಪ್ರವೇಶಿಸಲು ಭೂತಪ್ರೇತಗಳು ಅಂಜುತ್ತವೆ. ತುಲಸಿಯ ನೀರನ್ನು ಬಿಟ್ಟುಕೊಟ್ಟ ದಾನವನ್ನು ದುಷ್ಟಶಕ್ತಿಗಳು ಮುಟ್ಟಲಾರವು. ತುಲಸಿಯ ಗಿಡವಿರುವ ಮನೆಯು ತೀರ್ಥ ಸದೃಶವಾದುದು. ಇಂತಹ ಪಾವನತೆ ತುಂಬಿರುವ ತುಲಸಿಯ ನೆರಳಿನಲ್ಲಿ ಸತ್ತರೆ ಮುಕ್ತಿ. ಅಷ್ಟೆ ಅಲ್ಲ –

***ತುಲಸೀ ಮಂಜರೀ ಯುಕ್ತೋ ಯಸ್ತು ಪ್ರಾಣಾನ್ವಿಮುಂಚತಿ ।***
***ಯಮಸ್ತಂ ನೇಕ್ಷಿತುಂ ಶಕ್ತೋ ಯುಕ್ತಂ ಪಾಪಶತೈರಪಿ ॥***

ತುಲಸಿಯ ದಳವನ್ನು ಹಿಡಿದುಕೊಂಡು ಪ್ರಾಣವನ್ನು ತ್ಯಜಿಸಿದರೆ ಅಂತಹವನು ನೂರಾರು ಪಾಪಗಳನ್ನು ಮಾಡಿದ್ದರೂ ಯಮನು ಅವನನ್ನು ನೋಡಲೂ

ಸಮರ್ಥನಾಗಲಾರ. ಅಂದರೆ ತುಲಸಿಯ ಗುಚ್ಛವನ್ನು ಹಿಡಿದುಕೊಂಡು ಸತ್ತರೆ ವೈಕುಂಠಲೋಕ ಪ್ರಾಪ್ತಿಯಾಗುತ್ತದೆ.

ಪ್ರಾಣವು ಯಾವಾಗ ಹೋಗುತ್ತದೆಂಬುದು ತಿಳಿಯದು. ಅಂಥ ಸಮಯದಲ್ಲಿ ಮರಣಪೂರ್ವದಲ್ಲಿ ನಡೆಸಬೇಕಾದ ಕ್ರಿಯೆಗಳನ್ನು ಮರಣಾ ನಂತರದಲ್ಲಿ ಮಾಡಬೇಕಾಗಿ ಬರುತ್ತದೆ. ಅದು ಅನಿವಾರ್ಯ. ಆದರೆ ನಿಷ್ಫಲವಲ್ಲ. ಮರಣಾನಂತರದಲ್ಲಿ ಮೃತ ಸಂಬಂಧಿಗಳು ಶೋಕಾತಿರೇಕದಲ್ಲಿ ಮೈಮರೆಯಬಾರದು. ಯಥಾಶಕ್ತಿಯಾಗಿ ಮೃತನು ಪುಣ್ಯಲೋಕವನ್ನು ಗಳಿಸುವುದಕ್ಕೆ ಅನುಕೂಲವಾದ ಕ್ರಿಯೆಯನ್ನು ನಡೆಸಬೇಕೆಂಬುದು ಶಾಸ್ತ್ರಕಾರರ ಅಭಿಪ್ರಾಯ.

## ಸದ್ಗತಿಗೆ ಕೇಶತ್ಯಾಗ

ಅಂತ್ಯಕ್ರಿಯೆಯನ್ನು ಆಚರಿಸುವುದಕ್ಕೆ ಬೇಕಾದ ಅಧಿಕಾರ ಅಥವಾ ಅರ್ಹತೆಯನ್ನು ಸಂಪಾದಿಸಿಕೊಳ್ಳುವುದಕ್ಕಾಗಿ ಕೃಚ್ಛ್ರತ್ರಯವನ್ನಾಚರಿಸಿ ಕ್ಷೌರವನ್ನಾಚರಿಸಬೇಕೆಂಬುದು ಪ್ರಯೋಗ ಕ್ರಮ.

ಕ್ರಿಯಾಚರಣೆಗೆ ತೊಡಗಿದ ವ್ಯಕ್ತಿಯ ಆರೋಗ್ಯದ ದೃಷ್ಟಿ ಪ್ರಮುಖವಾದುದು. ನಿತ್ಯವೂ ಹಲವಾರು ಬಾರಿ ತಣ್ಣೀರಿನ ಸ್ನಾನವನ್ನು ಹೇಳಿರುವುದರಿಂದ ತಲೆತುಂಬ ಕೂದಲಿದ್ದರೆ ಸ್ವಾಸ್ಥ್ಯಕ್ಕೆ ಹಾನಿಯೊದಗುತ್ತದೆ. ಅದೇ ತಲೆಯ ಮೇಲೆ ಕೂದಲಿಲ್ಲದಿದ್ದರೆ ನೀರು ನಿಲ್ಲುವ ಸಂಭವವಿಲ್ಲ. ನೆಗಡಿ ಜ್ವರಗಳ ಪೀಡೆಯೊದಗದು; ರೋಗ-ರುಜಿನಗಳು ಬಾಧಿಸಲಾರವು.

## ಕೆಲವು ಪ್ರಾಯಶ್ಚಿತ್ತಗಳು

ಔಪಾಸನಾಗ್ನಿಯ ವಿಚ್ಛಿತ್ತಿಯಬಗೆಗೆ ಪ್ರಾಯಶ್ಚಿತ್ತ ಹಾಗೂ ಪುನಃ ಸಂಧಾನ. ನಿಜವಾಗಿಯೂ ದ್ವಿಜತ್ವಸಿದ್ಧಿಗೆ ಅಗ್ನಿಯ ಉಪಾಸನೆಯ ಅವಶ್ಯ. ಬ್ರಾಹ್ಮಣನ ತೇಜಸ್ಸು ವರ್ಧಿಸುವುದು ಉಪಾಸನದಿಂದ. ಗೃಹಸ್ಥನಾದವನು ವಿವಾಹದ ಸಮಯದಲ್ಲಿ ಅಗ್ನ್ಯಾಧಾನವನ್ನು ಮಾಡಿರುತ್ತಾನೆ.

ಮೃತನಾದವನ ಸಲುವಾಗಿ ಪುನಃ ಸಂಧಾನ ಮಾಡಿ ಅದರಲ್ಲೇ ದಹನ ಮಾಡಬೇಕೆಂದು ಶಾಸ್ತ್ರವಿಧಿ.

## ಶವಸ್ನಾನ

ಶವವನ್ನು ಸ್ಮಶಾನಕ್ಕೆ ಒಯ್ಯುವುದಕ್ಕಿಂತ ಮೊದಲು ಸ್ನಾನವನ್ನು ಮಾಡಿಸಬೇಕೆಂಬುದು ಶಾಸ್ತ್ರವಿಧಿ. ಕರ್ತನು ವಿವಿಧ ಔಷಧಗಳಿಂದ ಜಲಪಾತ್ರವನ್ನು ತುಂಬಿ ಮಂತ್ರಪೂರ್ವಕವಾಗಿ ಸ್ನಾನ ಮಾಡಿಸಬೇಕು. ಸ್ನಾನ ಮಾಡಿಸುವಾಗ ಪಾದದಿಂದ ಮೊದಲು ಮಾಡಬೇಕು.

ಶವಸ್ನಾನಾನಂತರದಲ್ಲಿ ತುಲಸಿ ಮಾಲೆಯನ್ನು ತೊಡಿಸುವ ಕ್ರಮವಿದೆ. ತುಲಸಿಯ ಮಹಿಮೆಯು ಸರ್ವವಿಧಿತ. ಭೂತ, ಪ್ರೇತಾದಿಗಳನ್ನು ಅದು ದೂರವಿರಿಸುತ್ತದೆ. ಅದ್ಭುತವಾದ ಔಷಧೀಯ ಗುಣಗಳಿಂದ ವಿರಾಜಿತವಾಗಿದೆ, ಕ್ರಿಮಿನಾಶಕವಾಗಿದೆ.

ಪ್ರೇತತ್ವ ವಿಮೋಚನೆಗಾಗಿ ಅಂತ್ಯೇಷ್ಟಿ ಹೋಮ. ಪ್ರೇತಾವಸ್ಥೆ ಅತ್ಯಂತ ಅಪಾಯಕಾರಿ. ತನ್ನದಾದ ಶರೀರವಿಲ್ಲ; ಪರಲೋಕ ವಾಸವಿಲ್ಲ; ಅಂತರಾಳದಲ್ಲಿ ನರನಾಟ. ಅದನ್ನು ಹಾಗೆಯೇ ಬಿಟ್ಟರೆ ಇನ್ನಾರದಾದರೂ ಶರೀರವನ್ನು ಪ್ರವೇಶಿಸುವ ಅಪಾಯವೂ ಇದೆ. ಹಾಗಾಗಿ ಪ್ರೇತತ್ವ ವಿಮೋಚನೆಗೆ ಪ್ರಯತ್ನ ಅನಿವಾರ್ಯ. ಇಲ್ಲಿ ಯಮಸೂಕ್ತ ಪಠನ ಕ್ರಮ. ಈ ಸೂಕ್ತದಿಂದ ಅರ್ಪಿಸಿದ ಆಹುತಿಗಳಿಂದ ಯಮರಾಜನು ಮೃತನನ್ನು ತನ್ನ ಲೋಕಕ್ಕೆ ಕರೆದುಕೊಳ್ಳಲಿ ಅವನಿಗೆ ತಕ್ಕುದಾದ ಸ್ಥಾನ ಕೊಟ್ಟು ಆದರಿಸಲಿ ಎಂಬುದು ಆಶಯ. ಹಾಗಾಗಿ ಯಮರಾಜನ ದಿಕ್ಕಿಗೆ ತಲೆ ಇರುವಂತೆ ನೋಡಿಕೊಳ್ಳಲಾಗುತ್ತದೆ. ಅಷ್ಟೇ ಅಲ್ಲ ಇಲ್ಲಿ ಹಾಸುವ ದರ್ಭೆಯು ಕೂಡ ದಕ್ಷಿಣಾಗ್ರವೇ. ಅದು ಪ್ರೇತವು ಪಯಣಿಸಬೇಕಾದ ದಿಕ್ಕನ್ನು ಸೂಚಿಸುತ್ತದೆ. ಅದೊಂದು ಸಾಂಕೇತಿಕ ಕ್ರಿಯೆ. ಹಾಗೆ ಮಾಡಿದ್ದರಿಂದ ಪ್ರೇತವು ಯಮಲೋಕವನ್ನು ಸೇರುತ್ತದೆ ಎಂಬುದು ನಂಬುಗೆ.

## ಶವಯಾತ್ರೆ

ಅಂತ್ಯೇಷ್ಟಿ ಹೋಮದ ನಂತರದ್ದು ಶವಾಚ್ಛಾದನ. ಬಿಳಿಯ ದಾರದಿಂದ ಪಾದಾಂಗುಷ್ಟಗಳನ್ನು ಕಟ್ಟಿ ಪಾದದಿಂದ ಮೊದಲು ಮಾಡಿ ಶವವನ್ನು ಹೊಸದಾದ ಬಿಳಿಯ ವಸ್ತ್ರದಿಂದ ಮುಚ್ಚಲಾಗುತ್ತದೆ. ಅನಂತರ ಹಿಂದೆ ಧರಿಸಿದ ವಸ್ತ್ರವನ್ನು ತೆಗೆದುಹಾಕಲಾಗುತ್ತದೆ. ಅಲ್ಲದೆ ಕರ್ತನು ಆ ಹೊಸ ವಸ್ತ್ರದ ತುಂಡೊಂದನ್ನು

ಕತ್ತರಿಸಿಕೊಂಡು ಉಪವೀತದ ಜೊತೆಯಲ್ಲಿಟ್ಟುಕೊಂಡು ಹನ್ನೆರಡು ಅಥವಾ ಹದಿಮೂರನೆಯ ದಿನದಂದು ಪಾಥೇಯದ ಜೊತೆಗೆ ಬ್ರಾಹ್ಮಣನಿಗೆ ದಾನವಾಗಿ ಕೊಡಬೇಕು.

## ಸಿದಿಗೆ

ಶವಯಾತ್ರೆಗೆ ಕ್ರಮವುಂಟು. ಹೊಸದಾದ ಮಣ್ಣಿನ ಮಡಿಕೆಯಲ್ಲಿ ಕೆಂಡಗಳನ್ನು ಇಟ್ಟುಕೊಂಡಿರಲಾಗುತ್ತದೆ. ಆ ಅಗ್ನಿಯನ್ನು ಮನೆಯಿಂದಲೇ ಒಯ್ಯಬೇಕಾದ್ದು. ತಾತ್ಪರ್ಯವೆಂದರೆ ಬದುಕಿರುವಾಗಿ ಯಾವ ಅಗ್ನಿಯು ನೆರವಿನಿಂದ ಧರ್ಮಕಾರ್ಯಗಳನ್ನು ನಡೆಸಲಾಗಿತ್ತೋ ಅದೇ ಅಗ್ನಿಯನ್ನು ದಹಿಸಲಿಕ್ಕು ಬಳಸಬೇಕೆಂಬುದು.

ದಾರಿಯಲ್ಲಿ ಮೂರರಲ್ಲೊಂದು ಭಾಗವನ್ನು ಕ್ರಮಸಿದ ಮೇಲೆ ಶವವನ್ನು ಇಳಿಸಿ ಅಪ್ರದಕ್ಷಿಣವಾಗಿ ಸುತ್ತು ಹಾಕಬೇಕು. ಈ ರೀತಿಯ ಕ್ರಮದ ಹಿಂದೆ ಮೃತನ ಪ್ರಯಾಣಕ್ಕೆ ಶುಭ ಕೋರುವ ಗುರಿ ಇದೆ. ವ್ಯಾವಹಾರಿಕವಾಗಿ ಶವವನ್ನು ಹೊರುವವರಿಗೆ ಹೆಗಲನ್ನು ಬದಲಾಯಿಸಿಕೊಳ್ಳಲು ಸ್ವಲ್ಪ ವಿಶ್ರಾಂತಿ ಪಡೆಯಲು ಅವಕಾಶ. ಇನ್ನಷ್ಟು ದೂರ ಕ್ರಮಿಸಿದ ಮೇಲೆ ಇದೇ ವಿಧಿಯು ಪುನರಾವರ್ತನೆಯುಂಟು.

## ಶವದಹನ

ಧಾರ್ಮಿಕ ದೃಷ್ಟಿಯಿಂದ ದಹನವೆಂಬುದೊಂದು ಯಜ್ಞ. ಚಿತಾಗ್ನಿಯು ಪವಿತ್ರವಾದುದು; ಹೋಮಾಗ್ನಿಯಂತೆ. ಪವಿತ್ರವಾದ ಅಗ್ನಿಯಲ್ಲಿ ಅರ್ಪಿಸಿದ ಆಹುತಿಯು ಆಯಾ ದೇವತೆಗಳಿಗೆ ತಲುಪುವಂತೆ ಶರೀರವು ದಿವ್ಯಲೋಕವನ್ನು ಹೊಂದುತ್ತದೆ.

ಶವದಹನಕ್ಕೆ ಮುನ್ನ ನಡೆಯಬೇಕಾದ ಕ್ರಿಯೆಗಳು ಹಲವು. ಇಂಥ ಕ್ರಿಯೆಗಳ ಗುರಿಯನ್ನು ಎರಡು ಬಗೆಯಾಗಿ ತಿಳಿಯಬಹುದು. ಮೃತನ ಶುದ್ಧೀಕರಣ ಹಾಗೂ ಅವನ ಪರಲೋಕಯಾತ್ರೆಯ ಸಿದ್ಧತೆಗಳು.

ಅನಂತರ ನೀರು ತುಂಬಿದ ಕೊಡವನ್ನು ಹೆಗಲ ಮೇಲೆ ಇಟ್ಟುಕೊಂಡು

ಅಪ್ರದಕ್ಷಿಣವಾಗಿ ಮೂರು ಸುತ್ತ ಹಾಕಬೇಕು. ಒಂದೊಂದು ಸುತ್ತು ತಿರುಗುವಾಗಲೂ ಕಲ್ಲು ಅಥವಾ ಕಬ್ಬಿಣದ ಕತ್ತಿಯಿಂದ ಪರಶುವಿನಂತೆಯೇ ಕೊಡಕ್ಕೆ ತೂತು ಮಾಡಲಾಗುತ್ತದೆ. ಇದೊಂದು ಸಾಂಕೇತಿಕವಾದ ಕ್ರಿಯೆ. ಹೀಗೆ ತೂತು ಮಾಡಿದಾಗ ಅದರಿಂದ ಸುರಿದ ಜಲಧಾರೆಯು ಜೀವಾತ್ಮನು ಭೂಲೋಕ, ಅಂತರಿಕ್ಷ ಹಾಗೂ ಸ್ವರ್ಗಲೋಕಗಳನ್ನು ಜಯಿಸಲು ನೆರವಾಗುವುದೆಂಬ ಭಾವನೆ ಇದೆ. ಹೀಗೆ ಮೂರು ಸುತ್ತು ಹಾಕಿದ ಮೇಲೆ ಹಿಂಗಡೆಯಿಂದ ಬೀಳಿಸಬೇಕು. ಈ ಸಮಯದಲ್ಲಿ ಪ್ರೇತದ ಶೀರೋಭಾಗದಲ್ಲಿ ಉತ್ತರಾಭಿಮುಖವಾಗಿ ನಿಂತಿರಬೇಕು. ಒಡೆದು ಹೋದ ಕೊಡದ ಚೂರಿನಲ್ಲಿರುವ ಜಲವನ್ನು ಪ್ರೇತದ ಮುಖ ನಾಸಿಕಾದಿಗಳ ಮೇಲೆ ಸಿಂಪಡಿಸಬೇಕು. ಇದು ಪ್ರೇತವನ್ನು ಮತ್ತಷ್ಟು ಶುದ್ಧವಾಗಿಸುತ್ತದೆ.

ಮುಂದಿನದು ಅಗ್ನಿಯನ್ನಿಡುವ ಕಾರ್ಯ. ‘ಪೃಥುವಿಯನ್ನು ಸೇರಲಿ’ ಎನ್ನುತ್ತ ಶಿರಸ್ಸಿನ ಮೇಲೆ, ‘ಅಂತರಿಕ್ಷವನ್ನು ಸೇರಲಿ’ ಎನ್ನುತ್ತ ಹೊಕ್ಕುಳಿನ ಮೇಲೆ, ‘ದ್ಯುಲೋಕವನ್ನು ಸೇರಲಿ’ ಎನ್ನುತ್ತ ಪಾದದ ಮೇಲೆ ಅಗ್ನಿಯನ್ನಿಡಬೇಕು.

## ಗೃಹಪ್ರತ್ಯಾಗಮನ ಇತ್ಯಾದಿ

ಅನಂತರದ ಮುಖ್ಯ ಕ್ರಿಯೆ ಪ್ರೇತಶಿಲಾಸ್ಥಾಪನ. ದರ್ಭೆಯನ್ನು ಹಾಸಿ ಅದರ ಮೇಲೆ ಕಲ್ಲನ್ನಿಟ್ಟರೆ ಸಾಕು. ಅದು ಪ್ರೇತಶಿಲೆಯಾಗುತ್ತದೆ.

ಅನಂತರ ಪ್ರಾಣೋತ್ಕ್ರಮಣವಾದ ಸ್ಥಳದಲ್ಲಿ ದೀಪವನ್ನು ಹಚ್ಚಿಡಬೇಕು.

## ಅಸ್ಥಿಸಂಚಯನ

ಶವದಹನದ ನಂತರದ ಮಹತ್ವದ ಕ್ರಿಯೆ ಎಂದರೆ ಅಸ್ಥಿಸಂಚಯನವೆಂದು ಹೇಳಬಹುದು. ಅಸ್ಥಿ ಎಂದರೆ ಎಲುಬು. ಮೃತವ್ಯಕ್ತಿಯ ಎಲುಬುಗಳನ್ನು ಸಂಗ್ರಹಿಸಿ ಅವುಗಳನ್ನು ಹುಗಿದಿರಿಸುವುದು ಇಲ್ಲಿನ ಮುಖ್ಯವಾದ ಕ್ರಿಯೆ.

## ದಶಾಹವಿಧಿ–ಪಿಂಡದಾನ

ಹತ್ತು ದಿನಗಳವರೆಗೆ ನಡೆವ ಪಿಂಡದಾನದಿಂದ ವಿನೂತನ ಶರೀರ ಪ್ರಾಪ್ತಿಯಾಗುವುದೆಂಬುದು ಇನ್ನೊಂದು ವಿವರಣೆ. ನಮಗೆಲ್ಲ ಗೊತ್ತಿರುವಂತೆ

ಸುಖ ದುಃಖಗಳ ಅನುಭವಕ್ಕೆ ಶರೀರವು ಅವಶ್ಯ. ಕರ್ಮವನ್ನು ಮಾಡುವುದಕ್ಕೂ ಅದರ ಫಲವನ್ನು ಅನುಭವಿಸುವುದಕ್ಕೂ ಶರೀರವು ಬೇಕೇ ಬೇಕು. ಮೃತನಿಗೆ ಶರೀರವಿಲ್ಲ. ಹಿಂದಿನ ಶರೀರವು ದಗ್ಧವಾಗಿದೆ. ಹೊಸ ಶರೀರವು ರೂಪುಗೊಂಡಿಲ್ಲ. ಇಂಥಾ ಪ್ರೇತಾವಸ್ಥೆಯನ್ನು ನಿವಾರಿಸಲು ಪಿಂಡದಾನ ಸಹಕರಿಸುತ್ತದೆ. ಪಿಂಡದಾನದಿಂದ ಶರೀರವು ಪ್ರಾಪ್ತವಾಗಿ ಪರಲೋಕ ಪ್ರಯಾಣಕ್ಕೆ ಅನುಕೂಲವಾಗುತ್ತದೆ. ಮೃತಾತ್ಮವು ಬೇರೆಯವರ ಶರೀರವನ್ನು ಆಕ್ರಮಿಸಿ ತನ್ನನ್ನು ಅಭಿವ್ಯಕ್ತಗೊಳಿಸಿಕೊಳ್ಳುವ ಸ್ಥಿತಿಯು ತಪ್ಪುತ್ತದೆ.

ಮೊದಲನೇ ದಿನದ ಪಿಂಡದಿಂಡ ಶಿರಸ್ಸು, ಎರಡನೇ ದಿನದ ಪಿಂಡದಿಂದ ಕಿವಿ, ಕಣ್ಣು, ಮೂಗುಗಳು, ಮೂರನೇ ದಿನದ ಪಿಂಡದಿಂದ ಕಂಠ, ಹೆಗಲು, ಭುಜ, ಎದೆಗಳು, ನಾಲ್ಕನೇ ದಿನದ ಪಿಂಡದಿಂದ ಹೊಕ್ಕಳು, ಲಿಂಗ ಮತ್ತು ಬುಧಗಳು, ಐದನೇ ದಿನದ ಪಿಂಡದಿಂದ ಮೊಣಕಾಲು, ಕಾಲುಗಂಟು ಹಾಗೂ ಪಾದಗಳು, ಆರನೇ ದಿನದ ಎಂಟನೇ ದಿನದ ಪಿಂಡದಿಂದ ದಂತ ಹಾಗೂ ರೋಮಗಳು, ಒಂಭತ್ತನೇ ದಿನದ ಪಿಂಡದಿಂದ ವೀರ್ಯ ಹಾಗೂ ಹತ್ತನೇ ದಿನದ ಪಿಂಡದಿಂದ ಹಸಿವಡಗಿ ತೃಪ್ತಿಯಾಗುವುದು.

ಹತ್ತನೇ ದಿನದಂದು ಕ್ಷೌರಾನಂತರದಲ್ಲಿ ಸ್ನಾನವನ್ನು ಮಾಡಿ ಸಮಚತುರಸ್ರವಾದ ಸ್ಥಂಡಿಲವನ್ನು ಮಾಡಿ ಪಿಷ್ಟೋದಕದಿಂದ ರೇಖೆಗಳನ್ನು ಬರೆದು ಮೂರು ಮಂಡಲಗಳನ್ನು ರಚಿಸಬೇಕು. ಮಂಡಲದ ಪೂರ್ವಭಾಗದಲ್ಲಿ ಮೂರು ಶಿಲೆಗಳನ್ನಿಡಬೇಕು. ಪ್ರೇತರಾಜ, ಪ್ರೇತಸಖಯಮ ಹಾಗೂ ರುದ್ರನನ್ನು ಸ್ಥಾಪಿಸಿ ಆಸನ, ಆವಾಹನವೇ ಮುಂತಾದ ಷೋಡಷೋಪಚಾರ ಪೂಜೆಯನ್ನು ಸಲ್ಲಿಸಬೇಕು. ಆ ಶಿಲೆಗಳ ಎದುರಿನಲ್ಲಿ ದಕ್ಷಿಣಾಗ್ರವಾಗಿ ದರ್ಭೆಗಳನ್ನಿಟ್ಟು ಅವುಗಳ ಮೇಲೆ ಮೂರು ಪಿಂಡಗಳನ್ನಿಟ್ಟು ತಿಲೋದಕವನ್ನು ಅರ್ಪಿಸಬೇಕು. ಅಲ್ಲದೆ ಉದಕುಂಭ, ತೆಂಗಿನಕಾಯಿಗಳನ್ನಿಟ್ಟು ಭಕ್ಷ್ಯ–ಭೋಜ್ಯಾದಿ ಬಲಿಯನ್ನರ್ಪಿಸಬೇಕು. ಅನಂತರ ಎಲ್ಲರೂ ದೂರ ಹೋಗಿ ಪಿಂಡಗಳನ್ನು ಕಾಗೆಗಳಿಗೆ ಕೊಡಬೇಕು. ಪಿತೃಗಳು ಕಾಗೆಗಳ ರೂಪದಿಂದ ಬಂದು ಪಿಂಡವನ್ನು ಸ್ವೀಕರಿಸುತ್ತಾರೆ. (ತದ್ರೂಪಾ ತಸ್ಯ ಪಿತರಃ ಸಮಾಯಾಂತೀತಿ ವಿಜ್ಞಾಯತೇ)

## ವೃಷೋತ್ಸರ್ಗ

ಹನ್ನೊಂದನೆಯ ದಿವಸದಲ್ಲಿ ನಡೆಸಬೇಕಾದ ಕ್ರಿಯೆಗಳಲ್ಲಿ ಪ್ರಮುಖವಾದುದು ವೃಷೋತ್ಸರ್ಗ. ಅದು ಅಶೌಚನಿವಾರಣೆಯ ದಿನವೂ ಹೌದು. ಹಾಗಾಗಿ ಮೈಲಿಗೆಯಾದ ಎಲ್ಲ ವಸ್ತುಗಳನ್ನು ತೊಳೆದು ಸಪಿಂಡರೆಲ್ಲ ಸ್ನಾನಮಾಡಿದರೆ ಅಷ್ಟರ ಮಟ್ಟಿಗೆ ಶುದ್ಧಿಯಾಗುವುದೆಂದು ಧರ್ಮಸಿಂಧುವು ಹೇಳುತ್ತದೆ. ಅಂದರೆ ಸಂಧ್ಯಾವಂದನ, ಪಂಚಮಹಾಯಜ್ಞಗಳಿಗೆ ಅಧಿಕಾರ ಪ್ರಾಪ್ತಿಯಾಗುತ್ತದೆ. ಈ ನಿತ್ಯಕರ್ಮಗಳನ್ನು ಪೂರೈಸಿದ ಮೇಲೆ ವೃಷೋತ್ಸರ್ಗವನ್ನು ಮಾಡಬೇಕು.

ಹನ್ನೊಂದನೆಯ ದಿನದಂದು ಪ್ರೇತದ ಸಲುವಾಗಿ ವೃಷೋತ್ಸರ್ಗವನ್ನು ಮಾಡಿದರೆ ಕೂಡಲೇ ಅದು ಪ್ರೇತತ್ವದಿಂದ ವಿಮೋಚನೆ ಪಡೆದು ಸ್ವರ್ಗಲೋಕಕ್ಕೆ ತೆರಳುತ್ತದೆ.

## ಏಕೋದ್ದಿಷ್ಟ

ಹನ್ನೊಂದನೆಯ ದಿನದಂದು ನಡೆಸಬೇಕಾಗಿರುವ ಮತ್ತೊಂದು ಪ್ರಮುಖ ಕೃತ್ಯವೆಂದರೆ ಏಕೋದ್ದಿಷ್ಟಶ್ರಾದ್ಧ.

ಇತರ ಶ್ರಾದ್ಧಗಳಂತೆ ಶೇಷಾನ್ನದ ಭಕ್ಷಣವು ಇಲ್ಲಿ ನಿಷಿದ್ಧ. ಏಕೋದ್ದಿಷ್ಟದ ಶೇಷಾನ್ನ ಭೋಜನವು ನಿಷಿದ್ಧ.

## ಷೋಡಶಮಾಸಿಕಗಳು

ಹನ್ನೊಂದನೆಯ ದಿನದಂದು ನಡೆಯುವುದು ಆದ್ಯಮಾಸಿಕ. 'ಮಾಸಾದೌ ಮಾಸಿಕಂಕಾರ್ಯಂ' ತಿಂಗಳ ಮೊದಲನೆಯ ದಿನದಂದು ಮಾಸಿಕವನ್ನು ಮಾಡಬೇಕೆಂಬ ವಿಧಿಯಿರುವುದರಿಂದ ಮೃತದಿನವೇ ಆದ್ಯ ಮಾಸಿಕಕ್ಕೆ ಮುಖ್ಯ ಕಾಲವೆನಿಸುತ್ತದೆ. ಹಾಗಿದ್ದರೂ ಆಗ ಅಶೌಚವಿರುವುದರಿಂದ ಅಶೌಚಾಂತದಲ್ಲಿ ಅಂದರೆ ಹನ್ನೊಂದನೆಯ ದಿನದಂದು ಅತಿಕ್ರಾಂತವಾದ ಆ ಮಾಸಿಕವನ್ನು ಮಾಡಬೇಕು. ಅಂದು ಆದ್ಯಮಾಸಿಕ ಬ್ರಾಹ್ಮಣ ಭೋಜನ ಅಥವಾ ಅಗ್ನಿಯಲ್ಲಿ ಹವನವು ನಡೆಯುತ್ತದೆ. ಹನ್ನೊಂದನೆಯ ದಿನದಂದು ನಡೆವ ಮಾಸಿಕವಲ್ಲದೆ ಇನ್ನೂ ಹದುನಾರು ಮಾಸಿಕಗಳನ್ನು ನಡೆಸಬೇಕೆಂದು ಶಾಸ್ತ್ರದಲ್ಲಿ ವಿಧಿಸಲಾಗಿದೆ.

## ಸಪಿಂಡೀಕರಣ

ಅಂತ್ಯೇಷ್ಟಿ ಕ್ರಿಯೆಯ ಕೊನೆಯ ಹಾಗೂ ಅತ್ಯಂತ ಮಹತ್ವದ ಭಾಗವೆಂದರೆ ಸಪಿಂಡೀಕರಣ. ಮೃತನಾದ ಪಿತೃವನ್ನು ಪೂರ್ವಜರೊಂದಿಗೆ ಸೇರಿಸುವುದು ಅರ್ಥಾತ್ ಪಿತೃಲೋಕಕ್ಕೆ ಕಳಿಸುವುದು. ಪ್ರೇತತ್ವ ವಿಮೋಚನೆಯ ನಂತರ ಪಿತೃಲೋಕದಲ್ಲಿ ಸ್ಥಾನವು ದೊರೆತ ಹೊರತು ಪ್ರಕ್ರಿಯೆ ಪೂರ್ತಿಯಾದಂತಲ್ಲ. ಇಲ್ಲಿಂದ ವರ್ಗಾಯಿಸುವುದಷ್ಟೇ ಅಲ್ಲ. ಇನ್ನೊಂದು ಸೂಕ್ತಸ್ಥಳವನ್ನು ಸೇರಿದ್ದಾನೆಂದಾಗ ಮಾತ್ರ ನೆಮ್ಮದಿ. ಹಾಗಾಗಿಯೇ ಸಪಿಂಡೀಕರಣವಾದ ಹೊರತು ಪುತ್ರಾದಿಗಳು ದೀಕ್ಷೆಯನ್ನು ವಿಸರ್ಜಿಸುವಂತಿಲ್ಲ.

ಸಪಿಂಡೀಕರಣ ವಿಧಿಯಲ್ಲಿ ಜ್ಯೇಷ್ಠಪುತ್ರನಿಗೆ ವಿಶೇಷ ಪ್ರಾಶಸ್ತ್ಯ ಕನಿಷ್ಠನು ಒಂದು ವೇಳೆ ವಿಧಿಗಳನ್ನೆಲ್ಲ ಪೂರೈಸಿದ್ದರೂ ಜ್ಯೇಷ್ಠನು ಪುನಃ ಮಾಡಬೇಕು. ತಂದೆ ಅಥವಾ ತಾಯಿಯು ಮೃತರಾದಾಗ ಜ್ಯೇಷ್ಠನು ದೇಶಾಂತರದಲ್ಲಿದ್ದು ಕನಿಷ್ಠನು ಸಪಿಂಡಿಯನ್ನು ಮಾಡಿದ್ದರೆ ಜ್ಯೇಷ್ಠನು ಮರಳಿ ಬಂದ ಮೇಲೆ ಪಾರ್ವಣ ವಿಧಿಯಿಂದ ಸಪಿಂಡೀ ಶ್ರಾದ್ಧವನ್ನು ಮಾಡತಕ್ಕದ್ದು. ಅಂದರೆ ಇಲ್ಲಿ ಅರ್ಘ್ಯ ಸಂಯೋಜನ, ಪಿಂಡ ಸಂಯೋಜನಗಳಿರುವುದಿಲ್ಲ. ಅವುಗಳನ್ನು ಹೊರತುಪಡಿಸಿ ಇತರ ಕ್ರಿಯೆಗಳನ್ನೆಲ್ಲ ಮಾಡಬೇಕೆಂಬುದು ತಾತ್ಪರ್ಯ.

## ಶ್ರವಣ ಭೋಜನ

ಲೋಕರೂಢಿಯ ಪ್ರಕಾರ ಸಪಿಂಡೀಕರಣದ ನಂತರ ಶ್ರವಣಭೋಜನ ಹಾಗೂ ವಿವಿಧ ದಾನಗಳು ಮಹತ್ವದವು. ಹನ್ನೆರಡು ಅಥವಾ ಆರು ಜನ ಬ್ರಾಹ್ಮಣರನ್ನು ಶ್ರವಣರೆಂದು ಕರೆದು ಅವರಿಗೆ ಭೋಜನವನ್ನು ನೀಡಿ ವಿಶೇಷವಾಗಿ ಸತ್ಕರಿಸುವ ಕ್ರಮ ಬೆಳೆದಿದೆ. ಶಕ್ತಿಯಿದ್ದವರು ಇನ್ನೂ ಹೆಚ್ಚಿನ ಸಂಖ್ಯೆಯ ಬ್ರಾಹ್ಮಣರನ್ನು ಆಮಂತ್ರಿಸುವುದೂ ಇದೆ. ಎಷ್ಟೇ ಬಡವನಾದರೂ ಶ್ರವಣಭೋಜನವನ್ನು ಬಿಡುವಂತಿಲ್ಲ. ಈ ಪರಂಪರೆಗೆ ಗರುಡಪುರಾಣವು ಮೂಲ. ಅಲ್ಲಿ ಹೇಳಿದ ಕ್ರಮದಲ್ಲಿ ಆಚಾರಗಳು ಬೆಳೆದುಬಂದಿವೆ.

## ಪದದಾನ

ದಾನ–ಮಾನಾದಿಗಳನ್ನು ಮುಗಿಸಿದ ಮೇಲೆ ಬ್ರಾಹ್ಮಣರನ್ನು ಪೂಜಿಸಿ ಅವರಿಂದ

ಆಶೀರ್ವಚನವನ್ನು ಪಡೆಯುವುದು ಕ್ರಮ. ಕರ್ತನು ವಿನಂತಿಸಿಕೊಂಡ ಮೇಲೆ ಬ್ರಾಹ್ಮಣರು ಯಥೋಚಿತವಾಗಿ ಉತ್ತರಿಸಿ ಮಂತ್ರಪೂರ್ವಕವಾಗಿ ಶುಭಕೋರುತ್ತಾರೆ. ಇದೊಂದು ಹೃದಯಸ್ಪರ್ಶಿಯಾದ ಸನ್ನಿವೇಶ. ಬ್ರಾಹ್ಮಣರು ಆಶೀರ್ವಚನದಲ್ಲಿ ಅಂತ್ಯೇಷ್ಟಿಕ್ರಿಯೆಯ ಮಹತ್ವವನ್ನು ತಿಳಿಯಹೇಳುವುದೂ ಉಂಟು.

ಹನ್ನೆರಡನೆಯ ದಿನದ ಮುಖ್ಯಕ್ರಿಯೆಗಳೆಲ್ಲ ಸಮಾಪನಗೊಂಡು ಬ್ರಾಹ್ಮಣರ ಆಶೀರ್ವಾದವನ್ನು ಪಡೆದ ಮೇಲೆ ಒಂದು ಘಟ್ಟ ಮುಗಿಯುತ್ತದೆ. ಅಲ್ಲಿಯವರೆಗೆ ದೀಕ್ಷಾಬದ್ಧನಾಗಿದ್ದ ಕರ್ತನು ದೀಕ್ಷೆಯನ್ನು ವಿಸರ್ಜಿಸುತ್ತಾನೆ. ಸುದೀರ್ಘವಾದ ಕ್ರಿಯಾ ಕಲಾಪಗಳು ಸಾಂಗವಾಗಿ ಮುಗಿದಾಗ ಅನುಭವಿಸುವ ತೃಪ್ತಿಯು ಅಮೂಲ್ಯವಾದುದು.

ಅಂತ್ಯೇಷ್ಟಿಯು ಹನ್ನೆರಡನೆಯ ದಿನದಂದೇ ಮುಗಿಯುತ್ತದೆಯಾದರೂ ಮಾರನೇ ದಿನ ಅಂದರೆ ಹದಿಮೂರನೇ ದಿನದಂದು ಶ್ರಾದ್ಧ ಮಾಡುವ ಪದ್ಧತಿ ಇದೆ. ಈ ಶ್ರಾದ್ಧಕ್ಕೆ ಪಾಥೇಯ ಶ್ರಾದ್ಧವೆಂದು ಹೆಸರು. ಯಮಲೋಕ ಪ್ರಯಾಣಕ್ಕೆ ದಾರಿಯ ಬುತ್ತಿಯಂತಿರುವ ಶ್ರಾದ್ಧ ಅದು. ಅಂತೆಯೇ ಹದಿನಾಲ್ಕನೆಯ ದಿನ ಒಬ್ಬ ಬ್ರಾಹ್ಮಣನನ್ನು ಕರೆದು ವಿಧಿವತ್ತಾಗಿ ಭೋಜನ ನೀಡುವ ಕ್ರಮವೂ ಇದೆ. ಇಲ್ಲಿ ಪ್ರಾದೇಶಿಕ ಭೇದಗಳನ್ನು ಗಮನಿಸಬಹುದು. ಹನ್ನೆರಡನೆಯ ದಿನದಂದೇ ಅಂತ್ಯೇಷ್ಟಿಯ ಕ್ರಿಯೆಗಳೆಲ್ಲ ಮುಗಿಯುವುದೂ ಉಂಟು. ಹದಿನಾಲ್ಕನೆಯ ದಿನದಂದು ಮುಗಿಸುವುದೂ ಉಂಟು.

ಈಗೀಗ ಶಾಸ್ತ್ರೋಕ್ತವಿಧಾನದಲ್ಲಿ ಮಾಸಿಕಗಳನ್ನು ಮಾಡುವುದು ವ್ಯಾವಹಾರಿಕವಾಗಿ ಕಷ್ಟಕರವಾಗಿದೆ. ಹಾಗಾಗಿ ೨೧ನೇ ದಿನದಂದು ಮಾಸಿಕಗಳನ್ನೆಲ್ಲ ಅಪಕರ್ಷಣಗೊಳಿಸುವ ಕ್ರಮಬೆಳೆದಿದೆ. ಹಾಗೆ ಮಾಡಿದ ಮೇಲೆ ಮತ್ತೆ ಮಾಸಿಕಗಳನ್ನು ಮಾಡಿಸಬಹುದು. ಗೋಗ್ರಾಸವನ್ನು ಕೊಡಬಹುದು ಅಥವಾ ಪಿತೃಗಳನ್ನು ಸ್ಮರಿಸಿಕೊಳ್ಳಬಹುದು. ವರ್ಷಾಂತದಲ್ಲಿ ನಡೆವ ಪಿತೃಸಂಗಮನದ ವಿಧಿಯನ್ನು ಮುಗಿಸಿದ ಮೇಲೆ ವರ್ಷಕ್ಕೊಮ್ಮೆ ಶ್ರಾದ್ಧವನ್ನು ಮಾಡಿದರೆ ಸಾಕು. ಅದನ್ನೂ ಮಾಡದವನು ಪುತ್ರನೆನಿಸಿಕೊಳ್ಳಲು ಅನರ್ಹ.

*(ಪ್ರೊ॥ ಎಂ. ವಿ. ಹೆಗಡೆಯುವರ "ಹಿಂದೂ ಸಂಸ್ಕಾರಗಳು"*
*ಎಂಬ ವಿಸ್ತೃತ ಗ್ರಂಥದ ಅಂತ್ಯೇಷ್ಟಿಯ ಆಯ್ದ ಭಾಗಗಳು)*

# ಅಂತ್ಯೇಷ್ಟಿ ಸಂಸ್ಕಾರ
## ಒಂದು ವಿಶ್ಲೇಷಣೆ

*ಶ್ರುತಿಪ್ರಿಯ*

ವೈದಿಕ ಧರ್ಮದ ಷೋಡಶ ಸಂಸ್ಕಾರಗಳಲ್ಲಿ ಕೊನೆಯದು ಅಂತ್ಯೇಷ್ಟಿ ಸಂಸ್ಕಾರ. ಹುಟ್ಟಿದ ಪ್ರತಿ ಜೀವಿಯೂ ಸಾಯಲೇಬೇಕು. ಮಾನವನು ಜೀವಂತನಾಗಿದ್ದಾಗ, ಆತ್ಮ ಸಹಿತನಾಗಿದ್ದಾಗ, 'ಶಿವ'ನಾಗಿದ್ದವನು, ಆತ್ಮರಹಿತನಾದಾಗ 'ಶವ'ವಾಗುತ್ತಾನೆ. ಶವ ಸಂಸ್ಕಾರದ ಬಗೆಗೆ ಜಗತ್ತಿನ ವಿವಿಧ ದೇಶ, ಜನಾಂಗ, ಧರ್ಮಗಳಲ್ಲಿ (ಮತ ಸಂಪ್ರದಾಯ) ವೈವಿಧ್ಯಮಯ ಆಚರಣೆಗಳು ಇದೆ. ಯಹೂದಿಗಳು, ಕ್ರೈಸ್ತರು, ಇಸ್ಲಾಮೀಯರು ಮುಖ್ಯವಾಗಿ ಶವವನ್ನು ಹೂಳುವ ಪದ್ಧತಿಯನ್ನು ಅನುಸರಿಸುತ್ತಾರೆ. ಪಾರ್ಸಿಗಳು ಶವವನ್ನು 'ನೀರವ ಗೋಪುರ' (Tower of silence) ಮೇಲೆ ಇರಿಸಿ ಪಕ್ಷಿಗಳಿಗೆ ಆಹಾರವಾಗುವಂತೆ ಮಾಡುತ್ತಾರೆ. ಜಗತ್ತಿನಲ್ಲಿ ಹೆಚ್ಚಿನವರು ಅನುಸರಿಸುವ ಪದ್ಧತಿ ಶವವನ್ನು ಹೂಳುವುದು. ಶವವನ್ನು ಹೂಳುವ ಪದ್ಧತಿಯಿಂದಾಗಿ ಹಲವಾರು ಸಮಸ್ಯೆಗಳು ಉದ್ಭವವಾಗುತ್ತವೆ. ಮೊದಲನೆಯ ಸಮಸ್ಯೆ ಜಾಗದ್ದು. ಎರಡನೆಯ ಸಮಸ್ಯೆ ಶವವನ್ನು ಮತ್ತೆ ಹೊರತೆಗೆದು ಹಲವಾರು ಅಪವಿತ್ರ ಕಾರ್ಯಾಚರಣೆಗಳನ್ನು ನಡೆಸುವುದು. ಮೂರನೆಯದು ಗೋರಿಗಳಲ್ಲಿ ನೀರು ಇಂಗಿ ಕೊಳೆತ ಶವದ ಅವಶೇಷಗಳೊಂದಿಗೆ ಬೆರೆತು ಅಂತರ್ಜಲ ಸೇರಿ, ಜಲಪ್ರದೂಷಣೆಗೆ ಕಾರಣವಾಗಬಹುದು. ಕುಡಿಯುವ ನೀರಿಗಾಗಿ ಅಂತರ್ಜಲವನ್ನು ಹೆಚ್ಚುಹೆಚ್ಚಾಗಿ ಅವಲಂಬಿಸುತ್ತಿರುವ ಮನುಷ್ಯನಿಗೆ ಶುದ್ಧ ಕುಡಿಯುವ ನೀರಿನ ಅಭಾವ ಉಂಟಾಗುವುದು.

ಈ ಎಲ್ಲ ರೀತಿಯ ಸಮಸ್ಯೆಗಳ ಪರಿಹಾರಕ್ಕಾಗಿ ವೈದಿಕ ಧರ್ಮದಲ್ಲಿ ದಹನ ಸಂಸ್ಕಾರವನ್ನು ರೂಪಿಸಲಾಗಿದೆ. ವಿಶ್ವದಲ್ಲಿ ಇಂದು ರೂಢಿಯಲ್ಲಿರುವ ಎಲ್ಲ ವಿಧದ ಅಂತ್ಯ ಸಂಸ್ಕಾರಗಳಲ್ಲಿ ದಹನ ಸಂಸ್ಕಾರವೇ ಅತ್ಯಂತ ವೈಜ್ಞಾನಿಕವಾದುದು. ಭಾರತದಲ್ಲಿ ಈ ವೇದೋಕ್ತವಾದ ಸಂಸ್ಕಾರ ಪದ್ಧತಿ ಲಕ್ಷಾಂತರ ವರ್ಷಗಳಿಂದ ಬಳಕೆಯಲ್ಲಿದೆ. ಪಂಚಭೂತಗಳಿಂದ ನಿರ್ಮಿತವಾದ ಈ ದೇಹವನ್ನು ಮತ್ತೆ ಪಂಚಭೂತಗಳಿಗೇ ಹಿಂತಿರುಗಿಸುವ ಸರ್ವ ಶ್ರೇಷ್ಠ ವಿಧಾನವಿದು. ಸ್ಥಾನದ ಅಭಾವ, ಜಲಮಾಲಿನ್ಯಗಳನ್ನು ನಿವಾರಿಸುವ ಈ ವಿಧಾನದಲ್ಲಿ ಸ್ವಲ್ಪ ಮಟ್ಟಿಗಿನ ವಾಯು ಪ್ರದೂಷಣ ಉಂಟಾಗುವುದು ನಿಜವಾದರೂ ಇದು ಶುದ್ಧ ವೈದಿಕ ಪರಂಪರೆಯನ್ನು ಅನುಸರಿಸದಿರುವುದರಿಂದ ಈ ದೋಷ

ಉಂಟಾಗುತ್ತದೆ. ಶವದಹನಕ್ಕೆ ಕಟ್ಟಿಗೆ ಹಾಗೂ ಇತರ ಜ್ವಲನಶೀಲ ಇಂಧನಗಳ ಅಭಾವದಲ್ಲಿ ಗಂಗಾನದಿ ಮುಂತಾದ ನದೀತೀರದಲ್ಲಿ ವಾಸಿಸುವ ನಿರ್ಧನ ವರ್ಗದವರು ಸ್ವಲ್ಪವೇ ಸೌದೆಯನ್ನು ಬಳಸಿ ಮುಖಾಗ್ನಿಸ್ಪರ್ಶ ಮಾಡಿಸಿ ಶವಗಳನ್ನು ನದಿಯಲ್ಲಿ ಹರಿಯಬಿಡುತ್ತಾರೆ. ಸೌದೆ ಉರಿಯಲು ಸೀಮೆಎಣ್ಣೆ ಇತ್ಯಾದಿಗಳನ್ನು ಬಳಸಿದಾಗ ವಾತಾವರಣದಲ್ಲಿ ದುರ್ಗಂಧ ಹರಡುತ್ತದೆ.

ಇತ್ತೀಚೆಗೆ ವಿದ್ಯುತ್ ಚಿತಾಗಾರಗಳು ಜನಪ್ರಿಯವಾಗುತ್ತಿದ್ದು ಶವದಹನ ಕಾರ್ಯವನ್ನು ಸುಗಮಗೊಳಿಸಿವೆ. ಆದರೂ ಈ ವಿದ್ಯುತ್ ಚಿತಾಗಾರಗಳ ಚಿಮಣಿಯಿಂದ ಉಗುಳುವ ಹೊಗೆ ಸಾಕಷ್ಟು ವಾಯು ಪ್ರದೂಷಣವನ್ನು ಉಂಟುಮಾಡುತ್ತದಾದರೂ ದೊಡ್ಡ ದೊಡ್ಡ ನಗರವಾಸಿಗಳಿಗೆ ಬೇರೆ ಪರ್ಯಾಯವಿಲ್ಲ. ಶವದಹನದ ಉಪಯುಕ್ತತೆಯನ್ನು ಬಹು ಚೆನ್ನಾಗಿ ಅರಿತು ಅದನ್ನು ಅಳವಡಿಸಿಕೊಳ್ಳುತ್ತಿರುವ ದೇಶಗಳಲ್ಲಿ ಅಮೆರಿಕಾ ಅಗ್ರಸ್ಥಾನದಲ್ಲಿ ಇದೆ. ೨೦೧೧ನೇ ಇಸವಿಯಲ್ಲಿ ಅಮೆರಿಕಾದಲ್ಲಿ ಮರಣ ಸಂಖ್ಯೆ ೨೫ ಲಕ್ಷ. ಅದರಲ್ಲಿ ೪೫% ಎಂದರೆ ೧೧ ಲಕ್ಷ ೨೫ ಸಾವಿರ ಮೃತಕರದ ಶವದಹನವಾಗುತ್ತದೆ ಎಂದು ಕ್ಯಾಲಿಫೋರ್ನಿಯಾ ಪ್ಲೆಸೆಂಟ್ ಸಮಾಚಾರ ಪತ್ರಿಕೆಯಲ್ಲಿ ಹೇಳಲಾಗಿದೆ. ಅಮೆರಿಕಾದಲ್ಲಿ ಟ್ರೈಡೆಂಟ್ ಸೊಸೈಟಿ, ಸ್ಮಾರ್ಟ್ ಕ್ರಿಮೇಷನ್, ನೆಪ್ಚೂನ್ ಸೊಸೈಟಿ, ಓಶನ್ ವ್ಯೂ ಕ್ರಿಮೇಷನ್ ಎಂಬ ಸಂಸ್ಥೆಗಳು ಶವದಹನದ ಕಾರ್ಯದಲ್ಲಿ ಸಹಕರಿಸುತ್ತಿವೆ. ಈ ಸಂಸ್ಥೆಗಳು ಅಸ್ಥಿಗಳಿಗಾಗಿ ಬೇರೆ ಬೇರೆ ಧಾತುಗಳ ಕಲಶಗಳನ್ನು ಹಾಗೂ ಇಚ್ಛಿತ ಸಂಸ್ಥೆಗಳಲ್ಲಿ ನದಿ, ಸಮುದ್ರಗಳಲ್ಲಿ ಅವುಗಳ ವಿಸರ್ಜನೆಯ ವ್ಯವಸ್ಥೆಯನ್ನು ಮಾಡುತ್ತವೆ. ಶವದಹನವು ಉತ್ಕೃಷ್ಟ ಪ್ರಕ್ರಿಯೆಯೆಂದು ಅಮೆರಿಕಾದಲ್ಲಿ ಇದೀಗ ತಿಳಿಯಲಾಗುತ್ತಿದೆ.

ಅಮೆರಿಕಾದಲ್ಲಿ ಶವದಹನಕ್ಕೆ ವಿದ್ಯುತ್ ಚಿತಾಗಾರವನ್ನೇ ಅವಲಂಬಿಸಲಾಗುತ್ತಿದೆ. ಭಾರತದಲ್ಲಿ ದೊಡ್ಡ ನಗರಗಳು ಹಾಗೂ ದೊಡ್ಡ ಪಟ್ಟಣಗಳಲ್ಲಿ ಮಾತ್ರ ವಿದ್ಯುತ್ ಚಿತಾಗಾರಗಳಿದ್ದು ಸಣ್ಣ ಪಟ್ಟಣ ಹಾಗೂ ಗ್ರಾಮಗಳಲ್ಲಿ ಶವದಹನಕ್ಕೆ ಸೌದೆ ಹಾಗೂ ಸೀಮೆಎಣ್ಣೆಯನ್ನೇ ಅವಲಂಬಿಸಲಾಗುತ್ತಿದೆ. ಇದು ಸಾಕಷ್ಟು ವಾಯುಮಾಲಿನ್ಯಕ್ಕೆ ಕಾರಣವಾಗುತ್ತಿದೆ. ಇದನ್ನು ನಿವಾರಿಸಲು ಆರ್ಯ ಸಮಾಜದ ಪ್ರವರ್ತಕ, ಮಹಾನ್ ವೇದಜ್ಞರಾದ ಮಹರ್ಷಿ ದಯಾನಂದ ಸರಸ್ವತಿಯವರು 'ಸಂಸ್ಕಾರವಿಧಿ'ಯಲ್ಲಿ ಹಲವು ವೇದೋಕ್ತ

ಉಪಾಯಗಳನ್ನು ಸೂಚಿಸಿದ್ದಾರೆ. ದಹನ ಸಂಸ್ಕಾರಕ್ಕಾಗಿ ಅವರು ಸೂಚಿಸಿರುವ ಸಾಮಗ್ರಿಗಳ ವಿವರವಿದು :

೧) ಶರೀರದ ತೂಕಕ್ಕೆ ಮಹಾದರಿದ್ರನಾದರೂ ಅರ್ಧಮಣ ಅಥವಾ ೨೦ ಕೆ.ಜಿ. ಯಷ್ಟಾದರೂ ಬೇಕು.

೨) ಶರೀರದ ತೂಕದಷ್ಟು ಚಂದನ (ಶ್ರೀಗಂಧ)

೩) ಶರೀರದ ತೂಕದ ಎರಡರಷ್ಟು ಹವನ ಸಾಮಗ್ರಿ (೧೦೮ ಔಷಧೀಯ ಗಿಡಮೂಲಿಕೆಗಳಿಂದ ಶಾಸ್ತ್ರೋಕ್ತವಾಗಿ ತಯಾರಿಸಲ್ಪಟ್ಟ ಈ ಹೋಮದ್ರವ್ಯವು 'ಆರ್ಯ ಸಮಾಜ'ದಲ್ಲಿ ಲಭಿಸುತ್ತದೆ.)

೪) ಸುಮಾರು ಒಂದು ಕೆ.ಜಿ. ತುಪ್ಪಕ್ಕೆ ಒಂದು ಗುಲಗಂಜಿಯಷ್ಟು ಕಸ್ತೂರಿ, ಒಂದು ಮಾಶೆ ಕೇಸರಿ.

೫) ಒಂದು ಸೇರು ಅಗರ, ತಗರ ಹಾಗೂ ಚಂದನದ ಪುಡಿಯ ಮಿಶ್ರಣ.

೬) ಕರ್ಪೂರ

೭) ಪಲಾಶದ ಕಾಷ್ಟ.

ಈ ರೀತಿ ಶವದಹನ ಕಾರ್ಯ ಮಾಡುವುದು ಆರ್ಥಿಕವಾಗಿ ಬಲಿಷ್ಠರಾದವರಿಗೆ ಮಾತ್ರ ಸಾಧ್ಯ. ಶವದಹನ ಸಮಾಜದ ಕರ್ತವ್ಯ. ಆದ್ದರಿಂದ ಸಮಾಜವು ಆರ್ಥಿಕ ದುರ್ಬಲರಿಗೆ ಸಹಾಯ ಮಾಡಿ ಈ ರೀತಿ ಅಂತ್ಯೇಷ್ಟಿ ನೆರವೇರಿಸಲು ಸಹಾಯ ಮಾಡಬೇಕು ಎಂಬುದಾಗಿ ಮಹರ್ಷಿ ದಯಾನಂದ ಸರಸ್ವತಿಯವರು ಘೋಷಿಸುತ್ತಾರೆ. ಈ ಮಾರ್ಗದಲ್ಲಿ ಅಂತ್ಯೇಷ್ಟಿ ನೆರವೇರಿಸಿದಾಗ ಪರಿಸರ ಸಂರಕ್ಷಣೆ ಆಗುತ್ತದೆ. ಸಮಾಜದ ಸಂಘ ಸಂಸ್ಥೆಗಳು ಹಾಗೂ ಸ್ವತಃ ಸರ್ಕಾರವು ಇಂದು ಆರ್ಥಿಕವಾಗಿ ದುರ್ಬಲರಾದವರಿಗೆ ಈ ರೀತಿಯ ಅಂತ್ಯ ಸಂಸ್ಕಾರ ಮಾಡಲು ಸಹಕಾರ ನೀಡಬೇಕಾದುದು ಅಗತ್ಯ. ಅಂತ್ಯೇಷ್ಟಿ ಒಂದು ಸಮಾಜದ ಜವಾಬ್ದಾರಿ. ರಿಜಿಸ್ಟ್ರಾರ್ ಆಫ್ ಬರ್ತ್ಸ್ ಅಂಡ್ ಡೆತ್ಸ್ ವಿಭಾಗವು ಈ ಕಾರ್ಯವಹಿಸಿಕೊಂಡು ಕೆಲಸ ಮಾಡಬಹುದು. ಅತ್ಯಂತ ವೈಜ್ಞಾನಿಕ ಶವ ಸಂಸ್ಕಾರ ವಿಧಿಯಾದ ಶವದಹನವೇ ಈ ಅಂತ್ಯೇಷ್ಟಿ.

***ಲೇಖಕರು: ಸಂಪಾದಕರು 'ವೇದತರಂಗ'***

# ಶ್ರಾದ್ಧ – ಮಾನವನ ಕೃತಜ್ಞತೆ

***ಜಿ. ಶ್ರೀಧರ್***

ಶ್ರಾದ್ಧ ಒಂದು ಸಂಸ್ಕೃತ ಶಬ್ದ. ಇದರರ್ಥ ಶ್ರದ್ಧೆಯಿಂದ ನಡೆಸಲಾಗುವ ಕ್ರಿಯೆ – ಸನಾತನ ಧರ್ಮದಲ್ಲಿ ಪೂರ್ವಜರಿಗೆ ಮತ್ತು ಹೆತ್ತವರಿಗೆ ಗೌರವಾರ್ಪಣೆ ಸಲ್ಲಿಸುವ ಕ್ರಿಯಾವಿಧಿ.

ದೇಶಕಾಲ ವೈಪರೀತ್ಯಗಳನ್ನು ಅನುಸರಿಸಿ, ಶ್ರಾದ್ಧ ಕರ್ಮಗಳನ್ನು ಋಷಿಗಳು ನಿರ್ಣಯಿಸಿರುತ್ತಾರೆ. ಪರಂಪರಾಗತವಾದ ವಂಶಾವಳಿಯ ಬೇರುಗಳನ್ನು ಸದೃಢಪಡಿಸಲು ಇರುವ ಏಕೈಕ ಮಾರ್ಗ ಶ್ರಾದ್ಧ. ಒಬ್ಬ ವ್ಯಕ್ತಿಯು ತನ್ನ ಪಿತೃಗಳನ್ನು ಉದ್ದೇಶಿಸಿ, ಅನ್ನದಾನ ಮಾಡುವ ವಿಧಿಗೆ ಶ್ರಾದ್ಧವೆನ್ನುತ್ತಾರೆ. ಶ್ರದ್ಧೆ ಮತ್ತು ಭಕ್ತಿಯಿಂದ ಆಚರಿಸುವ ಈ ಕರ್ಮವು ಯಾಗ–ಯಜ್ಞಕ್ಕೆ ಸಮಾವಾಗಿದೆ. ಪಿತೃಗಳಿಗೆ ಶ್ರಾದ್ಧ ಮಾಡುವುದೇ ಪಿತೃ ಯಜ್ಞ. ದೇವಪಿತೃ ಕಾರ್ಯಗಳನ್ನು ತಪ್ಪದೇ ಮಾಡಬೇಕೆಂದು ಉಪನಿಷತ್ತುಗಳು ಸಹ ತಿಳಿಸಿರುತ್ತವೆ. ಪಿಂಡ ಪ್ರಧಾನದ ಮೂಲಕ ಆಚರಿಸುವ ಈ ಕರ್ಮವು ಮೋಕ್ಷ ಸಾಧನವಾಗಿದೆ. ಯಾವ ಕ್ಷೇತ್ರಗಳಲ್ಲಿ ಇಂತಹ ಕರ್ಮ ಪ್ರಧಾನಗಳನ್ನು ಆಚರಿಸುತ್ತಾರೋ, ಅಂಥಹ ಕ್ಷೇತ್ರಗಳ ಪವಿತ್ರತೆ ಹೆಚ್ಚುತ್ತದೆ.

ನಂಬಿಕೆಗಳು ವೈಯಕ್ತಿಕವಾಗಿರುತ್ತವೆ. ಕಾಲಕಾಲಕ್ಕೆ ತಕ್ಕಂತೆ ಬದಲಾಗುತ್ತದೆ. ಆದುದರಿಂದಲೇ, ವೇದಗಳ ಕಾಲದಿಂದ ನಡೆದುಕೊಂಡು ಬಂದ ಶ್ರಾದ್ಧ ಕರ್ಮವು ವಿಜ್ಞಾನ ಯುಗದಲ್ಲೂ, ವಿಜ್ಞಾನಕ್ಕಿಂತಲೂ ಹೆಚ್ಚಿಗೆ ವಿವಾದಗಳನ್ನು ಸೃಷ್ಟಿ ಮಾಡಿದರೂ, ಸನಾತನ ನಂಬಿಕೆಯನ್ನು ಬದಲಿಸಲು ಸಾಧ್ಯವಾಗಲಿಲ್ಲ.

## ಸೂರ್ಯನ ವಿವಿಧ ರೂಪಗಳು

ಸೂರ್ಯನು ಹನ್ನೆರಡು ತಿಂಗಳುಗಳಲ್ಲಿ ಕಾಲಚಕ್ರವನ್ನು ನಡೆಸುತ್ತಿರುವನು. ಚೈತ್ರಮಾಸದಲ್ಲಿ ವಿಷ್ಣುವಾಗಿ ಶತ್ರು ನಾಶಮಾಡವನು. ವೈಶಾಖಮಾಸದಲ್ಲಿ ಆರ್ಯಮನಾಗಿ, ಜೇಷ್ಟ ಮಾಸದಲ್ಲಿ ವಿವಸ್ವಂತುವಾಗಿ ಜೀವರಾಶಿಗಳ ಆಹಾರವನ್ನು ಜೀರ್ಣ ಮಾಡುತ್ತಿರುವನು. ಆಷಾಢದಲ್ಲಿ ಅಂಶುಮಂತನಾಗಿ ಗಾಳಿಯಲ್ಲಿ ನಿಂತು ಜೀವರಾಶಿಗಳ ಉಸಿರಾಟಕ್ಕೆ ಆಧಾರವಾಗಿ ಸುಖವನ್ನು ಕೊಡುವನು. ಶ್ರಾವಣದಲ್ಲಿ ಪರ್ಜನ್ಯನಾಗಿ ತನ್ನ ಕಿರಣಗಳಿಂದ ನೀರನ್ನು ಕುಡಿದು ಪುನಃ ಮೇಘ ರೂಪದಲ್ಲಿ

ಮಳೆ ಕೊಡವನು. ಭಾದ್ರಪದ ಮಾಸದಲ್ಲಿ ವರುಣನಾಗಿ ಜೀವಿಗಳು ಕುಡಿಯುವ ನೀರಿನಲ್ಲಿ ಸೇರಿ ಅವರನ್ನು ರಕ್ಷಿಸುವನು. ಆಶ್ವಯುಜದಲ್ಲಿ ಇಂದ್ರನಾಗಿ ಸ್ವರ್ಗಾಧಿಪತಿಯಾಗಿ ದುಷ್ಟ ಶಕ್ತಿಗಳನ್ನು ಸಂಹರಿಸುವನು. ಕಾರ್ತಿಕದಲ್ಲಿ ಧಾತನಾಗಿ ಪ್ರಜಾಪತಿಯಲ್ಲಿ ಭೂತಗಳನ್ನು ಸೃಷ್ಟಿಸುವನು. ಮಾರ್ಗಶಿರದಲ್ಲಿ ಮಿತ್ರನಾಗಿ ಲೋಕಕ್ಕೆ ಚೈತನ್ಯವನ್ನು ಕೊಡುವನು. ಪುಷ್ಯದಲ್ಲಿ ಪೂಷನಾಗಿ ಜೀವಿಗಳ ಆಹಾರದಲ್ಲಿದ್ದು, ಸೃಷ್ಠಿಯನ್ನು ಉಂಟು ಮಾಡುವನು. ಮಾಘದಲ್ಲಿ ಭಗನಾಗಿ ಜೀವಿಗಳ ಶರೀರದಲ್ಲಿದ್ದು, ಅದನ್ನು ಪೋಷಿಸುವನು. ಫಾಲ್ಗುಣದಲ್ಲಿ ತ್ವಷ್ಟನಾಗಿ ಔಷಧಿಗಳಲ್ಲಿಯೂ, ವೃಕ್ಷಗಳಲ್ಲಿಯೂ ಫಲಿಸುವಂತಹ ಶಕ್ತಿಯಾಗಿರುವನು. ಹೀಗೆ ಸಂಚರಿಸುತ್ತಾ ಲೋಕಗಳಿಗೆ ಶುಭವನ್ನು ಮಾಡುತ್ತಿರುವನು.

## ಶ್ರಾದ್ಧಕ್ಕೆ ಪ್ರಶಸ್ತ ಸಮಯ

ಹಗಲ ಹದಿನೈದು ಮುಹೂರ್ತಗಳಲ್ಲಿ ಎಂಟನೇ ಮುಹೂರ್ತಕ್ಕೆ ಕುತುಪಕಾಲ ಎನ್ನುವರು. ಮಧ್ಯಾಹ್ನದ ನಂತರ ಸೂರ್ಯನು ಮಂದ ಹಾಗೂ ಸೌಮ್ಯ ಕಿರಣವುಳ್ಳವನು ಆಗುವನು. ಅದು ಶ್ರಾದ್ಧಕ್ಕೆ ಅತ್ಯಂತ ಮುಖ್ಯವಾದುದು. ಶ್ರಾದ್ಧಕ್ಕೆ ಖಡ್ಗ, ಪಾತ್ರೆ, ಕುತುಪಕಾಲ, ಕಂಬಳಿ, ಹಸು, ಚಿನ್ನ, ದರ್ಭೆ ಮತ್ತು ಸೋದರ ಅಳಿಯ ಈ ಎಂಟು ಅಂಶಗಳು ಪ್ರಾಮುಖ್ಯವಾಗಿರುತ್ತವೆ. ದರ್ಭೆ ಮತ್ತು ಕರಿ ಎಳ್ಳು ವಿಷ್ಣುವಿನ ದೇಹದಿಂದ ಬಂದಿದೆ ಎಂದು ನಂಬಿರುವ ಕಾರಣ ಶ್ರಾದ್ಧಕ್ಕೆ ಇದು ಅತ್ಯಾವಶ್ಯಕವಾಗಿರುತ್ತವೆ.

ಅಮಾವಾಸ್ಯೆ, ಅದರಲ್ಲೂ ಪರ್ವದಿಂದ ಕೂಡಿದ ಮಹಾಲಯ ಅಮಾವಾಸ್ಯೆ ಶ್ರೇಷ್ಠವಾದುದು. ಪರ್ವದಿನಗಳಾದ ಸೂರ್ಯ ಗ್ರಹಣ, ಚಂದ್ರ ಗ್ರಹಣ, ಮಹಾಭರಣಿ, ದಕ್ಷಿಣಾಯನ ಮತ್ತು ಉತ್ತರಾಯಣಗಳ ಸಂಕ್ರಾಂತಿ ದಿನಗಳಲ್ಲಿ ಪಿತೃ ತಿಲ ತರ್ಪಣವನ್ನು ನೀಡುವ ಸಾಮೂಹಿಕ ಕ್ರಿಯೆಗಳು ದೇಶದಾದ್ಯಂತ ನದಿ ಸಂಗಮಗಳಲ್ಲಿ ಮೊದಲಿನಿಂದಲೂ ನಡೆದು ಬಂದಿದೆ. ಆದುದರಿಂದಲೇ, ಹಿಂದೆ ಇದ್ದ ರಾಜ ಪದ್ಧತಿಯಿಂದ ಪ್ರಜಾಪ್ರಭುತ್ವದ ಪದ್ಧತಿಯವರೆವಿಗೂ ಈ ದಿನಗಳಿಗೆ ಅನಧ್ಯಯನ ದಿನಗಳೆಂದು ಸರ್ಕಾರ ಸಾರ್ವತ್ರಿಕ ರಜೆಯನ್ನು ನೀಡುತ್ತದೆ. ಪ್ರತಿ ವರ್ಷದ ಮಹಾಲಯ ಶ್ರಾದ್ಧದಲ್ಲಿ ೨ನೇ ದಿನ ಶ್ರಾದ್ಧ ತರ್ಪಣವನ್ನು ಪರೇಹನಿ, ಅಂದರೆ ಬೆಳಗಿನ ಝಾವ ಮಾಡುವ ಪದ್ಧತಿ ಇರುತ್ತದೆ. ಪವಿತ್ರ-ಉಂಗುರವನ್ನು ಬಂಗಾರದಿಂದ ಮಾಡಿಸಿಕೊಂಡು ಅದರಿಂದ ಈ ಶ್ರಾದ್ಧ ಕರ್ಮದ ಫಲವನ್ನು

ಪಡೆಯಲು ಸಾಧ್ಯವಾಗುತ್ತದೆ. ದೇವತೆಗಳಿಗೆ ಜನಿವಾರದ ಉಪವೀತಿಯಿಂದ ಪ್ರದಕ್ಷಿಣೆ ಮಾಡಬೇಕು. ಪಿತೃಗಳಿಗೆ ಅಪಸವ್ಯದಿಂದ ಅಪ್ರದಕ್ಷಿಣೆ ಮಾಡಬೇಕು. ಈ ರೀತಿ ನಿಯಮಗಳನ್ನು ಮತ್ತು ಅಪರ ಕರ್ಮಾದಿಗಳನ್ನು ನಿಯಮಿಸಿರುವುದರಲ್ಲಿಯೂ ಭಾವನಾತ್ಮಕ, ಪ್ರಜ್ಞಾಪೂರ್ವಕ ವಿಧಿಗಳು ಅಡಗಿವೆ.

**ಪರ್ವಸಂಧಿ – (ಎರಡು ಭಾಗಗಳು ಕೂಡುವುದು)**

**ಶುಕ್ಲಪಕ್ಷ –** ಚಂದ್ರನು ಮೊದಲನೇ ಕಲೆಯಿಂದ ವೃದ್ಧಿ ಹೊಂದುವ ತಿಥಿಗಳಿಂದ ಕೂಡಿದ ಪಕ್ಷವನ್ನು ಶುಕ್ಲ ಪಕ್ಷ (ಶುದ್ಧ)ವೆನ್ನುವರು.

**ಕೃಷ್ಣಪಕ್ಷ –** ಚಂದ್ರನು ತನ್ನ ಕಲೆಗಳು ಕ್ಷೀಣಿಸುತ್ತಾ ಬರುವ ತಿಥಿಗಳಿಂದ ಕೂಡಿದ ಪಕ್ಷವನ್ನು ಕೃಷ್ಣ ಪಕ್ಷ (ಬಹುಳ) ಎಂದು ಹೇಳುವರು.

ಚತುರ್ದಶಿ ಪೂರ್ಣಿಮಾ ಇಲ್ಲವೇ ಚತುರ್ದಶಿ ಅಮಾವಾಸ್ಯೆ ಮಧ್ಯೆಯಿರುವ ಲವ ಮಾತ್ರೆ (ಸುಮಾರು ಎರಡು ನಿಮಿಷಗಳು) ಕಾಲವು ಪರ್ವ ಸಂಧಿ. ಇದೇ ರೀತಿಯಾಗಿ ಪೂರ್ಣಿಮಾ ಪಾಡ್ಯಮಿಗೆ, ಅಮಾವಾಸ್ಯೆ ಪಾಡ್ಯಮಿಗೆ ಮಧ್ಯೆ ಇರುವ ಹಾಗೂ ಒಂದು ತಿಥಿಗೂ ಇನ್ನೊಂದು ತಿಥಿಗೆ ಮಧ್ಯೆ ಇರುವ ಅಂತ್ಯಕಾಲವನ್ನು ದ್ವಿಲವ (ಸುಮಾರು ನಾಲ್ಕು ನಿಮಿಷ) ಕಾಲವು ತಿಥಿಸಂಧಿ ಎಂದೂ ಹೇಳುವರು.

# ವೃಕ್ಷ ಸಂಸ್ಕಾರ



# ವೃಕ್ಷಫಲ

***ಜಿ. ಶ್ರೀಧರ್***

ಮಕ್ಕಳಿಲ್ಲದವರಿಗೆ ಮಕ್ಕಳ ಫಲವನ್ನು ಮರಗಳು ಕೊಡುತ್ತವೆ ಎಂಬುದು ಸನಾತನ ಧರ್ಮದ ನಂಬಿಕೆ. ಆದ್ದರಿಂದ, ಮರಗಳನ್ನು ನೆಟ್ಟು ಬೆಳೆಸಿದವರಿಗೆ ಪಿಂಡದಾನವನ್ನು ಕೊಡುವ ಸಾಮೂಹಿಕ ಪದ್ಧತಿ ಎಲ್ಲರಲ್ಲೂ ಆಚರಣೆಯಲ್ಲಿದೆ. ಅರಳಿ ಮರವನ್ನು ಬೆಳೆಸಿದರೆ ಅದು ಸಾವಿರ ಮಕ್ಕಳನ್ನು ಬೆಳೆಸಿದ್ದಕ್ಕೆ ಸಮ. ಗೇರಲ ಮರವನ್ನು ಬೆಳೆಸಿದರೆ ಪ್ರೇತತ್ವ ನಿವಾರಣೆ ಮತ್ತು ಅಂಕೋಲೆ ಮರವನ್ನು ಬೆಳೆಸಿದರೆ ವಂಶವೃದ್ಧಿ.

**ನಿಂಬಿ ಪ್ರರೋಹಕಾಣಾಂತುತೇಷಾಂತುಷ್ಯೇದಿವಾಕರಃ ।**
**ಶ್ರೀ ವೃಕ್ಷೇಶಂಕರೋದೇವಃ ಘಾಟಲಾ ಯಾಂತು ಪಾರ್ವತೀ ॥**

ಎಂಬಂತೆ ಬೇವಿನ ಮರವನ್ನು ಬೆಳೆಸಿದರೆ ದಿವಾಕರ (ಸೂರ್ಯ)ನನ್ನೂ, ಬಿಲ್ವ ಪತ್ರವನ್ನು ನೆಟ್ಟು ಬೆಳೆಸಿದರೆ ಶಂಕರನನ್ನೂ, ಪಾದರಿ ಬಳ್ಳಿಯನ್ನು ಹಬ್ಬಿಸಿದರೆ ಪಾರ್ವತಿಯನ್ನೂ ಈ ರೀತಿಯಾಗಿ ಆಯಾ ಗಿಡಗಳನ್ನು ಬೆಳೆಸಿ ಆಯಾ ದೇವರನ್ನು ಪ್ರಸನ್ನರಾಗುವಂತೆ ಮಾಡಬಹುದು.

**ಅಶ್ವತ್ಥೋ ರೋಗ ನಾಶಯ ಪಲಾಸೋ ಬ್ರಹ್ಮದಸ್ತಥಾ**

ಅಶ್ವತ್ಥ ಮರವು ರೋಗ ನಾಶಮಾಡುತ್ತದೆ, ಮುತ್ತುಗವು ಬ್ರಹ್ಮವರ್ಚಸ್ಸನ್ನೂ ಕೊಡುತ್ತದೆ, ಅರಳಿ ಮರವು ಧನವನ್ನೂ, ಅಶೋಕ ಮರವು ಶೋಕರಾಹಿತ್ಯ ನೀಡುತ್ತದೆ, ಬಸರಿ ಮರವು ಯಜ್ಞದ ಫಲವನ್ನೂ, ಬೇವಿನ ಮರವು ಆಯುಷ್ಯವನ್ನೂ ಮತ್ತು ದಾಳಿಂಬೆಯು ಒಳ್ಳೆಯ ಸಹಧರ್ಮಿಣಿ ಈ ರೀತಿ ವೃಕ್ಷಗಳಿಂದ ಫಲಗಳನ್ನು ಪಡೆಯಬಹುದು.

ಹೀಗೆಯೇ ಮಲ್ಲಿಗೆ ಬಳ್ಳಿಯಿಂದ ಗಂಧರ್ವರನ್ನೂ, ಹುಣಸೆ ಮರವನ್ನು ಬೆಳೆಸುವುದರಿಂದ ಹರಿದಾಸರ ಗುಂಪನ್ನೂ, ತಾಳೆಯ ಮರ ಮಕ್ಕಳ ಭಾಗ್ಯವನ್ನು, ಪಗಡೆ ಮರವನ್ನು ಬೆಳೆಸುವುದರಿಂದ ಕುಲ ವೃದ್ಧಿಯನ್ನು ಗಳಿಸಬಹುದು. ಹೀಗೆ ಅನೇಕ ಗಿಡಗಳಿಂದ ಅನೇಕ ಫಲಗಳು ಪ್ರಾಪ್ತಿಯಾಗುತ್ತದೆ. ಮೃತ ವ್ಯಕ್ತಿಗಳ ವಂಶದಲ್ಲಿ ಹುಟ್ಟಿದ ಪ್ರಯುಕ್ತ ಅವರಿಂದ ಪಡೆದ ಸಹಾಯ ಹಾಗೂ ಮಾನವರಾಗಿ ಹುಟ್ಟಲು ಕಾರಣಿಭೂತರಾದ್ದರಿಂದ ಋಣ ಪರಿಹಾರಕ್ಕೆ ಕೃತಜ್ಞತೆಗಾಗಿ ಮಾಡುವ ಈ ಶ್ರಾದ್ಧ ಹಲವಾರು ಶತಮಾನದಿಂದ ನಡೆದುಕೊಂಡು ಬಂದಿದೆ. ಇದನ್ನು ಇಂದಿನ ಜನಾಂಗವು ಮುಂದುವರಿಸಿಕೊಂಡು ಹೋಗುತ್ತಿರುವುದು ಪ್ರಶಂಸನೀಯ.

***ಲೇಖಕರು: ಜಂಟಿ ಕಾರ್ಯದರ್ಶಿ, ಕರ್ನಾಟಕ ಸರ್ಕಾರ***

# ಅಶ್ವತ್ಥ ವೃಕ್ಷ

***ಮಂಜುಳ ಗೋಪಿನಾಥ್***



ವೃಕ್ಷಗಳು ಮಾನವ ಕುಲಕೋಟಿಗೆ ಪ್ರಕೃತಿಯ ವರದಾನ. ಬಹಳಷ್ಟು ವೃಕ್ಷಗಳನ್ನು ನಾವು ದಿನನಿತ್ಯ ನೋಡುತ್ತೇವೆ. ಇವುಗಳಲ್ಲಿ ಅರಳಿ ಮತ್ತು ಬೇವಿನ ಮರಗಳಿಗೆ ನಮ್ಮ ಆಚರಣೆಗಳಲ್ಲಿ ಧಾರ್ಮಿಕವಾದ ಸ್ಥಾನವನ್ನು ಕೊಟ್ಟಿದ್ದೇವೆ. ಅರಳಿ ಮರದ ಹುಟ್ಟು ಹೇಗೆ, ಇದರ ಉಪನಯನ ಮತ್ತು ಅರಳಿ ಹಾಗೂ ಬೇವಿನ ವೃಕ್ಷದ ಮದುವೆ ಮಾಡುವ ಆಚರಣೆಗಳ ಬಗ್ಗೆ ತಿಳಿದುಕೊಳ್ಳೋಣ.

ಅರಳಿ ವೃಕ್ಷವನ್ನು ಅಶ್ವತ್ಥ ವೃಕ್ಷವೆಂದೂ ಸಹ ಕರೆಯುತ್ತೇವೆ. ಆಂಗ್ಲದಲ್ಲಿ ಅಶ್ವತ್ಥ ವೃಕ್ಷವನ್ನು Peepal or pipal Tree (Ficus religiosa) ಎಂದು ಕರೆಯುತ್ತಾರೆ.

ಇಂದ್ರನು 'ಮಾವು', ಬ್ರಹ್ಮ 'ಮುತ್ತುಗ' ಮತ್ತು ವಿಷ್ಣುವು 'ಅಶ್ವತ್ಥ' ವೃಕ್ಷ ಎಂಬುದು ಒಂದು ಕಥೆಯು ಹೇಳುತ್ತದೆ. ಒಮ್ಮೆ ಅಗ್ನಿಯು ದೇವಲೋಕವನ್ನು ತ್ಯಜಿಸಿ ಅಶ್ವತ್ಥನಾಗಿ ಮರದಲ್ಲಿ ಒಂದು ವರ್ಷದ ಕಾಲ ನೆಲಸಿದ ಕಾರಣ ಈ ಮರಕ್ಕೆ ಅಶ್ವತ್ಥ ವೃಕ್ಷವೆಂದು ಸಹ ಕರೆಯಲ್ಪಡುತ್ತದೆ. ಎಂದೆಂದೂ ಅಳಿಸಲಾಗದಂತಹ ಅಶ್ವತ್ಥ ವೃಕ್ಷವು ಎದ್ದು ನಿಂತಿರುವ ಬೇರು ಮತ್ತು ಇಳಿಮುಖವಾದ ಟೊಂಗೆಗಳು ವೇದದ ಮಂತ್ರವನ್ನು ಸಾರುವುದರಿಂದ ಈ ವೃಕ್ಷವನ್ನು ಬಲ್ಲವನು ವೇದವನ್ನು ಬಲ್ಲವನಾಗಿರುತ್ತಾನೆಂಬುದು ಪರಮಾತ್ಮನ ವಾಣಿಯಾಗಿದೆ. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮನು ವೃಕ್ಷಗಳಲ್ಲಿ 'ನಾನೇ ಅಶ್ವತ್ಥ' ಎಂದಿದ್ದಾನೆ. ಕಲಿಯುಗದ ಪ್ರಾರಂಭದ ಮುನ್ನ ಶ್ರೀ ಕೃಷ್ಣ ಪರಮಾತ್ಮನು ಈ ವೃಕ್ಷದಡಿಯಲ್ಲಿ ಅವತಾರ ಸಮಾಪ್ತಿ ಮಾಡಿದನೆಂದು ಹೇಳಲಾಗಿದೆ.

ಅಶ್ವತ್ಥ ವೃಕ್ಷವು ತ್ರಿಮೂರ್ತಿಗಳ ವಾಸವಾಗಿದ್ದು, ಇದರ ಬೇರು ಬ್ರಹ್ಮ, ಕಾಂಡವು ವಿಷ್ಣು ಮತ್ತು ಎಲೆಗಳು ಶಿವನ ವಾಸಸ್ಥಾನವೆಂಬ ನಂಬಿಕೆಯಿಂದಲೇ ಈ ವೃಕ್ಷಕ್ಕೆ 'ಮೂಲತೋ ಬ್ರಹ್ಮ ರೂಪಾಯ ಮಧ್ಯತೋ ವಿಷ್ಣು ರೂಪಿಣೇ ಅಗ್ರತಃ ಶಿವರೂಪಾಯ, ವೃಕ್ಷ ರಾಜಾಯ ತೇ ನಮಃ' ಎಂದು ಪ್ರಾರ್ಥಿಸುತ್ತೇವೆ. ಸ್ಕಾಂದ ಪುರಾಣದಲ್ಲಿ, ಈ ವೃಕ್ಷದಡಿಯಲ್ಲಿ ವಿಷ್ಣುವಿನ ಜನನವಾಗಿದ್ದರಿಂದ

ಇದನ್ನು ವಿಷ್ಣುವಿನ ಸಂಕೇತವೆಂದೂ ಉಲ್ಲೇಖಿಸಲಾಗಿದೆ. ದೇಹ ಮತ್ತು ಆತ್ಮದ ನಡುವೆ ಇರುವ ವ್ಯತ್ಯಾಸವನ್ನು ವಿವರಿಸಲು, ಉಪನಿಷತ್ತುಗಳಲ್ಲಿ ಅಶ್ವತ್ಥ ವೃಕ್ಷದ ಹಣ್ಣಿನ ಉದಾಹರಣೆಯನ್ನು ತೆಗೆದುಕೊಳ್ಳಲಾಗಿದೆ. ಬಾಹ್ಯ ಸೌಂದರ್ಯವನ್ನು ಅನುಭವಿಸುವ ಈ ದೇಹವನ್ನು ಹಣ್ಣಿಗೆ ಹೋಲಿಸಿ, ಒಳಗೆ ಇದ್ದು, ಪ್ರತಿಯೊಂದು ಆಗುಹೋಗುಗಳನ್ನು ಸಾಕ್ಷಾತ್ಕರಿಸುವ ಆತ್ಮವನ್ನು ಬೀಜಕ್ಕೆ ಹೋಲಿಸಲಾಗಿದೆ.

ಇದರ ರಸದ ಕಿಣ್ವಗಳಲ್ಲಿ ಮತ್ತು ಈ ವೃಕ್ಷದಿಂದ ಉತ್ಪನ್ನವಾಗುವ ಗಾಳಿಯಲ್ಲಿ ಗರ್ಭ ಧರಿಸುವ ಶಕ್ತಿಯನ್ನು ಉತ್ತೇಜಿಸುವ ಸಾಮರ್ಥ್ಯವಿದೆ ಎಂದು ಸಂಶೋಧನೆಗಳಿಂದ ತಿಳಿದುಬಂದಿದೆ. ಸಾಮಾನ್ಯವಾಗಿ, ಈ ವೃಕ್ಷವನ್ನು ಹನುಮನ ಮತ್ತು ನವಗ್ರಹ ಮಂದಿರಗಳಲ್ಲಿ ಕಾಣುತ್ತೇವೆ. ಸಾಕ್ಷಾತ್ ಲಕ್ಷ್ಮಿದೇವಿಯು ಈ ವೃಕ್ಷದಡಿಯಲ್ಲಿ ಆಸೀನಳಾಗಿರುತ್ತಾಳೆಂಬ ನಂಬಿಕೆ ಇದೆ. ಯಾರು ಈ ವೃಕ್ಷಕ್ಕೆ ನೀರೆರೆವರೋ, ಅವರ ಮಕ್ಕಳ ಏಳಿಗೆಯಾಗುವುದಲ್ಲದೆ, ಅವರು ಪಾಪಕರ್ಮಗಳಿಂದ ಮತ್ತು ರೋಗರುಜಿನಗಳಿಂದ ಮುಕ್ತರಾಗುವರೆಂದೂ ನಂಬಿಕೆ. ಈ ವೃಕ್ಷದ ಸಮಿತ್ತನ್ನು ಹೋಮಗಳಲ್ಲಿ ಬಳಸುವುದರಿಂದ ದೇವತೆಗಳು ಸಂತುಷ್ಟರಾಗಿ ಹವಿಸ್ಸನ್ನು ಸ್ವೀಕರಿಸುತ್ತಾರೆಂಬುದು ಪ್ರತೀತಿ.

ಈ ವೃಕ್ಷವನ್ನು ಶನಿವಾರದಂದು ಸ್ಪರ್ಶಿಸಲು ಬಹಳ ಪ್ರಶಸ್ತವಾದುದೆಂದೂ ಸಹ ನಂಬಲಾಗಿದೆ.

## ಜೀವರಕ್ಷಕ ವೃಕ್ಷ

ವೈಜ್ಞಾನಿಕವಾಗಿ ಹೇಳಬೇಕಾದರೆ, ಈ ವೃಕ್ಷವು ಸಕಲ ಜೀವಿಗಳಿಗೆ ಅವಶ್ಯವಿರುವ ಆಮ್ಲಜನಕವನ್ನು ಹಗಲು ಇರುಳು ಹೇರಳವಾಗಿ ಬಿಡುಗಡೆ ಮಾಡುವುದರಿಂದ, ಈ ವೃಕ್ಷವನ್ನು ಜೀವನಾಧಾರಿ ಎಂದು ಕರೆಯಲಾಗಿದೆ. ಶಬ್ದ ಮತ್ತು ಗಾಳಿಯ ತರಂಗಗಳೊಂದಿಗೆ ಈ ವೃಕ್ಷದ ಎಲೆಗಳು ಚುರುಕಾಗಿ ಪ್ರತಿ–ಸ್ಪಂದಿಸುವುದರಿಂದ, ನಿಧಾನವಾಗಿಯಾದರೂ, ಅಂಟುರೋಗದ ರೋಗಾಣುಗಳನ್ನು ಖಚಿತವಾಗಿ ನಾಶಮಾಡುತ್ತದೆ ಎಂದು ನಿರಂತರ ಸಂಶೋಧನೆಗಳು ಹೇಳಿವೆ. ಆಯುರ್ವೇದದ ಪ್ರಕಾರ, ಇದರ ಎಲೆಗಳು, ಹಣ್ಣು ಮತ್ತು ಕಾಂಡವು ಸಕಲ ರೋಗಗಳನ್ನು ನಾಶಪಡಿಸುತ್ತದೆ. ಇದರ ಎಲೆಯ ಮೇಲೆ ಇಟ್ಟ ಜೇನು ಹನಿಯನ್ನು ಚಪ್ಪರಿಸಿದರೆ ಮಾತಿನ ಉಗ್ಗುವಿಕೆಯು ವಾಸಿಮಾಡುತ್ತದೆ. ಇದರ ಹಣ್ಣಿನ ಚೂರ್ಣವು ಹಸಿವನ್ನು ಇಮ್ಮಡಿಸುವುದಲ್ಲದೆ, ಅನೇಕ ರೋಗಗಳನ್ನೂ ಸಹ

ವಾಸಿಮಾಡುತ್ತದೆ. ಇದರ ಎಲೆಗಳನ್ನು ತುಪ್ಪದಲ್ಲಿ ಕಾಯಿಸಿ ಹುಣ್ಣುಗಳ ಮೇಲೆ ಹಚ್ಚಿದರೆ ಹುಣ್ಣು ವಾಸಿಯಾಗುತ್ತದೆ.

ಸ್ಕಾಂದ ಪುರಾಣದ ಪ್ರಕಾರ, ಪುತ್ರ ಸಂತಾನ ಇಲ್ಲದವರು, ಅಶ್ವತ್ಥ ವೃಕ್ಷವನ್ನು ತನ್ನ ಪುತ್ರ ಎಂದು ಭಾವಿಸಬೇಕೆಂದು ಹೇಳಲಾಗಿದೆ. ಅಶ್ವತ್ಥ ವೃಕ್ಷವು ಜೀವಂತವಾಗಿರುವಷ್ಟು ಕಾಲ ಪುತ್ರ ಸಂತತಿಗಳು ಊರ್ಜಿತವಾಗುವುದೆಂದು ನಂಬಿಕೆ. ಇಂದಿಗೂ, ಬಹಳಷ್ಟು ಗ್ರಾಮಗಳಲ್ಲಿ ಅರಳಿ ಕಟ್ಟೆಯಲ್ಲಿ ಗ್ರಾಮ ಪಂಚಾಯಿತಿ ಸಭೆಗಳು ಸೇರುವುದುಂಟು.

## ಬೇವು



ಇನ್ನು ಬೇವಿನ ಬಗ್ಗೆ ಹೇಳಬೇಕಾದರೆ, ಸಂಸ್ಕೃತದಲ್ಲಿ ಬೇವನ್ನು 'ಅರಿಷ್ಟ' (*Azadirachta indica*) ಎಂದು ಕರೆಯುತ್ತಾರೆ. ಅಂದರೆ, ಪರಿಪೂರ್ಣ, ಸಂಪೂರ್ಣ ಮತ್ತು ನಾಶವಾಗದ ಎಂದರ್ಥ. ಇದನ್ನು 'ನಿಂಬ' ಎಂದೂ ಕರೆಯುತ್ತಾರೆ. ಇದು ಒಳ್ಳೆಯ ಆರೋಗ್ಯ ಕೊಡುತ್ತದೆ. ಇದು ಕುಷ್ಟರೋಗ ನಾಶಕ ಮತ್ತು ಚರ್ಮದ ಸೋಂಕುಗಳ ನಿವಾರಕ. ಸಂಸ್ಕೃತದ ಉಲ್ಲೇಖನಗಳಲ್ಲಿ ಬೇವಿನ ಔಷಧೀಯ ಗುಣಗಳನ್ನು ಮತ್ತು ಭಾರತೀಯ ವೈದ್ಯಕೀಯ ಪದ್ಧತಿಯಲ್ಲಿ ಇದರ ಉಪಯುಕ್ತತೆಗಳನ್ನು ಬಹಳ ಹಿಂದಿನಿಂದಲೂ ವಿವರಿಸಲಾಗಿದೆ. ಬೇವಿನ ಔಷಧೀಯ ಗುಣಗಳನ್ನು ಮತ್ತು ವೈದ್ಯಕೀಯ ಪದ್ಧತಿಯಲ್ಲಿ ಇದರ ಬಳಕೆ ಬಗ್ಗೆ ನಾಲ್ಕನೇ ಶತಮಾದ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಕಾಣಬಹುದು. ಪ್ರಾಕೃತಿಕ ಚಿಕಿತ್ಸೆ ಬುನಾದಿಯಾದ ಆಯುರ್ವೇದದ ಪುರಾತನ ದಾಖಲೆಗಳಾದ ಚರಕ' ಮತ್ತು 'ಶುಶ್ರೂಶ ಸಂಹಿತೆ'ಗಳಲ್ಲಿ ಬೇವಿನ ಔಷಧೀಯ ಗುಣಗಳನ್ನು ಪಟ್ಟಿ ಮಾಡಲಾಗಿದೆ.

ಬೇವು ಒಂದು ದೈವದತ್ತವಾದ ಹುಟ್ಟು. ಒಮ್ಮೆ, ಗರುಡ ದೇವನು ಅಮೃತವನ್ನು ಸಾಗಿಸುವಾಗ ಒಂದೆರಡು ತೊಟ್ಟುಗಳು ಈ ವೃಕ್ಷದ ಮೇಲೆ ಬಿದ್ದಿತೆಂಬ ನಂಬಿಕೆ ಇದೆ. ಮತ್ತೊಂದು ಕಥೆಯಲ್ಲಿ, ಇಂದ್ರನು, ಅಮೃತದ ಒಂದೆರಡು ತೊಟ್ಟನ್ನು ಭೂಮಿಯ ಮೇಲೆ ಮಾನವ ಕುಲಕ್ಕೆ ಬಹಳಷ್ಟು ವಿಧದಲ್ಲಿ ಇದರ ಉಪಯುಕ್ತವಾಗಲೆಂಬ ಹಾರೈಕೆಯೊಂದಿಗೆ, ಚಿಮುಕಿಸಿದ್ದರಿಂದ, ಬೇವಿನ

ಉತ್ಪತ್ತಿ ಆಯಿತೆಂದು ಹೇಳಲಾಗಿದೆ. ಇದರಲ್ಲಿ ಸಾಕ್ಷಾತ್ ಪರಮಾತ್ಮನ ಅವತಾರವಾದ ಧನ್ವಂತರಿಯ ಅಂಶವು ಇದೆ ಎಂದು ನಂಬಲಾಗಿದೆ. ಬೇವಿನ ವೃಕ್ಷದಲ್ಲಿ ಶಕ್ತಿ ದೇವತೆಗಳು ನೆಲೆಸಿರುವರೆಂದು ಹೇಳಲಾಗಿದೆ.

ಮುಖ್ಯವಾಗಿ ಬೇವು ಗಾಳಿಯನ್ನು ಶುದ್ಧೀಕರಿಸುತ್ತದೆ. ಇದನ್ನು ಹಳ್ಳಿಯ ಫಾರ್ಮಸಿ ಎಂದು ಹೇಳಲಾಗಿದೆ. ಚರ್ಮವ್ಯಾಧಿ, ಚಿಕನ್ ಪಾಕ್ಸ್, ಸ್ಮಾಲ್ ಪಾಕ್ಸ್‌ಗಳಿಗೆ ಬೇವು ರಾಮ ಬಾಣ. ಮಲೇರಿಯಾ ಮತ್ತು ಮಧುಮೇಹ ಕಾಯಿಲೆಗಳಿಗೂ ಇದನ್ನು ಬಳಸುತ್ತಾರೆ. ಇದರ ಬೇರು ಟೊಂಗೆಗಳನ್ನು, ದಂತ ಪಂಕ್ತಿಗಳನ್ನು ಶುದ್ಧೀಕರಿಸಲು ಇಂದಿಗೂ ಬಳಸಲಾಗುತ್ತಿದೆ. ಇದನ್ನು ರಾಸಾಯನಿಕ ಗೊಬ್ಬರವಾಗಿ ಬಳಸುತ್ತಾರೆ. ಯುಗಾದಿ ಹಬ್ಬದಂದು ಬೇವಿನ ಹೂಗಳೊಂದಿಗೆ ಬೆಲ್ಲವನ್ನು ಸೇರಿಸಿ ಭಗವಂತನಿಗೆ ಅರ್ಪಿಸಿ, **''ಶತಾಯುರ್ವಜ್ರದೇಹಾಯ ಸರ್ವಸಂಪತ್ಕರಾಯಚ । ಸರ್ವಾರಿಷ್ಟವಿನಾಶಾಯ ನಿಂಬಕಂದಳಭಕ್ಷಣಂ॥''** ಎಂಬ ಶ್ಲೋಕವನ್ನು ಉಚ್ಚರಿಸಿ, ಬೇವು ಬೆಲ್ಲ ಸೇವಿಸುವುದು ಸಂಪ್ರದಾಯ. ಕಾರಣ, ಇದರ ಔಷಧೀಯ ಗುಣಗಳು. ಭಾರತದ ಈಶಾನ್ಯ ಪ್ರಾಂತ್ಯದಲ್ಲಿನ ಆದಿವಾಸಿಗಳು ಇದರ ಎಲೆ ಮತ್ತು ಹಣ್ಣುಗಳನ್ನು ಕ್ಷಯ ಮತ್ತು ಹೃದಯ ರೋಗಗಳ ನಿವಾರಣೆಗಾಗಿ ಬಳಸುತ್ತಾರೆ.

ಕೆಲವೆಡೆಗಳಲ್ಲಿ ಗ್ರಾಮಸ್ಥರು, ಅಮಾವಾಸ್ಯೆಯ ದಿನದಂದು ಸಾಂಕೇತಿಕವಾಗಿ ಬೇವಿನ ವೃಕ್ಷಕ್ಕೂ ಅಶ್ವತ್ಥ ವೃಕ್ಷಕ್ಕೂ ವಿವಾಹ ಮಾಡುವ ಸಾಂಪ್ರದಾಯವಿದೆ. ಹೀಗೆ ಮದುವೆ ಮಾಡಿದ ಮೇಲೆ, ಗ್ರಾಮಸ್ಥರು ತಮ್ಮ ಪಾಪಗಳನ್ನು ಹೋಗಲಾಡಿಸುವಂತೆ ಭಕ್ತಿಯಿಂದ ಪ್ರದಕ್ಷಿಣೆ ಮಾಡುತ್ತಾರೆ. ಮಾನವ ಕುಲಕ್ಕೆ ಬಹಳ ವಿಧದಲ್ಲಿ ಉಪಯುಕ್ತವಾದ ಇಂತಹ ವೃಕ್ಷಗಳನ್ನು ನೆಟ್ಟು, ಪೋಷಿಸಿ, ಬೆಳೆಸಿ, ಧಾರ್ಮಿಕವಾಗಿಯೂ ಪೂಜೆಗಳನ್ನು ನಡೆಸಿ, ನಮ್ಮ ಪರಿಸರವನ್ನು ಕಾಪಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಲ್ಲವೇ? ಬನ್ನಿ, ಎಲ್ಲರೂ ಒಂದಾಗಿ, ವೃಕ್ಷರಾಜರನ್ನು ಆರಾಧಿಸೋಣ.

# ಸಸ್ಯ ಬಳಕೆಯ ಪ್ರಾಚೀನ ಉಲ್ಲೇಖಗಳು

**ಡಾ|| ಸತ್ಯನಾರಾಯಣ ಭಟ್ ಪಿ.**

ವೇದಗಳು ಸಹಸ್ರಾರು ವರ್ಷಗಳ ಹಿಂದಿನ ನಮ್ಮ ತಲೆಮಾರುಗಳ ಅನುಭವ ಸಾರ. ಅಂತಹ ವೇದೋಪನಿಷದ್‌ಗಳಲ್ಲಿ ಆಯಾ ಪರಿಸರದ ಜೀವ ವೈವಿಧ್ಯದ ದಾಖಲೆಗಳಿವೆ. ಅವುಗಳು ಇಂದಿಗೂ ನಮ್ಮ ಬದುಕಿಗೆ ಪೂರಕವಾಗಿವೆ.

ಅಭಯಾ, ಅದರಾ, ಅಜಶೃಂಗೀ, ಆಲ, ಅಲಾಬು, ಅಂಡಿಕಾ, ಅಪಾಮಾರ್ಗ, ಅಪರಾಜಿತಾ, ಅರ್ಕ, ಅರಲು, ಅರತ್ನೀ, ಅಶ್ವತ್ಥ, ಅರುಂಧತೀ ಹೀಗೆ ವೇದ ಸಂಹಿತೆಗಳಲ್ಲಿ ಸಸ್ಯಗಳ ವಿಶೇಷ ಪ್ರಸ್ತಾಪವಿದೆ. ಕಾಯಿಲೆ ಕಳೆಯುವ ಮತ್ತು ತಡೆಯುವ ಅಂತಹ ಸಸ್ಯಗಳು ಇಂದಿಗೂ ನಮ್ಮ ನಡುವೆ ಇವೆ ಎಂಬುದು ವಿಸ್ಮಯದ ಸಂಗತಿ.

ಚತುರ್ವೇದಗಳ ಪೈಕಿ ಅಥರ್ವ ವೇದದ ಸಸ್ಯ ಸಂಬಂಧ ವಿಪುಲತೆ ಅನೂಹ್ಯ. 'ಭೇಷಜಂವಾಥರ್ವಣಾನಿ' ಎಂಬ ತಾಂಡ್ಯಮಹಾಬ್ರಾಹ್ಮಣ ಸೊಲ್ಲಿದೆ. ಒಂದರ್ಥದಲ್ಲಿ ಅಥರ್ವ ವೇದವನ್ನು ಆಯುರ್ವೇದದ ಮೂಲ ನೆಲೆಗಟ್ಟು ಎಂದೇ ಭಾವಿಸಲಾಗುವುದು. ಮುಂಜಾ ಎಂಬ ಹುಲ್ಲು ದೇಹದ ಅಧೋಭಾಗದ ರಂಧ್ರಗಳ ವಿಕೃತ ಸೋರುವಿಕೆ ತಡೆಯಲು ಬಳಕೆಯಾಗುತ್ತಿದ್ದ ಕಾಲವಿತ್ತು. ವೇದೋಕ್ತ ವಿಧಿ ಸಹ ಅನಂತರದ ವೈದ್ಯ ಗ್ರಂಥಗಳ ಕಾಲದ ವಿದ್ಯಮಾನ ಗಮನಿಸಿ.

ಮುಂಜಾ ಮತ್ತು ಇತರ ನಾಲ್ಕು ಹುಲ್ಲುಗಳ ಬಳಕೆ ಆಯುರ್ವೇದ ಪ್ರಸಿದ್ಧ. ಅದು ಮೂತ್ರವಿಕಾರ, ಮೂತ್ರಾಂಗ ದೋಷ ಪರಿಹಾರಕ್ಕೆ ಮೀಸಲು. ತೃಣಪಂಚಮೂಲಾಸವ ಎಂಬ ಐದು ಬಗೆಯ ಹುಲ್ಲಿನ ಬೇರು ತಯಾರಿಕೆ ಬಳಕೆ ಆಯುರ್ವೇದದ ಸಂಹಿತೆಗಳದ್ದು. ಇಂದು ಮಾನಿಟಾಲ್ ಎಂಬ ದ್ರವವನ್ನು ಐಸೀಯೂ ರೋಗಿಗಳಿಗೆ ನಿರಂತರವಾಗಿ ರಕ್ತನಾಳದ ಮೂಲಕ ದೇಹಕ್ಕಿಳಿಸುತ್ತಾರೆ. ಇದರಿಂದ ಮಿದುಳಿನ ಉರಿಯೂತ ಇಳಿಕೆಯಾಗುತ್ತದೆ. ಅನಗತ್ಯ ದ್ರವ ದೇಹದಿಂದ ಹೊರಬೀಳುತ್ತದೆ. ದ್ರವಭಾಗ ಹೊರಹಾಕುವ ಇಂತಹ ದ್ರವದಲ್ಲಿ ಮಾನಿಟಾಲ್ ಶರ್ಕರಾಂಶ (ಗ್ಲೂಕೋಸು) ಮುಖ್ಯ. ಭತ್ತದ ಬೇರು ಕೂಡ ಮುಂಜಾ ಸಹಿತ ಇರುವ ಐದು ಬಗೆಯ ಹುಲ್ಲು ಬೇರುಗಳು. ಅಕ್ಕಿಯ ಶರ್ಕರ ಪಿಷ್ಟವೂ ಗ್ಲೂಕೋಸು ರೂಪಾಂತರ. ಇಂತಹ ಹುಲ್ಲು ಜಾತಿಯ ಸಸ್ಯಾವಯವಗಳ ಬಳಕೆ ಮತ್ತು ದೇಹದ ಅಧಿಕಾಂಶ ದ್ರವ ಸಂಚಯ ಮತ್ತು ಸ್ರಾವದ ಸಂಬಂಧಗಳ ಬಗ್ಗೆ

ಅಥರ್ವಣರಿಗೆ ತಿಳಿದಿತ್ತು. ಅಥರ್ವಣರು ವೇದಕಾಲದ ಅತಿಮಾನುಷ ವಿದ್ಯೆಯ ದ್ರಷ್ಟಾರರು, ವೈದ್ಯ ವಿಜ್ಞಾನಿಗಳು.

ಮುಂಜೀ ಎಂಬ ಸಂಸ್ಕಾರದಲ್ಲಿ ದರ್ಭಾ ಜಾತಿಯ ಹುಲ್ಲಿನ ಹುರಿಯನ್ನು ಬ್ರಹ್ಮಚಾರಿಯ ಹೊಕ್ಕುಳ ಕೆಳಗೆ ಸುತ್ತುವ ವಿಧಿಯಿದೆ. ಸಕ್ಕಾರಂ ಮುಂಜಾ ಎಂಬ ಹುಲ್ಲಿಗೆ ಲ್ಯಾಟಿನ್ ಹೆಸರೇ ಹಾಗಿದೆ. ಮುಂದೆ ವಿದ್ಯಾರ್ಜನೆಯ ಸಂದರ್ಭದಲ್ಲಿ ಇಂತಹ ಮೂತ್ರಾಂಗದ ಆಪತ್ತು ಬಾರದಿರಲಿ ಎಂಬ ಆಶಯ. ಬ್ರಹ್ಮಚರ್ಯಾಶ್ರಮದಲ್ಲಿ ರೇತಸ್ಸಿನ ತಡೆಯ ಆಶಯವೂ ಇರಬಹುದು. ಸದಾ ಕಾಲ ಚುಚ್ಚುವ ದರ್ಭಾ ಹುಲ್ಲಿನಿಂದ ದೇಹ ಮತ್ತು ಮನಸ್ಸಿನ ಜಾಗೃತಾವಸ್ಥೆ ಬ್ರಹ್ಮಚಾರಿಯದು.

ಇನ್ನೊಂದು ನಿದರ್ಶನವಿದೆ. ಅಲಾಬೂ ಎಂಬುದು ಸೋರೆ ಬುರುಡೆಯ ವೈದಿಕ ಹೆಸರು. ಸರ್ಪವಿಷ ನಾಶಕವಾಗಿ ಇದರ ಬಳಕೆ ಸಾರ್ವಕಾಲಿಕ. ಸಿದ್ಧ ಸಾಧಕರು ಸೋರೆಬುರುಡೆಯನ್ನು ಕತ್ತಿಗೆ ತೂಗುಹಾಕುತ್ತಿದ್ದರು. ಕಬೀರದೋಹಾ, ಬಸವಣ್ಣನ ವಚನದಲ್ಲಿ ಸಹ ಶೈವ ಸಿದ್ಧರ ತಾಂತ್ರಿಕರ ಲಾಂಛನ ಸೋರೆಬುರುಡೆ. ತಾಂಬಾ ತೂಂಬಾ ಎಂದು ಸಂತ ಕಬೀರರು ಕರೆದುದು ತಾಮ್ರದ ಗುಂಡು, ಸೋರೆಬುರುಡೆಯನ್ನು ವಚನದ ಸಾಲು ಹೀಗಿದೆ. 'ಕಾಲಲ್ಲಿ ಕಟ್ಟಿದ ಗುಂಡು, ಕೊರಳಲ್ಲಿ ಕಟ್ಟಿದ ಬೆಂಡು, ಮುಳುಗಲೀಯದು ಬೆಂಡು, ತೇಲಲೀಯದು ಚೆಂಡು.' ಇಲ್ಲಿ ಚೆಂಡು ತಾಮ್ರದ ಕಬ್ಬಿಣದ ಗುಂಡು. ಬೆಂಡು ಮತ್ತಾವುದೂ ಅಲ್ಲ. ಕೊರಳ ಲಾಂಛನ ಸೋರೆ ಬುರುಡೆ. ಹಾವಾಡಿಗರ ಸಾಧನ ಪುಂಗಿ. ಅದೂ ಸಹ ಸೋರೆಬುರುಡೆ. ಹೀಗೆ ಸೋರೆಬುರುಡೆಯು ಅನಾದಿ ಕಾಲದ ಮೆಡಿಕಲ್ ಕಿಟ್. ಅದರಲ್ಲಿದ್ದುದು ಸರ್ಪವಿಷ ಪರಿಹಾರಕ ಜೀವರಕ್ಷಕ ಮದ್ದುಗಳೂ ಸಹ. ಆಯುರ್ವೇದ ಸಂಹಿತೆಗಳನ್ವಯ ಅಲಾಬೂ, ಅರ್ಥಾತ್ ಕಹಿಸೋರೆಯು ಅತ್ಯುತ್ತಮ ವಾಂತಿಕಾರಕ ಸಸ್ಯ. ನಾಡವೈದ್ಯ ಮತ್ತು ಶಿಷ್ಟವೈದ್ಯದಲ್ಲಿ ಮೊದಲ ಹೆಜ್ಜೆ ವಾಂತಿ ಮಾಡಿಸುವುದೇ ಆಗಿದೆ. ಭದ್ರಾಚಲದ ಪೂರ್ವಘಟ್ಟಗಳ ವನವಾಸಿಗಳು ಅಡುಗೆ ಬಡಿಸಲು ಬಳಸುತ್ತಿದ್ದ ಅಪರೂಪದ ಸೌಟು ಕಂಡೆ. ಅದು ಸೋರೆಬುರುಡೆಯ ನೀಟಾಗಿ ಕತ್ತರಿಸಿದ ಅರೆ ಹೋಳು. ತುಂಬ ಸುಂದರ ಸೌಟದು. ಆಹಾರದ ಸರ್ವ ವಿಷಾಂಶ ಕಳೆಯಲು ಅದರ ಬಳಕೆಯ ಆಶಯವಿರಲೂ ಸಾಕು.

ಊರ್ಕು ಯಾನೆ ತಾಯಿತ ಕಟ್ಟುವ ಮತ್ತು ರೋಗ ನಿಯಂತ್ರಿಸುವ, ಕಳೆಯುವ ವಿಧಾನ ಅಥರ್ವವೇದ ಕಾಲದ್ದು. ಪುತುದ್ರು ಎಂಬ ಸುಗಂಧಭರಿತ ಪೈನ್ ಮರದ ಚಕ್ಕೆಯ ತಾಯಿತ ಕಟ್ಟಿ ಕಂದಮ್ಮಗಳ ನೆಗಡಿ, ಶೀತ ಸೋಂಕು ರೋಗ ತಡೆಯ ವಿಧಾನ ಅಥರ್ವ ವೇದದ್ದು. ದಶಕಗಳ ಹಿಂದೆ ಉಗ್ರಗಂಧಿ ಜಜ್ಜಿದ ಬೆಳ್ಳುಳ್ಳಿಯ ತಾಯಿತ ಕಟ್ಟಿ ಕಂದಮ್ಮಗಳ ನೆಗಡಿ, ಶೀತ ಸೋಂಕು ಕಳೆದದ್ದು ನಾನು ಕಂಡ ಅಥರ್ವಣ ವಿದ್ಯೆ. ಚಿಕ್ಕಬಳ್ಳಾಪುರ ಹೊರವಲಯದ ನಾಡವೈದ್ಯದ ಉಪಚಾರವದು. ಪೈಲ್ಸ್‌ಗೆ ಶೂಲಮಣಿ, ಕ್ಷೇತ್ರೀಯ ರೋಗಕ್ಕೆ ಹರಿಣಶೃಂಗ (ಜಿಂಕೆ ಕೊಂಬು). ಅದೇ ರೋಗಕ್ಕೆ ದಶವೃಕ್ಷ, ಮಲಬದ್ಧತೆಗೆ ಹರೀತಕಿ, ಜಯಾನ್ಯ ರೋಗಕ್ಕೆ ವೀರಣ (ಲಾವಂಚ), ದೀರ್ಘಜೀವನಕ್ಕೆ ಅಂಚನಮಣಿ, ಶಂಖಮಣಿ, ತಂತ್ರಿಮಣಿ ಧರಿಸುವ ವಿಧಾನ ಅಥರ್ವ ಯುಗದ ಅತಿಮಾನುಷ ಸಂಗತಿಗಳು.

ಸಸ್ಯಗಳ ರೂಪ, ಬಣ್ಣ, ಆಕಾರ, ಉತ್ಪತ್ತಿ ಮೂಲ ಮತ್ತು ಗುಣ ಧರ್ಮಗಳಿಗನುಗುಣವಾಗಿ ವಿಂಗಡನೆಯಾದ ನಿದರ್ಶನ ಅಥರ್ವವೇದ ಯುಗದ್ದು. ಅದು ೧೭ನೇ ಶತಮಾನದ ಲಿನ್ನೇಯನ್ ಟ್ಯಾಕ್ಸಾನಮಿಗಿಂತ ಹಲವು ಸಹಸ್ರ ವರ್ಷಗಳ ಪೂರ್ವದ ವಿದ್ಯಮಾನ! ಕೂದಲಿನ ಸಮಸ್ಯೆಗೆ ಸಹ ಪರಿಹಾರ ಸೂಚಿಸಿದ ಅಸಿಕ್ನೀ ಸಸ್ಯದ ನಿದರ್ಶನ ನಮ್ಮ ವೈದಿಕ ಸಂಸ್ಕೃತಿಯ ವೈಭವದ ಕುರುಹು. ಹಲವು ಹೆಸರುಗಳಲ್ಲಿಯೇ ಆಯಾ ಸಸ್ಯದ ಬಾಹ್ಯ ಪರಿಚಯದ ಸುಳಿವು ಸಿಗುವುದು. ಕೃಷ್ಣೀ, ಪೃಷ್ಣೀ, ಪ್ರಸ್ತ್ಯನಟಿ, ಸ್ತಂಬಿನೀ, ಏಕಶುಂಗ, ಪ್ರತಾನವತೀ, ಅಮುಷ್ಮತೀ, ಕಂದಿನೀ, ವಿಶಖಾ, ವೈಷ್ಣದೇವೀ, ಉಗ್ರಾ, ಆವಕಾ, ಉಲ್ವಾ, ತೀಕ್ಷ್ಣಶೃಂಗೀ, ಪುಷ್ಪವತೀ, ಪ್ರಸುಮತೀ, ಫಲಿನೀ, ಅಫಲಾ, ರೋಹಿಣೀ ಹೀಗೆ ಪಟ್ಟಿಬೆಳೆಯುತ್ತದೆ.

ಇಂದಿಗೂ ಆಯುರ್ವೇದೀಯರು ಅನೇಕ ರೋಗಗಳಿಗೆ ಸಸ್ಯ ಬಳಕೆ ಮಾಡುತ್ತಾರೆ. ಅರ್ಜುನ (ಬಿಳಿಮತ್ತಿ)–ಹೃದಯ ಕಾಯಿಲೆ ತಡೆ ಮತ್ತು ಪರಿಹಾರಕ್ಕೆ, ವರಣ ಅಥವಾ ನೀರುಮಾವು ಮರ – ಮೈಕೈ ಊದಿದ ಕಾಯಿಲೆಗೆ, ಯಷ್ಟಿಮಧು–ಬಾಯಿ ಹುಣ್ಣಿನಿಂದ ಹಿಡಿದು ಕ್ಯಾನ್ಸರ್ ಬಾವು ಪರಿಹಾರಕ್ಕೆ. ಕೂದಲ ಆರೋಗ್ಯಕ್ಕೆ ಬಳಸುವ ಭೃಂಗರಾಜಕ್ಕಿದೆ ಅಂತಹ ಇತಿಹಾಸ.

*ಲೇಖಕರು: ಪ್ರಾಚಾರ್ಯರು,*
*ಸರಕಾರಿ ಆಯುರ್ವೇದ ಮೆಡಿಕಲ್ ಕಾಲೇಜು, ಮೈಸೂರು–1*

# ಶ್ರೀ ತುಳಸಿ ಧಾತ್ರಿ ವಿವಾಹ

*ಮಂಜುಳ ಗೋಪಿನಾಥ್*

**ಯನ್ಮೂಲೇ ಸರ್ವತೀರ್ಥಾನಿ ॥ ಯನ್ಮಧ್ಯೇ ಸರ್ವದೇವತಾ ॥**
**ಯದಗ್ರೇ ಸರ್ವವೇದಶ್ಚ ॥ ತುಳಸಿ ತ್ವಾಂ ನಮಾಮ್ಯಹಂ ॥**




ಉತ್ಥಾನ ದ್ವಾದಶಿಯಂದು ತುಳಸಿಯ ಕಲ್ಯಾಣವನ್ನು ಭಾರತಲ್ಲಿ ಆಚರಿಸುವುದುಂಟು. ತುಳಸಿಯ ಬಗ್ಗೆ ಪದ್ಮ ಪುರಾಣದಲ್ಲಿ ೩೦ ಅಧ್ಯಾಯದಲ್ಲಿ ವಿವರಣೆ ಉಂಟು. ನಮ್ಮ ವೇದ ಶಾಸ್ತ್ರದಲ್ಲಿ ತುಳಸಿಗೆ ಅತ್ಯುತ್ತಮ ಸ್ಥಾನವಿದೆ. ತುಳಸಿಯ ದರ್ಶನ ಮಾತ್ರದಲ್ಲೇ ಸಕಲ ಪಾಪವು ನಾಶವಾಗುವುದು, ಮುಟ್ಟಿದರೆ ಸಾಕು ದೇಹ ಪಾವನವಾಗುವುದು, ಪೂಜಿಸಿದರೆ ಸಕಲ ರೋಗನಿವಾರಣೆಯಾಗುವುದು, ನೆಟ್ಟರೆ ಪರಮಾತ್ಮನ ಸಾನ್ನಿಧ್ಯ ದೊರಕುವುದು. ತುಳಸಿ ಇಲ್ಲದೆ ದೇವರ ಪೂಜೆ ಪೂರ್ಣವಾಗುವುದಿಲ್ಲ. ತುಳಸಿ ಇಲ್ಲದ ನೈವೇದ್ಯವನ್ನು ಪರಮಾತ್ಮನು ಸ್ವೀಕರಿಸುವುದಿಲ್ಲ. ದಾಸವರೇಣ್ಯರು ತುಳಸಿಯ ಬಗ್ಗೆ ಹೀಗೆ ವಿವರಿಸಿದ್ದಾರೆ:

೧. **ವೃಂದಾವನವೆ ಮಂದಿರವಾಗಿಹ ಇಂದಿರೆ ಶ್ರೀ ತುಳಸಿ**
**ನಂದನ ಕಂದ ಮುಕುಂದಗೆ ಪ್ರಿಯವಾದ ಚಂದಾದ ಶ್ರೀ ತುಳಸಿ**

೨. **ಒಲ್ಲನೋ ಹರಿ ಕೊಳ್ಳನೋ**
**ಎಲ್ಲ ಸಾಧನವಿದ್ದು ತುಳಸಿ ಇಲ್ಲದ ಪೂಜೆ**

ಸಾಕ್ಷಾತ್ ಶ್ರೀ ಮಹಾಲಕ್ಷ್ಮಿಯು ಅವತಾರವೇ ತುಳಸಿ. ಸಮುದ್ರ ಮಥನಕಾಲದಲ್ಲಿ ಧನ್ವಂತರಿ ರೂಪಿಯಾದ ಶ್ರೀಹರಿಯು ಅಮೃತವುಳ್ಳ ಸುವರ್ಣ ಕಳಶದೊಂದಿಗೆ ಪ್ರತ್ಯಕ್ಷವಾದಾಗ ಅವನ ಕಣ್ಣಿನಿಂದ ಹೊರಬಿದ್ದ ಆನಂದಾಶ್ರುವೇ ತುಳಸಿ ಎಂದು ಪುರಾಣಗಳಲ್ಲಿ ಹೇಳಲ್ಪಡುತ್ತದೆ. ಕಾರ್ತೀಕ ಹುಣ್ಣಿಮೆಯಂದು ಸೂರ್ಯೋದಯ ಕಾಲದಲ್ಲಿ ಹೀಗೆ ತುಳಸಿಯ ಜನನವಾಯಿತೆಂದು ಹೇಳಲ್ಪಟ್ಟಿದೆ. ತುಳಸಿಯು, ಶ್ರೀ ಕೃಷ್ಣನೇ ತನ್ನ ಪತಿಯಾಗಬೇಕೆಂದು ಬದರಿಯ ಪ್ರದೇಶದಲ್ಲಿ ಪರಮಾತ್ಮನ ಕುರಿತು ಉಗ್ರತಪಸ್ಸನ್ನು ಮಾಡಿದಳೆಂಬ ಪ್ರತೀತಿ ಇದೆ.

ಪದ್ಮ ಪುರಾಣದ ಪ್ರಕಾರ, ವೃಂದಾದೇವಿಗೆ ವೃಂದಾವನಿ, ವೃಂದ, ವಿಶ್ವಪೂಜಿತೆ, ಪುಷ್ಪಸಾರ, ನಂದಿನಿ, ಕೃಷ್ಣಜೀವನಿ, ವಿಶ್ವಪಾವನಿ, ತುಳಸಿ ಎಂಬ ೮ ನಾಮಾಂಕಿತಗಳಿವೆ. ಪುರಾಣದ ಪ್ರಕಾರ, ವೃಂದ ಎಂಬ ಕನ್ಯೆಯುನ್ನು

ಜಲಂಧರನೊಡನೆ ವಿವಾಹವಾಗುತ್ತದೆ. ಜಲಂಧರನು ತನ್ನ ಪತ್ನಿ, ಅತ್ಯಂತ ಪವಿತ್ರಳಾದ ವೃಂದಾಳ ಪಾತಿವ್ರತ್ಯದಿಂದ, ಬಲಶಾಲಿಯಾಗಿದ್ದು ದೇವತೆಗಳನ್ನು ಜಯಿಸಿರುತ್ತಾನೆ. ಸಾಕ್ಷಾತ್ ಮಹಾಶಿವನಿಂದಲೂ ಇವನನ್ನು ಸಂಹಾರ ಮಾಡಲಾಗಲಿಲ್ಲ. ಸಮುದ್ರ ಮಥನಕಾಲದಲ್ಲಿ ಸಿಕ್ಕಂತಹ ಅಮೂಲ್ಯವಾದ ವಸ್ತುಗಳನ್ನು ಕಸಿದುಕೊಳ್ಳಲು ರಾಕ್ಷಸರು ದೇವತೆಗಳ ವಿರುದ್ಧ ಯುದ್ಧ ಸಾರುತ್ತಾರೆ. ದೇವತೆಗಳು ಆಪದ್ಬಾಂಧವ ಶ್ರೀ ಮಹಾವಿಷ್ಣುವಿನ ಮೊರೆಹೋಗುತ್ತಾರೆ. ವಿಷ್ಣುವು ಜಲಂಧರನನ್ನು ಸಂಹರಿಸುತ್ತಾನೆ.

## ಪುರಾಣಗಳಲ್ಲಿ ನೆಲ್ಲಿಕಾಯಿ

ಉತ್ಥಾನ ದ್ವಾದಶಿಯಂದು ನೆಲ್ಲಿ ರೆಂಬೆಯನ್ನು ತುಳಸಿಯೊಂದಿಗೆ ಇಟ್ಟು ಪೂಜಿಸುವ ವಾಡಿಕೆ ಇದೆ. ಕಾರ್ತೀಕ ಮಾಸದಲ್ಲಿ ಪರಮಾತ್ಮನು 'ದಾಮೋದರ'ನೆಂಬ ನಾಮಾಂಕಿತದಲ್ಲಿ ನೆಲ್ಲಿಯ ಗಿಡದಲ್ಲಿ ವಾಸವಾಗಿರುತ್ತಾನೆಂಬ ನಂಬಿಕೆಯುಂಟು. ಇದಕ್ಕೂ ಒಂದು ಕಥೆಯುಂಟು. ಒಮ್ಮೆ ಪ್ರಳಯ ಕಾಲದಲ್ಲಿ, ಇಡೀ ಭೂಮಂಡಲವೇ ಮುಳುಗಿದ ಸಮಯದಲ್ಲಿ ಸಾಕ್ಷಾತ್ ಬ್ರಹ್ಮನು ಪದ್ಮಪೀಠದಲ್ಲಿ ಕುಳಿತು ಶ್ರೀಹರಿಯ ಧ್ಯಾನದಲ್ಲಿ ಮುಳುಗಿರುತ್ತಾನೆ. ಬ್ರಹ್ಮನ ತಪಸ್ಸಿಗೆ ಮೆಚ್ಚಿ, ಶ್ರೀಹರಿಯು ಪ್ರತ್ಯಕ್ಷನಾದಾಗ, ಬ್ರಹ್ಮದೇವನಿಗೆ ಸಂತೋಷದಿಂದ ಆನಂದಭಾಷ್ಪವಾಗುತ್ತದೆ. ಬ್ರಹ್ಮನ ಆನಂದಭಾಷ್ಪ ಬಿದ್ದ ಸ್ಥಳದಲ್ಲಿಯೇ ನೆಲ್ಲಿಯ ಜನನವಾಯಿತೆಂದು ಪುರಾಣಗಳು ಹೇಳುತ್ತದೆ.

ಬ್ರಹ್ಮನ ಮೊದಲ ಭಾಷ್ಪದಿಂದ ಜನಿಸಿದುದರಿಂದ, ನೆಲ್ಲಿಗೆ ಆದಿರೋಹ ಬ್ರಾಹ್ಮೀ ಎಂದೂ ಕರೆಯಲಾಗಿದೆ. ವನಸ್ಪತಿಗಳಲ್ಲಿ ಧಾತ್ರಿ ವೃಕ್ಷವು ಶ್ರೀಹರಿಗೆ ಅತ್ಯಂತ ಪ್ರಿಯವಾದ ವೃಕ್ಷವೆಂದೂ, ಧಾತ್ರಿಯ ಸೇವನೆಯಿಂದ ಗೋದಾನ ಫಲ ಪ್ರಾಪ್ತವಾಗುವುದೆಂದೂ, ಧಾತ್ರಿಯು ದೇವತೆಗಳ ಆವಾಸ ಸ್ಥಾನವೆಂದೂ ಪ್ರತೀತಿ ಇದೆ.

ಹೀಗೆ, ಕಾರ್ತೀಕ ಮಾಸದಲ್ಲಿ ಶ್ರೀಹರಿಯು ದಾಮೋದರನಾಗಿ ವಾಸಸ್ಥಾನವಾಗಿರುವ ನೆಲ್ಲಿಯೊಂದಿಗೆ ತುಳಸಿಯ ವಿವಾಹ ಮಹೋತ್ಸವವನ್ನು ಆಚರಿಸುತ್ತೇವೆ. ಹಿಂದೂ ಸಂಪ್ರದಾಯದ ಪ್ರಕಾರ ಉತ್ಥಾನ ದ್ವಾದಶಿಯಂದು ಸಂಧ್ಯಾಕಾಲದಲ್ಲಿ, ತುಳಸಿಯನ್ನು ಷೋಡಶೋಪಚಾರಗಳಿಂದ ಪೂಜಿಸುತ್ತಾರೆ.

**ಪ್ರಸೀದ ತುಳಸೀದೇವೀ ಪ್ರಸೀದ ಹರಿವಲ್ಲಭೇ ।**
**ಕ್ಷೀರೋದಮಥನೋದ್ಯೋತೇ ತುಳಸೀತ್ವಾಂ ನಮಾಮ್ಯಹಂ ॥**
**ಯಾದೃಷ್ಟಾನಿಖಿಲಾಘಸಂಗಶಮನೀ ಸ್ಪೃಷ್ಟಾವಪುಪಾವನೀ ।**
**ರೋಗಾಣಾಮಭಿವಂದಿತಾ ನಿರಸನಿ ಸಿಕ್ತಾಂತಕತ್ರಾಸಿನಿ ॥**

**ಪ್ರತ್ಯಾಸತ್ತಿವಿಧಾಯಿನೀ ಭಗವತಃ ಕೃಷ್ಣಸ್ಯ ಸಂರೋಪಿತಾ ।**
**ನ್ಯಸ್ತಾ ತಚ್ಚರಣೇ ವಿಮುಕ್ತಿಫಲದಾ ತಸ್ಯೈ ತುಲಸ್ಯೈ ನಮಃ ॥**

ಎಂದು ಪ್ರಾರ್ಥಿಸಿ, ಸಾಲಿಗ್ರಾಮವನ್ನು ತುಳಸಿಯ ಮುಂದಿಟ್ಟು ಸಕಲ ಮಂತ್ರೋಪಚಾರಗಳಿಂದ ಅರ್ಚಿಸಿ, ಸಾಕ್ಷಾತ್ ಶ್ರೀಹರಿಯು ವಾಸವಾಗಿರುವ ನೆಲ್ಲಿಯೊಂದಿಗೆ ಧಾತ್ರಿ ಮಂತ್ರವನ್ನು ಉಚ್ಚರಿಸಿ ವಿವಾಹ ಮಹೋತ್ಸವವನ್ನು ಆಚರಿಸುವುದು ವಾಡಿಕೆ.

**ಧಾತ್ರಿ ಪ್ರಾರ್ಥನಾ ಮಂತ್ರ**

**ದೇವೀ ಧಾತ್ರಿ ನಮಸ್ತುಭ್ಯಂ ಗೃಹಾಣ ಬಲಿಮುತ್ತಮಂ ।**
**ಮಿಶ್ರಿತಂ ಗುಡಸೂಪಾಭ್ಯಾಂ ಸರ್ವಮಂಗಲದಾಯಿನೀ ॥**
**ಪುತ್ರಾನ್ ದೇಹಿ ಮಹಾಪ್ರಾಜ್ಞಾನ್ ಯಶೋ ದೇಹಿ ನಿರಂತರಂ ।**
**ಪ್ರಜ್ಞಾಂ ಮೇಧಾಂ ಚ ಸೌಭಾಗ್ಯಂ ವಿಷ್ಣುಭಕ್ತಿಂ ಚ ದೇಹಿ ಮೇ ॥**
**ನೀರೋಗಂ ಕುರು ಮಾಂ ನಿತ್ಯಂ ನಿಷ್ಪಾಪಂ ಕುರು ಸರ್ವದಾ ।**
**ಸರ್ವಜ್ಞಂ ಕುರು ಮಾಂ ದೇವಿ ಧನವಂತಂ ತಥಾ ಕುರು ॥**

ವೈಜ್ಞಾನಿಕವಾಗಿಯೂ ಸಹ ತುಳಸಿ ಮತ್ತು ನೆಲ್ಲಿಯಲ್ಲಿ ಬಹಳಷ್ಟು ಔಷಧಿ ಗುಣಗಳಿರುವುದು ಸಂಶೋಧನೆಗಳಿಂದ ತಿಳಿದುಬಂದಿದೆ. ಸಾಮಾನ್ಯವಾಗಿ ಚರ್ಮವ್ಯಾದಿ, ನೆಗಡಿ, ಕೆಮ್ಮು ಇತ್ಯಾದಿಗಳಿಗೆ ಔಷಧಿಯಾಗಿ ತುಳಸಿಯನ್ನು ಬಳಸುತ್ತಾರೆ. ತುಳಸಿಯ ೪–೫ ದಳಗಳನ್ನು ಪ್ರತಿನಿತ್ಯ ಸೇವಿಸಿದರೆ, ದೇಹದ ರೋಗ ನಿರೋಧಕ ಶಕ್ತಿ ಹೆಚ್ಚಾಗುವುದರಿಂದ 'ಸ್ವೈನ್‌ಫ್ಲೂ' ಎಂಬ ಖಾಯಿಲೆಯನ್ನೂ ಸಹ ತಡೆಗಟ್ಟಬಹುದೆಂದು ಇತ್ತೀಚಿನ ಸಂಶೋಧನೆಗಳಿಂದ ತಿಳಿದುಬಂದಿದೆ. ಉಸಿರಾಟದ ತೊಂದರೆಗಳಿಗೆ ರಾಮತುಳಸಿಯ ಸೇವನೆಯು ಬಹಳ ಪರಿಣಾಮಕಾರಿ. ತುಳಸಿಯ ಮಣಿಯಲ್ಲಿಯೂ ಸಹ ಔಷಧಿಗುಣವಿರುತ್ತದೆ. ಶ್ರೀ ಕೃಷ್ಣನಿಗೆ ಬಹಳ ಪ್ರಿಯವೆಂದು ಸಾಮಾನ್ಯವಾಗಿ ದೇವರ ಪೂಜೆ ಮಾಡುವಾಗ ತುಳಸಿಯ ಮಣಿಯನ್ನು ಧರಿಸುತ್ತಾರೆ. ಆಯುರ್ವೇದದಲ್ಲಿ ತುಳಸಿಯನ್ನು ಹೆಚ್ಚಾಗಿ ಬಳಸಲಾಗುತ್ತಿದೆ. ತುಳಸಿಯನ್ನು Queen of Herbs – ಸಸ್ಯಗಳ ರಾಣಿ ಎಂದು ಪ್ರಸಿದ್ಧಿಯಾಗಿದೆ. ಉತ್ತಮ ಔಷಧಿಗುಣವುಳ್ಳ ತುಳಸಿಗೆ ಧಾರ್ಮಿಕವಾಗಿಯೂ ಪೂಜೆ ಸಲ್ಲಿಸಲಾಗುತ್ತಿದೆ. ಹಿಂದೂ ಧರ್ಮದ ಪ್ರತಿಯೊಂದು ಮನೆಯಲ್ಲಿಯೂ ತುಳಸಿಗೆ ಮನೆಯ ಮುಂದೆ ಸ್ಥಾನ ನೀಡಿ ಪೂಜಿಸುತ್ತಾರೆ. ತುಳಸಿಯ ದಳ, ಬೀಜ, ಕಾಷ್ಟ ಮತ್ತು ಮೃತ್ತಿಕೆ ಕೂಡ ಪಾವನವಾಗಿದೆ.

## ನೆಲ್ಲಿಯು ಒಂದು ಅದ್ಭುತ ವೃಕ್ಷ

ಪ್ರಕೃತಿ ಮಾತೆಯು ಮಾನವಕೋಟಿಗೆ ನೀಡಿದ ಉನ್ನತವಾದ ವರದಾನವೆಂದೇ ಹೇಳಬಹುದು. ನೆಲ್ಲಿಯು, ಭಾರತದ ಪ್ರಾಕೃತಿಕ ಉಪಶಮನ ಪದ್ಧತಿಯಲ್ಲಿ, ಸುಮಾರು ೫೦೦೦ ವರ್ಷಕ್ಕೂ ಹಿಂದಿನದ್ದಾಗಿದೆ. ಆಯುರ್ವೇದದಲ್ಲಿ ಇದಕ್ಕೆ ಹೆಚ್ಚಿನ ಬೆಲೆ ಕೊಡಲಾಗಿದೆ. ನೆಲ್ಲಿಕಾಯಿಯಲ್ಲಿ ವಿಟಮಿನ್ ಸಿ ಹಾಗೂ ನಾರಿನ ಅಂಶವು ಹೇರಳವಾಗಿದೆ. ನೆಲ್ಲಿಯಲ್ಲಿ ವಿಟಮಿನ್ ಎ ಮತ್ತು ಬಿ ಅಲ್ಲದೆ, ಕಬ್ಬಿಣಾಂಶ, ರಂಜಕ ಮತ್ತು ಸಾರಜನಕ ಸಹ ಇದೆ. ಒಂದು ಲೋಟ ನೆಲ್ಲಿಯ ರಸದಲ್ಲಿ, ಒಂದು ಲೋಟದ ಕಿತ್ತಳೆಯ ರಸದಲ್ಲಿರುವ ಸಿ ವಿಟಮಿನ್ನಿನ ೨೦ ಪಟ್ಟು ಹೆಚ್ಚಾಗಿರುವುದರಿಂದ ಆಯುರ್ವೇದದಲ್ಲಿ ನೆಲ್ಲಿಯನ್ನು ಆಧರಿಸಲಾಗಿದೆ. ವಿಟಮಿನ್ ಸಿ ಅಂಶವು ದೇಹದ ರೋಗ ನಿರೋಧಕ ಶಕ್ತಿಯನ್ನು ಕಾಪಾಡುತ್ತದೆ. ನೆಲ್ಲಿಯನ್ನು ಪ್ರತಿನಿತ್ಯ ಸೇವಿಸಿದರೆ, ರೋಗಾಣುಗಳ, ವಿಷಾಣುಗಳ ಹಾಗೂ ಫಂಗಸ್‌ಸೋಂಕನ್ನು ತಡೆಗಟ್ಟಬಹುದಾಗಿದೆ. ತಲೆಕೂದಲ ಸಂರಕ್ಷಣೆಗೂ ಹಾಗೂ ಚರ್ಮ ವ್ಯಾಧಿಗೂ ಇದನ್ನು ಉಪಯೋಗಿಸಲಾಗಿದೆ. ನೆಲ್ಲಿಯು ಮುಪ್ಪನ್ನು ಮುಂದೂಡುವುದಲ್ಲದೆ, ದೀರ್ಘಾಯುಷ್ಯವನ್ನು ಉತ್ತೇಜಿಸುತ್ತದೆ. ಉಸಿರಾಟದ ತೊಂದರೆಯಲ್ಲಿ ಇದರ ಬಳಕೆಯು ಉಪಯುಕ್ತವಾಗಿದೆ. ಇನ್ಸುಲಿನ್ ಅನ್ನು ಶೇಖರಿಸುವಲ್ಲಿ ನೆಲ್ಲಿಯು ಪ್ರಭಾವಶಾಲಿಯಾಗಿರುವುದರಿಂದ ಹಾಗೂ ಇದರಲ್ಲಿ ಕ್ರೋಮಿಯಂ ಅಂಶವೂ ಸಹ ಇರುವುದರಿಂದ, ಮಧುಮೇಹವನ್ನು ನಿಯಂತ್ರಣಗೊಳಿಸಬಹುದಾಗಿದೆ. ನೆಲ್ಲಿಯನ್ನು ಅಶ್ವಗಂಧ, ಬ್ರಾಹ್ಮಿಎಂದೂ ಕರೆಯುತ್ತಾರೆ. ನೆಲ್ಲಿಯು ರಕ್ತವನ್ನು ಶುದ್ಧೀಕರಿಸುತ್ತದೆ. ಇದರಲ್ಲಿರುವ ರೋಗ-ನಿರೋಧಕ ಶಕ್ತಿಯು ಮೆದುಳು, ಜಠರ ಹಾಗೂ ಹೃದಯವನ್ನೂ ಸಹ ಕಾಪಾಡುತ್ತದೆ.

ಬಹುವಿಧದ ಉಪಯುಕ್ತತೆಗಳಿರುವ ನೆಲ್ಲಿ ಅಥವಾ ಆಮ್ಲವನ್ನು ದಿನನಿತ್ಯದ ಸಮತೋಲನದ ಆಹಾರದಲ್ಲಿ ಸೇವಿಸಿದರೆ ವಜ್ರಶರೀರಿಗಳಾಗುತ್ತಾರೆ.

ನೆಲ್ಲಿಯಲ್ಲಿ ಸಾಕ್ಷಾತ್ ಭಗವಂತನ ಸಣ್ಣಿಧಾನ ಮತ್ತು ತುಳಸಿಯಲ್ಲಿ ಶ್ರೀ ಮಹಾಲಕ್ಷ್ಮಿಯ ಸನ್ನಿಧಾನವಿದೆ. ಉತ್ಥಾನ ದ್ವಾದಶಿಯಂದು ತುಳಸಿಯ ವಿವಾಹ ಆಚರಣೆಯಲ್ಲಿ ಧಾರ್ಮಿಕವಾಗಿಯೂ ವೈಜ್ಞಾನಿಕವಾಗಿಯೂ ಅರ್ಥವಿದೆ.

**ಶ್ರೀ ಕೃಷ್ಣಾರ್ಪಣಮಸ್ತು**

# ಭಾರತೀಯರ ಜೀವನ ಪದ್ಧತಿ

*ಜಿ.ವಿ. ಪ್ರಭಾಕರ ರಾವ್*

**ಆಶ್ರಮಗಳು ನಾಲ್ಕು :** ಬಾಲ್ಯ, ಯೌವನ, ವಾನಪ್ರಸ್ತ, ಸಂನ್ಯಾಸ (ಯೋಗ)

ಅತಿಥಿಗಳಿಗೆ, ದೇವರಿಗೆ ಮಾಡುವ ಹದಿನಾರು ಬಗೆಯ ಉಪಚಾರಗಳ ಪಟ್ಟಿ :

| | | | |
|---|---|---|---|
| ೧. ಆಚಮನ | ೫. ಸ್ನಾನ | ೯. ಯಜ್ಞೋಪವೀತ | ೧೩. ದೀಪ |
| ೨. ಪಾದ್ಯ | ೬. ಆಸನ | ೧೦. ಗಂಧ | ೧೪. ನೈವೇದ್ಯ |
| ೩. ಅರ್ಘ್ಯ | ೭. ವಸ್ತ್ರ | ೧೧. ಪರಿಮಳ ಪುಷ್ಪ | ೧೫. ನೀರಾಜನ |
| ೪. ಪುನರಾಚಮನ | ೮. ಆಭರಣ | ೧೨. ಧೂಪ | ೧೬. ಪ್ರದಕ್ಷಿಣ ನಮಸ್ಕಾರ |

**ಹದಿನಾರು ಬಗೆಯ ದಾನಗಳು :**

| | | | |
|---|---|---|---|
| ೧. ಗೋವು | ೫. ಆಭರಣ | ೯. ವ್ಯಜನ | ೧೩. ದೀಪ |
| ೨. ಭೂಮಿ | ೬. ಛತ್ರ | ೧೦. ಸಾಲಿಗ್ರಾಮ | ೧೪. ಪಾದುಕೆ |
| ೩. ಹಿರಣ್ಯ | ೭. ಚಾಮರ | ೧೧. ಧನ | ೧೫. ಆಜ್ಯ |
| ೪. ವಸ್ತ್ರ | ೮. ಶೈಯ್ಯೆ | ೧೨. ಧಾನ್ಯ | ೧೬. ಕನ್ಯ |

**ಹದಿನಾರು ಬಗೆಯ ಸಂಸ್ಕಾರಗಳು :**

| | | | |
|---|---|---|---|
| ೧. ಗರ್ಭಾದಾನ | ೫. ನಾಮಕರಣ | ೯. ಪ್ರಾಜಪತ್ಯ | ೧೩. ಗೋದಾನ |
| ೨. ಪುಂಸವನ | ೬. ಅನ್ನಪ್ರಾಶನ | ೧೦. ಸೌಮ್ಯ | ೧೪. ಸಮಾವರ್ತನ |
| ೩. ಸೀಮಂತ | ೭. ಚೌಲ | ೧೧. ಆಜ್ಞೇಯಃ | ೧೫. ವಿವಾಹ |
| ೪. ಜಾತಕರ್ಮ | ೮. ಉಪನಯನ | ೧೨. ವೈಶ್ವದೇವ | ೧೬. ಅಂತ್ಯೇಷ್ಟಿ |

## ಎಲ್ಲವೂ 'ಸ'ಕಾರಾತ್ಮಕ ಕ್ರಿಯೆಗಳು

೧. **ಸಂಪರ್ಕ :** ಸಹೃದಯ, ಶ್ರೀಮಂತ ಬಂಧುಗಳು ಸಮಾಜದ ಉನ್ನತ ಸ್ತರಗಳಲ್ಲಿರುವ ಮತ್ತು ಆರ್ಥಿಕವಾಗಿ ಮುಂದಿರುವ ನಾಗರೀಕರನ್ನು ಒಗ್ಗೂಡಿಸುವುದು. ಆರ್ಥಿಕವಾಗಿ ಹಿಂದುಳಿದಿದ್ದರೂ ಇವರು ಜ್ಞಾನಭಂಡಾರದಲ್ಲಿ ಶ್ರೀಮಂತರು.

೨. **ಸಹಯೋಗ :** ಎಲ್ಲಾ ವರ್ಗದ ಆಬಾಲವೃದ್ಧರ ಜೊತೆ ಕೂಡಿ ಧ್ಯೇಯಧೋರಣೆಗಳನ್ನು ಹಂಚಿಕೊಳ್ಳುವುದು. ಹಬ್ಬಹರಿದಿನಗಳಲ್ಲಿ ಭಾಗವಹಿಸುವುದು.

೩. **ಸಂಸ್ಕಾರ :** ವ್ಯಕ್ತಿಗಳ ಸದ್ಗುಣಗಳನ್ನು ಸಂಸ್ಥೆಯ ಧ್ಯೇಯಗಳಿಗೆ ಅನುಸಾರವಾಗಿ ಬಳಸಲು ಉತ್ತಮ ಸಂಸ್ಕಾರ ಅಗತ್ಯ. ಇದಕ್ಕಾಗಿ ವಿಚಾರಗೋಷ್ಠಿಗಳು ಭಾಷಣ ಮಾಲೆಗಳು ಮಹಾತ್ಮರ ಜೀವನದ ಅಭ್ಯಾಸ ಇತ್ಯಾದಿ ಕಾರ್ಯಕ್ರಮಗಳ ಯೋಜನೆ ಷೋಡಶ ಸಂಸ್ಕಾರಗಳನ್ನು ಅಭ್ಯಾಸ, ಷೋಡಶೋಪಚಾರ ಪೂಜೆ, ದಾನಗಳು, ಅತಿಥಿ ಸತ್ಕಾರ, ಮುಂತಾದ ಸಂಸ್ಕಾರಗಳ ಆಚರಣೆ.

೪. **ಸೇವಾ :** ಉಪಚಾರ, ಶುಶ್ರೂಷೆ

೫. **ಸಮರ್ಪಣೆ :** ಅರ್ಪಿಸುವಿಕೆ

# ಜೀವನ ಮೌಲ್ಯಗಳು

***ಕೆ. ಎಸ್. ವಿಜಯಕುಮಾರ್***

- ಶುಭ ಕಾರ್ಯವನ್ನು ಕೂಡಲೇ ಮಾಡು. ಅಶುಭ ಕಾರ್ಯವನ್ನು ಮಾಡಲು ಕಾಲಹರಣ ಮಾಡು.
- ಇತರರಿಗೆ ತೊಂದರೆ ಕೊಡದೆ, ದುಷ್ಟರಿಗೆ ತಲೆಬಾಗದೆ, ಉತ್ತಮರ ಮಾರ್ಗವನ್ನು ಅನುಸರಿಸಿ ನಡೆದರೆ ಅಲ್ಪವಾದದ್ದೂ ಮಹತ್ವಸಾಧನೆ.
- ಯಾರಿಗೆ ಯಾವ ಶ್ರದ್ಧೆಯೋ ಅವರು ಅದರಲ್ಲಿ ಪರಿಣಿತರಾಗುತ್ತಾರೆ. ಶ್ರದ್ಧೆ ಯಶಸ್ಸಿನ ಸೋಪಾನ. ಅದರ ಅನುಷ್ಠಾನಕ್ಕೆ ಸಂಕಲ್ಪ, ಸಾಧನೆಗಳು ಅನಿವಾರ್ಯ.
- ಚಿನ್ನವನ್ನು ನಾಲ್ಕು ಬಗೆಯಿಂದ ಪರೀಕ್ಷಿಸಿದಂತೆ (ತಿಕ್ಕುವುದು, ಕತ್ತರಿಸುವುದು, ಬಿಸಿ ಮಾಡುವುದು ಮತ್ತು ಹೊಡೆಯುವುದು) ಅದೇ ರೀತಿ ತ್ಯಾಗ, ಶೀಲ, ಗುಣ, ಒಳ್ಳೆ ಕೆಲಸಗಳಿಂದ ನಿಜವಾದ ಗುಣ ವಿಶೇಷಗಳು ತಿಳಿಯುತ್ತವೆ. ಒಳ್ಳೆಯ ಗುಣವಿದ್ದವರನ್ನು ಎಲ್ಲೆಲ್ಲೂ ಗೌರವಿಸಲ್ಪಡುತ್ತಾರೆ. ಕೇವಲ ಬುದ್ಧಿವಂತಿಕೆ, ಪಾಂಡಿತ್ಯ, ಶ್ರೀಮಂತಿಕೆ ಇದ್ದರೆ ಸಾಲದು. ಮನುಷ್ಯನ ಗುಣದಿಂದಲೇ ಆತನ ಸ್ಥಾನಕ್ಕೂ ಮಹತ್ವ. ಗುಣ ಎಂದರೆ ಸದ್ಗುಣ, ಬದುಕಿನಲ್ಲಿ ಇದುವೇ ಅತಿ ಹೆಚ್ಚಿನ ಆಸ್ತಿ.
- ಗುಣದಿಂದಲೇ ಮನುಷ್ಯನ ಬದುಕಿನ ಗತಿಯು ನಿರ್ಣಯವೂ ಆಗುತ್ತದೆ ಮತ್ತು ಜೀವನ ಮೌಲ್ಯವು ನಿಗದಿತವಾಗುವುದು.

೧) ಸತ್ವಗುಣ (ಸುಖಾತ್ಮಕ) : ಸ್ನೇಹ, ನೆಮ್ಮದಿ, ಶಾಂತಿ ತುಂಬಿರುತ್ತದೆ. ಕೆಟ್ಟದನ್ನು ಯೋಚಿಸಲಾರದವನಾಗಿರುತ್ತಾನೆ.

೨) ರಜೋಗುಣ (ದುಃಖಾತ್ಮಕ): ವಾತ್ಸಲ್ಯ, ಆತ್ಮೀಯ ಸ್ವಭಾವಗಳಿಂದ ತುಂಬಿರುತ್ತದೆ. ಆಸೆಯು ರಸಿಕತನದಿಂದ ಕೂಡಿರುತ್ತದೆ.

೩) ತಮೋಗುಣ (ವಿಷಾದಾತ್ಮಕ): ಮಂದಮತಿ, ಆಲಸ್ಯ ಕೋಪ, ಸ್ವಾರ್ಥದಿಂದ ಕೂಡಿರುತ್ತದೆ. ತ್ರಿಗುಣಾತೀತರಾದವರು ದೈವಿಕಬಾವ ಪಡೆಯುತ್ತಾರೆ. ಈ ಗುಣಗಳನ್ನು ದಾಟುವುದೇ ಮೋಕ್ಷ.

- ಪರೋಪಕಾರಕ್ಕಾಗಿಯೇ ಮರಗಳು ಫಲವನ್ನು ಕೊಡುತ್ತವೆ. ನದಿಗಳು ಹರಿಯುತ್ತವೆ. ಹಸುಗಳು ಹಾಲನ್ನು ಕೊಡುತ್ತವೆ. ಈ ಶರೀರವು ಇರುವುದು ಪರೋಪಕಾರಕ್ಕಾಗಿಯೇ.

- ತಿಳಿಯದೆ ಮಾಡಿದ ಪಾಪಕ್ಕೆ ಪಶ್ಚಾತ್ತಾಪವೇ ಸಾಕು. ಪಾಪಕರ್ಮಗಳನ್ನು ನಿವಾರಿಸಿಕೊಳ್ಳಲು ಹಲವು ಬಗೆಗಳು ಇವೆ.

೧) ಉಪವಾಸ, ದಾನ, ವ್ರತ, ತೀರ್ಥಯಾತ್ರೆ

೨) ಸುವರ್ಣದಾನ, ಗೋದಾನ, ಭೂದಾನ, ಧನದಾನ

೩) ಉಪವಾಸದಿಂದ ಶರೀರ ದಂಡನೆ ಹಾಗೂ ಮಾನಸಿಕ ಶುದ್ಧಿ.

೪) ತೀರ್ಥಯಾತ್ರೆಯಿಂದ ದೇವ ದೇವತೆಗಳ ದರ್ಶನ, ನದಿಗಳ ಪುಣ್ಯಸ್ನಾನ ಇವು ಮನಸ್ಸನ್ನು ಪ್ರಸನ್ನಗೊಳಿಸಿ ಮನಸ್ಸಿನ ಮಲ ತೊಳೆಯುತ್ತವೆ. ಮುಖ್ಯವಾಗಿ ಪಾಪದ ಕಳಂಕವನ್ನು ಮನಸ್ಸು ತೊಡೆದು ಹಾಕುತ್ತದೆ. ಭಕ್ತಿ ಮಾರ್ಗವು ಪಾಪಗಳನ್ನು ಕಳೆದುಕೊಳ್ಳಲು ಒಂದು ಮಾರ್ಗ.

- ಸುಖಿಗಳು ಯಾರು ಎಂದರೆ, ಯಾರು ಇತರರ ಸುಖದಲ್ಲೆ ಸುಖವನ್ನು ಕಾಣುತ್ತಾರೆ ಅವರೇ ನಿಜವಾದ ಸುಖಿಗಳು.
- ಸ್ವತಃ ಮನಸ್ಸಿನ ನಿಯಂತ್ರಣದಲ್ಲಿರುವುದೇ ಸುಖ, ಯಾವುದು ಹೊರಗಿನ ವಸ್ತುವಿನ ವಶವಿರುತ್ತದೆಯೋ ಅದು ದುಃಖ, ಅಂದರೆ ಯಾವುದು ನಮ್ಮ ವಶದಲ್ಲಿರುತ್ತದೆಯೋ ಅದೇ ಸುಖ ದುಃಖಗಳ ಲಕ್ಷಣ.
- ಶರೀರದ ಮಾನಸಿಕ ಸುಖಗಳಿಂದ ಕೂಡಿದ ಆಧ್ಯಾತ್ಮಿಕ ಸುಖ ಶ್ರೇಷ್ಠವಾದುದು. ಅದರಲ್ಲೆ ಹೆಚ್ಚು ಆನಂದವಿರುತ್ತದೆ.
- ಒಳ್ಳೆಯ ಮನಸ್ಸಿನಿಂದ ಮಾಡಿದ ಕಾರ್ಯದಿಂದ ಉಂಟಾಗುವುದೇ ಪುಣ್ಯ. ಇದರಿಂದ ನೈತಿಕ ಬಲ, ಆತ್ಮವಿಶ್ವಾಸ ಹೆಚ್ಚಾಗುತ್ತದೆ.
- ಪುಣ್ಯದ ಕೆಲಸಕ್ಕೆ ಪ್ರಚಾರ ಕೊಡಬಾರದು ಮತ್ತು ಸ್ವತಃ ಹೇಳಿಕೊಳ್ಳಬಾರದು.
- ಜೀವನದ ಸಾರ್ಥಕತೆ, ಸಂತೋಷ ಮತ್ತು ಆತ್ಮವಿಶ್ವಾಸವಿರುವುದು ಕಾರ್ಯಸಿದ್ಧಿ.
- ಯಾವನು ತನಗೆ ವಹಿಸಿಕೊಟ್ಟ ಕೆಲಸವನ್ನು ಸರಿಯಾಗಿ ಮಾಡಿ, ಆ ಕೆಲಸಕ್ಕೆ ತೊಂದರೆಯಾಗದಂತೆ ಇನ್ನೂ ಇತರರ ಕೆಲಸಗಳನ್ನು ಮಾಡುವನೊ ಅವನು ಕಾರ್ಯಗಳನ್ನು ಸಾಧಿಸಿ ತೋರಿಸಬಲ್ಲನು.
- ಕೆಲಸದ ನಡುವೆ ಆಲಸ್ಯ ಮಾಡುವುದು ಎಂದರೆ ಅದು ಕರ್ತವ್ಯಕ್ಕೆ ಅಡ್ಡಿಯಾಗುವುದು. ಕರ್ತವ್ಯ ಲೋಪದಿಂದ ಕಾರ್ಯಸಿದ್ಧಿ ಕೆಡುತ್ತದೆ.

- ಕಾರ್ಯ ಸಿದ್ಧಿಯಾಗಬೇಕಾದರೆ, ಬೇಸರವಿಲ್ಲದ ಉತ್ಸಾಹ, ದಕ್ಷತೆ, ಸೋಲನ್ನೊಪ್ಪಿಕೊಳ್ಳದ ಮನೋಭಾವ ಇವು ಬೇಕೆಂದು ಬಲ್ಲವರು ಹೇಳುತ್ತಾರೆ.
- ಉದ್ಯೋಗದಂಥ ಬಂಧು ಬೇರಿಲ್ಲ. ಉದ್ಯೋಗ ಮಾಡಿದವರು ದುಃಖ ಪಡಬೇಕಾಗಿಲ್ಲ.
- ಯುದ್ಧದಲ್ಲಿ ಮಾತ್ರ ವೀರನ ಯೋಗ್ಯತೆ ಗೊತ್ತಾಗುತ್ತದೆ. ಹೆಂಡತಿಯ ಗುಣ ಬಡತನದಲ್ಲಿ ಅರಿವಾಗುತ್ತದೆ. ಬಂಧು ಬಳಗದವರ ಹಣೆ ಬರಹವೂ ತಿಳಿಯುತ್ತದೆ.
- ನೂರುಳ್ಳವನು ಸಾವಿರವನ್ನು ಬಯಸುತ್ತಾನೆ. ಸಾವಿರವುಳ್ಳವನು ಲಕ್ಷವನ್ನು ಆಶಿಸುತ್ತಾನೆ. ಆಸೆ ಹೆಚ್ಚಾದಂತೆ ಮನುಷ್ಯನು ದುರ್ಬಲನಾಗುತ್ತಾನೆ.
- ಆಸೆಯೆಂಬ ಮನೋವ್ಯಾಪಾರ ಮನುಷ್ಯನ ಎಲ್ಲಾ ದುಃಖಗಳಿಗೂ ಮೂಲ ಕಾರಣ. ಆಸೆಗಳ ನಿಯಂತ್ರಣವೇ ಬದುಕಿನ ಶಿಸ್ತು. ಬಲವಾದ ಆಸೆಗಳು ಬಂದು ಆಕ್ರಮಣ ಮಾಡುವಾಗ ವಿವೇಕ, ವಿವೇಚನೆಗಳಿಂದ ಅವನ್ನು ತಡೆಯಬೇಕು. ಅದೇ ಬದುಕಿನ ಸಾಧನೆ.
- ಬಾಲ್ಯವನ್ನು ಆಟದಲ್ಲಿ, ತಾರುಣ್ಯವನ್ನು ಸುಖಭೋಗಗಳಲ್ಲಿ, ವಿಷಯಾಸಕ್ತಿಗಳಲ್ಲಿ, ಮುದಿತನವನ್ನು ಶಕ್ತಿಗುಂದಿದ ನಂತರ ಕಳೆಯುತ್ತಾರೆ. ಆತ್ಮವಿಮರ್ಶೆ ಮಾಡಿಕೊಂಡು ಜೀವನ ಸಾಗಿಸಬೇಕು. ಯಾರ ಮನಸ್ಸು ತೃಪ್ತಿಯನ್ನು ಹೊಂದಿರುತ್ತದೆಯೋ ಅವನಿಗೆ ಮೂರು ಲೋಕದ ಸಂಪತ್ತುಗಳೂ ಸಿಕ್ಕಿದಂತೆ.

**ಯೋಗದ ಎಂಟು ಹಂತಗಳು**

೧. ಯಮ (ನೀತಿ)
೨. ನಿಯಮ (ಶಿಸ್ತಿನಿಂದ ಆತ್ಮಶುದ್ಧಿ)
೩. ಆಸನ (ದೇಹದ ನಿಲುವು)
೪. ಪ್ರಾಣಾಯಾಮ
೫. ಪ್ರತ್ಯಾಹಾರ (ಇಂದ್ರಿಯಗಳ ನಿಗ್ರಹಣಶಕ್ತಿ)
೬. ಧಾರಣ (ಕೇಂದ್ರೀಕರಣ)
೭. ಧ್ಯಾನ (ಜಪ)
೮. ಸಮಾಧಿ (ಜಪದ ಧ್ಯೇಯವಾದ ಉಚ್ವಾಸ, ನಿಶ್ವಾಸಗಳ ಕ್ರಮಬದ್ಧ ಹತೋಟಿ, ಪರಮಾತ್ಮನಲ್ಲಿ ಸಾಧಕ ಐಕ್ಯ)

**ನಿಮ್ಮ ವ್ಯಕ್ತಿತ್ವ ಮನೋಧರ್ಮವನ್ನು ನಿಮ್ಮ ಕೈಗಳು ಸೂಚಿಸುತ್ತದೆ ಹೀಗೆ**

| ನಿಮ್ಮ ಕೈಗಳು | |
|---|---|
| ತಲೆಯ ಮೇಲ್ಭಾಗದಲ್ಲಿದ್ದರೆ | ಚಿಂತೆ |
| ಹಣೆಯ ಮೇಲ್ಭಾಗದಲ್ಲಿದ್ದರೆ | ಏಕಾಗ್ರತೆ |
| ಕಣ್ಣುಗಳ ಮೇಲ್ಭಾಗದಲ್ಲಿದ್ದರೆ | ದಣಿವು |
| ಮೂಗಿನ ಮೇಲಿದ್ದರೆ | ಪಶ್ಚಾತ್ತಾಪ |
| ಕಿವಿಯ ಮೇಲಿದ್ದರೆ | ಆಸಕ್ತಿ |
| ತುಟಿಗಳ ಮೇಲೆ | ವಿಸ್ಮಯ |
| ಗಲ್ಲದ ಮೇಲೆ | ಭೀತಿ |
| ಕತ್ತಿನ ಮೇಲೆ | ಅನ್ಯಸ್ಥಿತಿ |
| ಎದೆಯ ಮೇಲೆ | ಸ್ವಾಭಿಮಾನ |
| ಭುಜದ ಮೇಲೆ | ನಿಶ್ಚಿಂತತೆ |
| ಹೊಟ್ಟೆಯ ಮೇಲೆ | ದೃಢತೆ |
| ತೊಡೆಯ ಮೇಲೆ | ವಿಶ್ರಾಂತಿ |
| ಪಾದದ ಮೇಲೆ | ನಮ್ರತೆ |
| ಸೊಂಟದ ಮೇಲೆ | ದರ್ಪ |
| ಕೈ ಹಿಂದಕ್ಕೆ ಕಟ್ಟುವುದು | ನಿಸ್ಸಹಾಯಕತೆ |
| ಕೈ ಮುಂದಕ್ಕೆ ಕಟ್ಟುವುದು | ವಿಧೇಯತೆ |
| ಕೈ ಬೀಸಿ ನಡೆಯುವುದು | ಸ್ವೇಚ್ಛಾ ನಡತೆ |
| ಕೈ ತಟ್ಟುವುದು | ಸಂತೋಷ |
| ಕೈ ಕುಟ್ಟುವುದು | ರೋಷ, ಆವೇಶ |
| ಕೈ ಬೆರಳು ಆಡಿಸುವುದು | ಛಲ |
| ಕೈ ಬೀಸಿನೆಡೆಯುವುದು | ವಿಶ್ವಾಸ |

***ಲೇಖಕರು: ರಾಜ್ಯ ಸಂಘಟನಾ ಕಾರ್ಯದರ್ಶಿ***
***ಕರ್ನಾಟಕ ರಾಜ್ಯ ಶಿಕ್ಷಕರ ಪ್ರತಿಭಾ ಪರಿಷತ್ (ರಿ)***

# ಸಂಸ್ಕೃತಿಯ ಬೇರುಗಳಲ್ಲಿ ಪರಿಸರ ಜೀವವೈವಿಧ್ಯ

*ಡಾ. ಸತ್ಯನಾರಾಯಣ ಭಟ್ ಪಿ.*

ಆತ್ಮವತ್ ಸತತಂ ಪಶ್ಯೇತ್ ಅಪಿ ಕೀಟ ಪಿಪೀಲಿಕಾನ್ ಎಂಬ ಸೊಲ್ಲು ಆಯುರ್ವೇದ ಗ್ರಂಥ ಅಷ್ಟಾಂಗ ಹೃದಯದ್ದು. ಅದರ ಕಾಲ ಸುಮಾರು ಕ್ರಿ.ಶ. ೨ನೆಯ ಶತಮಾನ. ಅದರರ್ಥ ಪರಿಸರದ ಕೀಟ, ಇರುವೆಯಂತಹ ಜೀವಿಗಳನ್ನು ತನ್ನಂತೆಯೆ ಬಗೆಯಬೇಕು. ಬೌದ್ಧಯುಗದ ಈ ಗ್ರಂಥದಲ್ಲಿ ಒಡಮೂಡಿದ ಪರಿಸರ ಕಾಳಜಿ ಅನುಪಮ. ದೊಡ್ಡಬಳ್ಳಾಪುರದ ಹತ್ತಿರದ ಅರಳಿ ಕಟ್ಟೆಯ ಇರುವೆ ಸಾಲಿಗೆ ಸಕ್ಕರೆ ಉದುರಿಸಿದ ಮಹನೀಯರನ್ನು ಕಂಡಿದ್ದೇನೆ. ಕಲ್ಲು ನಾಗರ ಪ್ರತಿಷ್ಠಾಪನೆಯ ಪುಣ್ಯದಷ್ಟೆ ಅದು ಶ್ರೇಷ್ಟ ಅಲ್ಲವೆ? ಕಲ್ಲ ನಾಗರಕ್ಕೆರೆದ ಹಾಲು ಅಂತಿಮವಾಗಿ ತಲುಪುವುದು ಗೆದ್ದಲ ಕೀಟ ಪಿಪೀಲಿಕಗಳಿಗೆ ತಾನೆ! ಅಂದಹಾಗೆ ಬದುಕಿದ ನಾಗರಕ್ಕಿಂತ ಹೆಚ್ಚಿನ ಪೂಜೆ, ಆಚರಣೆ ನಾಗರ ಹಾವಿನ ಸಾವಿನ ಅನಂತರದ್ದು. ಸರ್ಪ ಸಂಸ್ಕಾರ ಎಂಬ ಅದ್ದೂರಿ ಆಚರಣೆ ತುಳುನಾಡಿನಲ್ಲಿದೆ. ಅದೇ ಸಂದರ್ಭದಲ್ಲಿ ಕಲ್ಲ ನಾಗರ ಬಿಂಬ ಪ್ರತಿಷ್ಟಾಪನೆ ಕೂಡಾ ಜರಗುತ್ತದೆ. ತಿಳಿದೋ ತಿಳಿಯದೆಯೋ ತಮ್ಮ ಜಮೀನು, ಮನೆಯ ಆಸುಪಾಸಿನ ಪರಿಸರದ ಹಾವಿನ ಸಾವಿಗೆ ಮಾಡಿಕೊಳ್ಳುವ ಪ್ರಾಯಶ್ಚಿತ್ತವೇ ಸರ್ಪ ಸಂಸ್ಕಾರ.

ಗೋಪೂಜೆಯ ಸಂದರ್ಭದಲ್ಲಿ ದೀವಳಿಗೆ ಹಬ್ಬದ ಆಚರಣೆ. ಬಸವಣ್ಣನ ಹಬ್ಬ ಸಂಕ್ರಾಂತಿಗೆ ಮೀಸಲು. ಮಣ್ಣೆತ್ತಿನ ಅಮಾವಾಸ್ಯೆ ಮಾತ್ರ ಅಲ್ಲ. ಪ್ರತಿ ಸೋಮವಾರ ಬಸವನಿಗೆ ನೊಗ ಹೂಡುವುದಿಲ್ಲ. ಶಿವ ವಾಹನ ನಂದಿಯನ್ನು ನಮ್ಮೂರಿನ ಬಸವನಲ್ಲಿ ಕಾಣುವ ಆದಿಮ ಪರಂಪರೆ ಇಲ್ಲಿದೆ. ಸಾಕುಪ್ರಾಣಿಗಳ ಪೈಕಿ ಎತ್ತು ಹಸುಗಳಿಗಿರುವ ಆದರ ಎಮ್ಮೆ ಕೋಣಗಳಿಗಿರಲಿಲ್ಲ. ಪ್ರಾಣಿ ಬಲಿಯನ್ನು ಮಧ್ಯಯುಗೀನ ತಾಂತ್ರಿಕ ಆಚರಣೆಗಳ ಅಂಗವಾಗಿ ಕಾಣುವೆವು. ಆಡು, ಕುರಿ, ಕೋಳಿ, ಕೋಣ ಬಲಿ ಇತ್ತೇ ವಿನಃ ಹಸು, ಎತ್ತುಗಳಿಗೆ ಅಂತಹ ದುರ್ಗತಿ ಒದಗುತ್ತಿರಲಿಲ್ಲ. ಅಂದಹಾಗೆ ವೇದ ಮತ್ತು ಪುರಾಣಯುಗದ ಅಶ್ವಮೇಧದ ಪಡಿಯಚ್ಚು ಇಂತಹ ಆಚರಣೆಯಲ್ಲಿ ಸುಸ್ಪಷ್ಟ. ಅಂದು ರಾಜ ಮಹಾರಾಜರು ಅಶ್ವಮೇಧ ಯಾಗದ ತರುವಾಯ ತಮ್ಮ ಕುಲವೃದ್ಧಿಗೆ, ತಮ್ಮ ಆಶೋತ್ತರ ಈಡೇರುವ ಬಗ್ಗೆ ವಿಶಿಷ್ಟ ಆಚರಣೆ ನಡೆಸುತ್ತಿದ್ದರು. ಇಲ್ಲಿ ಪ್ರಾಣಿ ಹಿಂಸೆ ವಿಜೃಂಭಿಸುತ್ತಿದ್ದುದು ನಿಜ. ರಾಜಾ ಪ್ರತ್ಯಕ್ಷ ದೇವತಾ ಎಂಬ ನಂಬಿಕೆಯ ಯುಗ

ಅದು. ರಾಜವಂಶದ ಒಳಿತಿಗೆ ನಡೆದ ಆಚರಣೆ ಅದು. ಅತ್ಯಂತ ಶಕ್ತಿಶಾಲಿ ಅಷ್ಟೆ ಅಲ್ಲ. ವೀರ್ಯ ಮತ್ತು ವೇಗಕ್ಕೆ ಇನ್ನೊಂದು ಹೆಸರು ಅಶ್ವ. ಅದರ ಹೆಸರಿನ ಅಧ್ವರ್ಯು ಅಂದಿನ ಕಾಲಮಾನದ ನಂಬಿಕೆ. ಉಚ್ಛೈಶ್ರವಸ್, ಶ್ವೇತಾಶ್ವತರೋಪನಿಷದ್ ಎಂಬಿತ್ಯಾದಿ ಪುರಾಣ ಹೆಸರಡಿ ಕುದುರೆಯ ಪ್ರಶಂಸೆ ಇದೆ. ಆಯುರ್ವೇದದ ಎಂಟು ಅಂಗಗಳ ಪೈಕಿ ಒಂದು ವಾಜೀಕರಣ. ಅಂದರೆ ಕುದುರೆಯಂತಹ ಓಜ, ತೇಜವನ್ನುಂಟುಮಾಡುವುದು. ಮನುಷ್ಯ ತನ್ನ ಅಸ್ತಿತ್ವದ ಸಲುವಾಗಿ ಪರಿಸರದ ಎಲ್ಲ ಜೀವಿಗಳನ್ನು ಬಳಸುವ ಪರಾಕಾಷ್ಠೆ ಇಲ್ಲಿದೆ.

ಹುಲಿ, ಕಾಡುಹಂದಿಯನ್ನು ಆರಾಧಿಸಿ ತಮ್ಮ ಕೃಷಿ ಚಟುವಟಿಕೆಗೆ ತೊಂದರೆ ತಡೆಯುವ ಜಾಣ್ಮೆ ಮಾನವನಲ್ಲಿತ್ತು. ಕರಾವಳಿಯ ದೈವಗಳ ಪೈಕಿ ಪಿಲಿಚಾಮುಂಡಿ ಮತ್ತು ಪಂಜುರ್ಲಿಯ ಆರಾಧನೆ ಅನೂಚಾನ. ಹುಲಿ ಮತ್ತು ಹಂದಿಯ ಪ್ರತಿರೂಪ ಅವು. ಕಾಡಿನ ಬಲಿಷ್ಠ ಪ್ರಾಣಿ ಆನೆಯ ಜತೆ ಸಂಘರ್ಷಕ್ಕಿಳಿಯದೆ ಅವುಗಳ ಜತೆ ಸಹಬಾಳ್ವೆ ನಡೆಸಿದವರು ನಾವು. ಗುರುವಾಯೂರಿನಲ್ಲಿ ಪ್ರಪಂಚದ ಅತ್ಯಂತ ಪ್ರಾಚೀನ ಗಜಶಾಲೆ ಇದ್ದ ದಾಖಲೆಗಳಿವೆ. ಮಹಾಭಾರತ ಕಾಲದ್ದು ಅದು. ತ್ರಿಷೂರಿನ ಪೂರಂ ಹಬ್ಬದಲ್ಲಿ ದೇವಾರಾಧನೆಗಿಂತ ಆನೆಗಳ ಮೆರವಣಿಗೆಗೆ ಒತ್ತು ಹೆಚ್ಚು. ಬಿಳಿಗಿರಿರಂಗನ ಮಕ್ಕಳಾದ ಸೋಲಿಗರು ರೊಟ್ಟಿಹಬ್ಬ ಎಂಬ ಆಚರಣೆ ಮಾಡುವರು. ಕಾಡಾನೆಗಳಿಗೆ ರಾಗಿ ರೊಟ್ಟಿ ಎಡೆ ಮಾಡುವ ಸಂಪ್ರದಾಯ ಅದು. ಆನೆಮೊಗದ ಗಣೇಶನ ಆರಾಧನೆಯಲ್ಲಿ ಆನೆ ಪ್ರೀತಿಯ ಆಚರಣೆ ಇದೆ. ಗರಿಕೆಯನ್ನು ಮೆದ್ದು ಆನಂದಿಸುವ ಆನೆಯ ಮೊಗದ ಗಣಪತಿಗೆ ಗರಿಕೆಯ ಅಲಂಕಾರ ಸಹಜ.

ಹನುಮಂತನನ್ನು ಕಪಿಗಳಲ್ಲಿ, ಜಾಂಬವಂತನನ್ನು ಕರಡಿಯಲ್ಲಿ ಕಾಣುವೆವು. ದ. ಕ. ಜಿಲ್ಲೆಯ ಬಂಟ್ವಾಳ ಪರಿಸರದ ಕಾಡಿನ ದೇಗುಲ ಕಾರಿಂಜೆ. ನಿತ್ಯ ಅಲ್ಲಿ ಕೋಡುಗಲ್ಲಿನ ತುದಿಯ ಮಂದಿರದ ನೈವೇದ್ಯ ಸಂತರ್ಪಣೆ ನಡೆಯುವುದು ಕಪಿಗಳಿಗೆ. ಅವುಗಳ ಭೋಜನ ಸಾಂಗಗೊಂಡ ಅನಂತರವೆ ಕೆಳ ದೇಗುಲದಲ್ಲಿ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ಇದೆ. ನವಿಲು ಮುರುಗನ ವಾಹನ. ಕಾಗೆ ಶನಿಯದು. ಗರುಡ ವಿಷ್ಣುವಿನದು. ಗಿಣಿ ಮೀನಾಕ್ಷಿಯ ಸಖಿ. ದುರ್ಗಾ ಮಾತೆ ಸಿಂಹವಾಹಿನಿ. ಮೂಷಿಕ ಸಂತತಿಯ ಪೂಜೆಗೆ ಬಿಕನೇರ್ ಕರ್ಣಿಮಾತಾ ದೇಗುಲವಿದೆ. ಮದುರೆಯ ಸನಿಹದ ತ್ರಿಪುರಕುಂಡ್ರದಲ್ಲಿ ಗರುಡನಿಗೆ ನೈವೇದ್ಯವಿದೆ. ಲಕ್ಷ್ಮಿಯ ವಾಹನ ಗೂಗೆ. ಕತ್ತೆಗಳಿಗೋ, ಕಪ್ಪೆಗಳಿಗೋ ಮದುವೆ ಮಾಡಿ ಬರದ ಸಂಕಷ್ಟ

ನೀಗಲು ಮಳೆದೇವನ ಪ್ರಾರ್ಥನೆ ಜನಪದ ಸಂಸ್ಕೃತಿ. ಹೀಗೆ ಪರಿಸರದ ಘಟಕಗಳೊಂದಿಗೆ ಸಹಬಾಳ್ವೆಯ ಅನೂಚಾನ ಪರಂಪರೆ ನಮ್ಮ ದೇಶದ ಗರಿಮೆ. ವಿಶ್ವದಲ್ಲಿ ಇನ್ನೆಲ್ಲೂ ಕಾಣದ ವಿಚಿತ್ರ.

ಅರಳಿ ಮರ ಮತ್ತು ಬೇವಿನಮರದ ಮದುವೆ ಮತ್ತು ಅವುಗಳಿಗೆ ಕಟ್ಟೆ ಕಟ್ಟಿ ಪೂಜಿಸುವ ಸಂಪ್ರದಾಯ ನಮ್ಮದು. ಅರಳಿಯನ್ನಂತೂ ಕಡಿಯದ ಪೂಜ್ಯ ಭಾವನೆ ನಮಗಿದೆ. ಯುಗಾದಿಯಲ್ಲಿ, ಮಾರಿ ಹಬ್ಬದಲ್ಲಿ, ಮೈಲಿಗೆ, ದಡಾರ ಮತ್ತು ಬಾಣಂತನದ ಉಪಚಾರಕ್ಕೆ ಬೇಕೇ ಬೇಕು ಬೇವು. ಮಾವು ಹಲಸಿನ ತುದಿಗಿದೆ ಪೂಜೆ, ಹವನದ ಪವಿತ್ರ ಬಳಕೆ. ಅವುಗಳಿಗೆ ಪಂಚ ಕ್ಷೀರೀ ವೃಕ್ಷ ಎಂಬ ಮದ್ದಿನ ಬಳಕೆಯ ಪಟ್ಟವಿದೆ. ನಾಲ್ಪಾಮರಾದಿ ತೈಲ, ಪಂಚ ವಲ್ಕಲ ಕಷಾಯ ಎಂಬ ಹೆಸರಿನ ಮದ್ದುಗಳ ಮೂಲ ಅವು. ಕೇವಲ ತುದಿ ಬಳಸಿ ಅದರ ರಾಸಾಯನಿಕ ಅಂಶಗಳಿಂದ ದೇಹಾರೋಗ್ಯ ಪಾಲಿಸುವ, ಕಾಯಿಲೆ ಕಳೆಯುವ ಜಾಣ್ಮೆ ನಮ್ಮವರಿಗಿತ್ತು. ದರ್ಭೆ, ಮುಂಜಾ ಎಂಬ ಹುಲ್ಲಿನ ಭೇದಗಳಿಂದಲೂ ಅನೇಕ ಕಾಯಿಲೆಗೆ ತಡೆ ಮತ್ತು ಪರಿಹಾರದ ಕಲೆ ಅಥರ್ವವೇದ ಯುಗದ್ದು. ಅಂತಹದರ ಬಳಕೆಯಿಂದ ಧಾರ್ಮಿಕ ಆಚರಣೆಗೆ ಇಂದೂ ಸಹ ಸ್ಥಾನವಿದೆ. ಅದು ಮೂಢನಂಬಿಕೆ ಅಲ್ಲ. ಪರಿಸರದ ಸಂಗತಿಗಳನ್ನು ಸುಸಂಗತವಾಗಿ ಯಥಾರ್ಥ ಬಳಸುವ ವಿದ್ಯೆ. ಆದರೆ ಅದರ ಜಾಡು ಅರಸಲು ನಮಗಿಂದು ಸಮಯವಿಲ್ಲ. ಕಳ್ಳಿಯ ತುದಿ, ಆಲದ ಟೊಂಗೆಯ ಹಾಲುಗಂಬ ಕಟ್ಟಿ ಮದುವೆ ಮುಹೂರ್ತ ಧಾರೆಯ ಸಂಪ್ರದಾಯವಿದೆ. ಅದು ಗಂಡು ಮತ್ತು ಹೆಣ್ಣಿನ ಮನ ಮತ್ತು ಮನೆ, ಕುಟುಂಬದ ಬೆಸುಗೆಯ ಆಶಯದ ಸಂಕೇತದ ತಾಂತ್ರಿಕ ಆಚರಣೆ. ಹೀಗೆ ಪರಿಸರದ ಪ್ರತಿಯೊಂದು ಜೀವ ವೈವಿಧ್ಯದಲ್ಲಿ ದೈವತ್ವ ಕಂಡವರು ನಾವು. ಅವುಗಳನ್ನು ಹಿತಮಿತವಾಗಿ ಬಳಸುವ ಮತ್ತು ಉಳಿಯಗೊಡುವ ಕಲೆ ನಮಗಿತ್ತು. ಅಂತಹ ಪರಿಸರ ಪ್ರೀತಿ ನಮಗಿರಲಿ. ಗಿಡ, ಮರ, ಪಕ್ಷಿ, ಪ್ರಾಣಿಗಳನ್ನು ನಮ್ಮಂತೆಯೆ ಭಾವಿಸೋಣ, ಗೌರವಿಸೋಣ.

*ಲೇಖಕರು: ಪ್ರಾಚಾರ್ಯರು,*
*ಸರಕಾರಿ ಆಯುರ್ವೇದ ಮೆಡಿಕಲ್ ಕಾಲೇಜು, ಮೈಸೂರು-1*

# ಸಂಸ್ಕಾರಗಳ ಆಚರಣೆಯಲ್ಲಿ ಕಾಲಗಣನೆಯ ಮಹತ್ವ

***ಇ. ಡಿ. ನರಹರಿ***

ಭಾರತೀಯರ ಸಂಸ್ಕೃತಿಯಲ್ಲಿ ಸಂಸ್ಕಾರಗಳಿಗೆ ಅತಿ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ. ಗರ್ಭಾದಾನ – ಅಂದರೆ ಗರ್ಭಾಂಕುರದಿಂದ ಪ್ರಾರಂಭಗೊಂಡು ಅಂತ್ಯೇಷ್ಟಿ ಅಂದರೆ ಮರಣ ಕಾಲದವರೆಗೆ ವ್ಯಕ್ತಿಯ ಜೀವನದಲ್ಲಿ ಆತನ ಶ್ರೇಯಸ್ಸಿಗಾಗಿ ಹಾಗೂ ಪರಮಾತ್ಮನ ಅನುಗ್ರಹವನ್ನು ಪಡೆಯುವುದಕ್ಕಾಗಿ ಹಲವಾರು ಸಂಸ್ಕಾರಗಳನ್ನು ಆಚರಿಸಲಾಗುತ್ತದೆ. ಈ ಸಂಸ್ಕಾರಗಳ ಆಚರಣೆಗೆ ಭಾರತೀಯ ಪದ್ಧತಿಯ ಕಾಲಗಣನೆ ತುಂಬಾ ಮುಖ್ಯ. ಯಾವುದೇ ಸಂಸ್ಕಾರವನ್ನು ಆಚರಿಸಬೇಕಾದರೂ "ಮುಹೂರ್ತ"ವನ್ನು ಮೊದಲು ನಿರ್ವಹಿಸಬೇಕಾಗುತ್ತದೆ. ಏನಿದು ಮುಹೂರ್ತ ? ಯಾವುದೇ ಕಾಲಘಟ್ಟದಲ್ಲಿ ಯಾವುದೇ ಕ್ಷಣದಲ್ಲಿ ಖಗೋಳಕಾಯಗಳ ಚಲನೆಯ ಸ್ಥಾನವನ್ನು ಗುರುತಿಸಿ ಅವುಗಳು ಸಂಸ್ಕಾರಕ್ಕೆ ಒಳಪಡುವ ವ್ಯಕ್ತಿಯ ಮೇಲೆ ಬೀರುವ ಶುಭ ಪರಿಣಾಮಗಳನ್ನು ನಿರ್ಧರಿಸುವ ಕ್ಷಣವನ್ನು ಮುಹೂರ್ತವೆಂದು ಕರೆಯುವರು.

ನಮ್ಮ ಭಾರತೀಯ ಪದ್ಧತಿಯ ಕಾಲಗಣನೆಯು ಅತ್ಯಂತ ವೈಜ್ಞಾನಿಕವಾಗಿದ್ದು ಆಧುನಿಕ ಆವಿಷ್ಕಾರಗಳಿಗೆ ಸುಸಂಬದ್ಧವಾಗಿ ತಾಳೆಯಾಗುತ್ತದೆ. ಕ್ರಿ.ಶ. ಹದಿನೈದು ಹದಿನಾರನೆಯ ಶತಮಾನದವರೆಗೂ ಅಂದರೆ ಗೆಲಿಲಿಯೋ ಕೋಪರ್ನಿಕಸ್‌ಗಳ ಕಾಲದವರೆಗೂ ಪಾಶ್ಚಾತ್ಯರಿಗೆ ಭೂಮಿಯ ಗೋಳಾಕಾರದ ಬಗ್ಗೆ ಅರಿವಿರಲಿಲ್ಲ. ಭೂಮಿಯು ಒಂದು ಚಪ್ಪಟೆಯಾದ ಕಾಯವೆಂದೂ, ಸೂರ್ಯನೂ ಮತ್ತಿತರ ಆಕಾಶಕಾಯಗಳೂ ಭೂಮಿಯ ಸುತ್ತಲೂ ಪರಿಭ್ರಮಿಸುವುದೆಂದೂ ಅವರು ಭಾವಿಸಿದ್ದರು. (geo stationary concept) ಆದರೆ ಪ್ರಾಚೀನ ಭಾರತೀಯರಿಗೆ ಭೂಮಿಯ ಗೋಳಾಕಾರದ ಬಗ್ಗೆ ಮಾತ್ರವೇ ಅಲ್ಲದೆ ಸೂರ್ಯಮಂಡಲದ ಇತರ ಗ್ರಹಗಳು ಮತ್ತು ಸೂರ್ಯನ ಸುತ್ತ ಅವುಗಳ ಪರಿಭ್ರಮಣ ಮತ್ತು ಭೂಮಿಯು ತನ್ನ ಅಕ್ಷದ ಸುತ್ತ ಬುಗುರಿಯಂತೆ ಸುತ್ತುವುದು (ಆವರ್ತನ) ಮುಂತಾದ ಹಲವಾರು ಖಗೋಳ ಕ್ರಿಯೆಗಳ ಬಗ್ಗೆಯೂ ಅವರಿಗೆ ಅರಿವು ಇದ್ದಿತು. ಇಂದಿನ ಖಗೋಳ ಕಾಯಗಳ ವೀಕ್ಷಣಗೆ ನೆರವಾಗಬಲ್ಲ ಟೆಲಿಸ್ಕೋಪ್ ಮೊದಲಾದ ಯಾವ ಸಾಧನಗಳೂ ದೊರೆಯದಿದ್ದಂತಹ ಕಾಲದಲ್ಲಿ ಕೇವಲ ನಕ್ಷತ್ರ ವೀಕ್ಷಣೆಯಿಂದಲೇ ಇಂತಹ ಮಹತ್ತರ ಆವಿಷ್ಕಾರಗಳನ್ನು ಅವರು ಸಾಧಿಸಿದ್ದರು.

ಇಂತಹ ಖಗೋಳ ಕ್ರಿಯೆಗಳ ಆಧಾರದ ಮೇಲೆ ಅವರು ಕಾಲಗಣನೆಯ "ಪಂಚಾಂಗ"ವನ್ನು ರಚಿಸಿದರು. ಪಂಚಾಂಗವೆಂದರೆ ಒಂದು ದಿನದ ಐದು ಅಂಗಗಳು. ತಿಥಿ, ವಾರ, ನಕ್ಷತ್ರ, ಯೋಗ ಮತ್ತು ಕರಣ ಇವೇ ಆ ಐದು ಅಂಗಗಳು. ಈ ಪರಿಭ್ರಮಣ ಮತ್ತು ಆವರ್ತನ ರೀತಿಯ ಎರಡು ಬಗೆಯ ಚಲನೆಗಳಿಂದಾಗಿ ಭೂಮಿಯ ಮೇಲಿರುವ ನಮಗೆ ಆಕಾಶದಲ್ಲಿ ಗ್ರಹಗಳೂ, ನಕ್ಷತ್ರಗಳೂ ದಿನ ಗತಿ ಮತ್ತು ವಾರ್ಷಿಕ ಗತಿಗಳಲ್ಲಿ ಭೂಮಿಯು ಸುತ್ತಲೂ ಚಲಿಸುತ್ತಿರುವಂತೆ ಭಾಸವಾಗುತ್ತದೆ. ಆಕಾಶದಲ್ಲಿ ಸೂರ್ಯನು ಚಲಿಸುವ ವೃತ್ತಾಕಾರದ ಹಾದಿಗೆ ಕ್ರಾಂತಿ ವೃತ್ತ ಅಥವಾ ecliptic path ಎಂದು ಹೆಸರು. ಈ ವೃತ್ತದ ಪರಿಧಿ ಒಟ್ಟು ೩೬೦ ಅಂಶಗಳು (ಡಿಗ್ರಿಗಳು). ಸೂರ್ಯನು ದಿನಕ್ಕೆ ಒಂದು ಅಂಶದಷ್ಟು ದೂರ ಚಲಿಸಿದರೆ ಚಂದ್ರನು ಸರಾಸರಿ ಹದಿಮೂರು ಅಂಶಗಳಷ್ಟು ದೂರ ಚಲಿಸುವನು. ಹೀಗೆ ಈ ಎರಡು ಕಾಯಗಳ ಚಲನೆಗೆ ತಗಲುವ ಕಾಲವನ್ನು ಒಂದು ತಿಥಿ ಎಂದು ಕರೆಯುವರು.

"ವಾರ" ಎಂದರೆ ಅವಧಿ ಎಂದು ಹೇಳಬಹುದು. ದಿನದ ೧/೨೪ ಭಾಗವು ಒಂದು "ಹೋರೆ". ನಾವು ಭಾರತೀಯರು ದಿನದ ಆರಂಭವನ್ನು ಸೂರ್ಯನ ಉದಯದಿಂದ ಗುರ್ತಿಸುತ್ತೇವೆ. (ಪಾಶ್ಚಾತ್ಯರು ಮಧ್ಯರಾತ್ರಿ ಗಂಟೆಯಿಂದ ದಿನದ ಆರಂಭವನ್ನು ಲೆಕ್ಕ ಮಾಡುತ್ತಾರೆ. ಇದಕ್ಕೆ ಯಾವ ಖಗೋಳ ವಿದ್ಯಮಾನದ ಆಧಾರವೂ ಇಲ್ಲ). ಸೂರ್ಯನ ಉದಯ ಕಾಲದಿಂದಲೇ ಹೋರೆಗಳ ಲೆಕ್ಕವು ಆರಂಭವಾಗುವುದು. ಮೊದಲನೆಯ ಹೋರೆಗೆ ಆ ದಿನ ಯಾವ ಗ್ರಹ ಅಧಿಪತಿಯಾಗಿರುವುದೋ ಆ ದಿನಕ್ಕೆ ಆ ಗ್ರಹದ ಹೆಸರಿರುವುದು. ಕ್ರಾಂತಿ ವೃತ್ತದಲ್ಲಿ ಒಂದು ಸುತ್ತು ತಿರುಗಲು ಗ್ರಹಗಳಿಗೆ ಬೇಕಾಗುವ ಕಾಲವನ್ನು ಆಧರಿಸಿ ವಾರದ ರಚನೆ ಮಾಡಲಾಗಿದೆ.

ಭೂಮಿಯ ಮೇಲೆ ನಿಂತು ನಾವು ನೋಡುವಾಗ ಚಂದ್ರ ಯಾವುದಾದರೂ ಒಂದು ನಕ್ಷತ್ರದ ಎದುರು ಹೋಗುತ್ತಿರುವಂತೆ ಭಾಸವಾಗುತ್ತದೆ. ಹೀಗೆ ಚಂದ್ರನ ಜೊತೆಗೆ ಇರುವಂತೆ ಕಾಣುವ ನಕ್ಷತ್ರ ಆ ದಿನದ ನಿತ್ಯ ನಕ್ಷತ್ರ. ನಾವು ಹುಟ್ಟಿದ ದಿನ ಯಾವುದು ನಿತ್ಯ ನಕ್ಷತ್ರವಾಗಿತ್ತೊ ಅದು ನಮ್ಮ ಜನ್ಮ ನಕ್ಷತ್ರ. ಆ ನಕ್ಷತ್ರದ ರಾಶಿಯೇ ನಮ್ಮ ಜನ್ಮ ನಕ್ಷತ್ರ.

ಯೋಗ ಎಂದರೆ ಕೂಡುವಿಕೆ ಎಂದರ್ಥ. ಸೂರ್ಯನ ಮತ್ತು ಚಂದ್ರನ ದೈನಂದಿನ ಗತಿಗಳ ಒಟ್ಟು ಮೊತ್ತ ೧೩ ೧/೩ ಅಂಶಗಳು ಅಂದರೆ ೧೩ ಡಿಗ್ರಿ ೨೦ ನಿಮಿಷಗಳು. ಇದು ಒಂದು ಯೋಗ. ನಮ್ಮ ಪಂಚಾಂಗಗಳ ಪ್ರಕಾರ ಒಟ್ಟು ೨೭ ಯೋಗಗಳಿವೆ.

ಒಂದು ತಿಥಿಯ ಅರ್ಧ ಭಾಗವು ಒಂದು ಕರಣವೆನಿಸುವುದು. ಒಂದು ಮಾಸದ ೩೦ ತಿಥಿಗಳಿಗೆ ೬೦ ಕರಣಗಳು. ಶುಕ್ಲಪಕ್ಷದ ಪಾಡ್ಯದ ಉತ್ತರಾರ್ಧದಿಂದ ಆರಂಭಿಸಿ ಕೃಷ್ಣಪಕ್ಷದ ಚತುರ್ದಶಿಯ ಪೂರ್ವಾರ್ಧದವರೆಗೆ ಒಟ್ಟು ೫೬ ಕರಣಗಳು. ಇವುಗಳಿಗೆ ಬವ ಬಾಲವ ಹೀಗೆ ಏಳು ಹೆಸರುಗಳುಂಟು. ಇವು ಇವೇ ಕ್ರಮದಲ್ಲಿ ಒಂದಾದ ಮೇಲೊಂದು ಬರುತ್ತ ೮ ಸಲ ಆವೃತ್ತಿಯಾಗುವಂತೆ ಮೊದಲನೆಯ ೫೬ ಕರಣಗಳಿಗೆ ಹೆಸರನ್ನು ನೀಡಲಾಗಿದೆ. ಇನ್ನು ಉಳಿದ ೪ ಕರಣಗಳು ಅಂದರೆ ಕೃಷ್ಣಪಕ್ಷದ ಚತುರ್ದಶಿಯ ಉತ್ತರಾರ್ಧ, ಅಮಾವಾಸ್ಯೆಯ ಎರಡು ಕರಣಗಳು ಮತ್ತು ಶುಕ್ಲಪಕ್ಷದ ಪಾಡ್ಯದ ಪೂರ್ವಾರ್ಧ – ಇವು ಸ್ಥಿರ ಕರಣಗಳು. ಏಕೆಂದರೆ ಇವು ಒಂದು ಮಾಸದಲ್ಲಿ ಮತ್ತೆ ಬರುವುದಿಲ್ಲ.

ಪಂಚಾಂಗಗಳಲ್ಲಿ ಪ್ರತಿದಿನದ ತಿಥಿ ನಕ್ಷತ್ರ, ಯೋಗ ಮತ್ತು ಕರಣಗಳ ಅವಧಿಯನ್ನು ಘಳಿಗೆಗಳಲ್ಲಿ ಕೊಡಲಾಗುವುದು. ಒಂದು ಘಳಿಗೆಗೆ ಸುಮಾರು ೨೪ ನಿಮಿಷಗಳು. ಸೂರ್ಯೋದಯದಿಂದ ನಮ್ಮ ದಿನದ ಆರಂಭವಾಗುವುದು. ಉದಾಹರಣೆಗೆ ಈ ದಿನ ಸೂರ್ಯೋದಯವು ಮುಂಜಾನೆ ೬.೩೦ಕ್ಕೆ ಆಗಿದೆ. ಪಂಚಾಂಗದಲ್ಲಿ ಈ ದಿನದ ಅವಧಿ ೩೨ ಘಳಿಗೆಗಳು ಎಂದು ಹೇಳಿದೆ. ಸೂರ್ಯೋದಯದಿಂದ ೩೨ ಘಳಿಗೆಗಳ ಕಾಲ ಎಂದರೆ ೩೨ x ೨೪ ಅಂದರೆ ೭೬೮ ನಿಮಿಷಗಳಾದವು. ಅಂದರೆ ೧೨ ಗಂಟೆ ೪೮ ನಿಮಿಷಗಳ ಕಾಲ. ಆದ್ದರಿಂದ ೬.೩೦ a.m. + ೧೨.೪೮ ಅಂದರೆ ಸಾಯಂಕಾಲ ೭ ಗಂಟೆ ೧೮ ನಿಮಿಷದವರೆಗೆ ಆ ದಿನದ ತಿಥಿಯು (ಉದಾ: ಚತುರ್ಥಿ) ಕಾಲ ಎಂದು ತಿಳಿಯಬೇಕು. ಸಾಮಾನ್ಯವಾದ ಕರ್ಮ ಕಲಾಪಗಳಿಗೆ ಸೂರ್ಯೋದಯದ ಕಾಲದಲ್ಲಿ ಇದ್ದ ತಿಥಿ ಮತ್ತು ನಕ್ಷತ್ರ, ಕರಣ ಮತ್ತು ಯೋಗಗಳನ್ನೇ ಇಡೀ ದಿನದ ತಿಥಿ, ಮುಂತಾದವುಗಳೆಂದು ಗಣಿಸಲಾಗುವುದು.

ಕಾಲವಕ್ಷಯ ದೀಪವದರ ಪಾತ್ರೆಯಪಾರ
ಬಾಳದರಿನಾದೊಂದು ಕಿರು ಹಣತೆ ದೀಪ
ಗಾಳಿಯಾರಿಪುದೊಂದ ನಿನ್ನೊಂದ ಹಚ್ಚಿಪುದು
ತೈಲಧಾರೆಯಖಂಡ – ಮಂಕುತಿಮ್ಮ

*ಲೇಖಕರು: ನಿವೃತ್ತ ಹಿರಿಯ ಭೂ ವಿಜ್ಞಾನಿ*
*ಬೆಂಗಳೂರು – ೫೬೦ ೦೮೫*